Business of the House

Yesterday, there was a small error—I would say it was on my part. One list of Members who participated in the Debate on behalf of the Congress Party appear to have been sent to the Chair when I was not here. That list missed my attention. That is why I have allowed a large number of Members to participate. I am not sorry; it is my duty to give chances to some of the Members who could not be denied chance, on occount of no fault of theirs. I therefore propose to give some more time for discussion to members on either side. But I must say that the time consumed by the opposition as against six hours, is already 9 hours and 20 minutes, *i e.*, more than nine hours.

Sri SIDDAIAH KASHIMATH (Shirahatti).—There were no members on the other side to speak.

Mr. SPEAKER.—They say there were so many who were anxious to speak, but they were not called. I will try to reconcile as much as possible.

Mmeber's Representation

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ರೂಲ್ 63ರ ಪ್ರಕಾರ ಕಾಲಿಂಗ್ ಅಟೆನ್‌ಶನ್ ನೋಟೀಸು ಕೊಡುವ ಅಧಿಕಾರ ಸದಸ್ಯರಿಗೆ ಕೊಟ್ಟಿದ್ದೀರಿ. ನಾನು ಒಂದು ಕಾಲಿಂಗ್ ಅಟೆನ್‌ಶನ್ ನೋಟೀಸು ಕಳಿಸಿದ್ದೆ. ತಾವು ಅದನ್ನು......

Mr. SPEAKER.—I have disallowed it and I am not going to discuss it now. There is no time for discussion.

ಶ್ರೀ ಎಸ್. ಗೋಪಾಲಗೌಡ.—ಆದರೆ ಅದನ್ನು ಡಿಸ್ಕಸ್ ಮಾಡುವುದು ಯಾವಾಗ, ಸ್ವಾಮಿ ? ನಾಳೆ ಮಾಡೋಣವೇ ?

Mr. SPEAKER.—Order, order. There is so much pressure on time. I will allow Sri Gopala Gowda tomorrow. If he wants he may raise it tomorrow.

BUDGET ESTIMATES FOR 1966-67—GENERAL DISCUSSION

(Debate continued).

†ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಮಾನ್ಯ ಅಧ್ಯಕ್ಷರೆ, ಈ ವರ್ಷದ ಅಂದಾಜು ಪತ್ರಿಕೆಯ ಚರ್ಚೆಯಲ್ಲಿ ಭಾಗವಹಿಸುತ್ತಾ ದೇಶದ ಬಹು ಭಾಗದಲ್ಲಿ ಕ್ಷಾಮ ಒದಗಿದರೂ, ಸದ್ಯದಲ್ಲಿ ಆಹಾರದ ಬಿಕ್ಕಟ್ಟು ನಮ್ಮ ಮುಂದೆ ತಾಂಡವವಾಡುತ್ತ ಧಾರಣೆಗಳು ಬಹಳ ಏರಿದ್ದರೂ ಸಹ ಇಂಥ ಉತ್ತಮ ಬಡ್ಜೆಟ್ಟನ್ನು ಸಾದರು ಪಡಿಸಿದ್ದಕ್ಕಾಗಿ ಮಾನ್ಯ ಅರ್ಥ ಸಚಿವರನ್ನು ನಾನು ಅಭಿನಂದಿಸುತ್ತೇನೆ. ಇದಲ್ಲದೆ ಈ ವರ್ಷದ ಬಡ್ಜೆಟ್ಟು ಅನೇಕ ಅಂಶಗಳಿಂದ ಕೂಡಿದಂಥದ್ದು, ಸಾಧನ ಸಂಪತ್ತುಗಳ ವಿವರಗಳನ್ನು ಘೋಷಿಸಿದ್ದು ಅನೇಕ ದೃಷ್ಟಿಯಿಂದ ಇಲ್ಲಿಯ ಸದಸ್ಯರಿಗೆ ಎಲ್ಲ ರೀತಿಯ ವಿವರಗಳನ್ನು ಕೊಡುವಂಥ, ಮಾಹಿತಿಯನ್ನು ಉಳ್ಳಂಥ ಒಂದು ಬಜೆಟ್ಟನ್ನು ಅವರು ಸಾದರು ಪಡಿಸಿದ್ದಾ

(ಶ್ರೀ ಎ. ಎಸ್. ಪಾಟೀಲ್)

ಗಿದೆ. ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಈಗ ನಾವು ಮೂರನೆ ಪಂಚವಾರ್ಷಿಕ ಯೋಜನೆಯ ಕೊನೆಹಂತದಲ್ಲಿದ್ದರೂ ನಾವು ಸಾಧಿಸಿದ ಪ್ರಗತಿ ಅಷ್ಟೊಂದು ಸಮಾಧಾನಕರವಾಗಿಲ್ಲ ವೆಂದು ಹೇಳಬಹುದು. ಯಾವುದಾದರೂ ಒಂದು ಪಕ್ಷದ ತೊಂದರೆಯಿಂದಾಗಲೀ, ಅಥವಾ ಯಾವುದೇ ಕೊರತೆಯಿಂದಾಗಲೀ ಹೀಗೆ ಆಗಿದೆ ಎಂದು ಹೇಳುವುದಕ್ಕಿಂತ ನಮ್ಮ ದೇಶದೊಳಗೆ ಈಗ ಏನು ಸ್ಥಿತಿ ಇದೆ, ನಾವು ಆ ಒಕ್ಕಲುತನದ ಹುಟ್ಟುವಳಿಯನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆದರೆ ಆ ಪ್ರಯತ್ನದಲ್ಲಿ ಹೆಚ್ಚು ಫಲಕಾರಿಯಾಗಿಲ್ಲ. ಇದಕ್ಕೆ ಅನೇಕ ಕಾರಣಗಳುಂಟು. ಮೊದಲನೆ ಯದು ನೀರಾವರಿ ಯೋಜನೆಗಳ ವ್ಯವಸ್ಥೆ ಅಷ್ಟು ಸುಗಮವಾಗಿ ಸಾಗಿಲ್ಲ. ಮುಖ್ಯವಾಗಿ ಹೇಳ ಬೇಕೆಂದರೆ, ಮಲಪ್ರಭಾ ಯೋಜನೆಯನ್ನು ತೆಗೆದುಕೊಂಡರೆ 1963ನೇ ಜುಲೈ ಮೂರನೆಯ ತಾರೀಖು ಈಗ ಮಹಾ ಪ್ರಧಾನಿಗಳಾಗಿರುವ ಶ್ರೀಮತಿ ಇಂದಿರಾ ಗಾಂಧಿಯವರು ಅದರ ಅಡಿ ಗಲ್ಲನ್ನು ಇಟ್ಟರು. ಇದಾಗಿ ಮೂರು ವರ್ಷಗಳಾದರೂ ಹೆಚ್ಚಿನ ಪ್ರಗತಿ ಅಲ್ಲಿ ಕಂಡು ಬಂದಿಲ್ಲ. ಇದಕ್ಕೆ ಕಾರಣ ಹಣದ ಕೊರತೆಯಾಗಿದೆ ಎನ್ನುವುದು ಒಂದು. ಮೂರನೆಯ ಪಂಚವಾರ್ಷಿಕ ಯೋಜ ನೆಯೊಳಗೆ ಮೂರು ಕೋಟಿ ರೂಪಾಯಿಗಳನ್ನು ಇದಕ್ಕೆ ಮೀಸಲಾಗಿಟ್ಟಿದ್ದರೂ ಸಹಿತ ಆ ಹಣ ಸಹಿತ ಖರ್ಚು ಮಾಡದ ಪರಿಸ್ಥಿತಿ ಬಂದಿದೆ. ಇದಕ್ಕೆ ಅನೇಕ ತಾಂತ್ರಿಕ ತೊಂದರೆಗಳಿರಬಹುದು ಅಥವಾ ಹಣಕಾಸಿನ ತೊಂದರೆಯೂ ಇದರ ಪೈಕಿ ಒಂದು ಕಾರಣ ಎಂದು ನನಗನ್ನಿಸುತ್ತದೆ. ಇದರ ವಿಚಾರ ಕುರಿತು ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಭೇಟಿಯಾಗಿ ತೀವ್ರವಾಗಿ ಹಣ ಒದಗಿಸಿಕೊಡಿ ಎಂದು ಶ್ರೀ ಕೆ. ಎಲ್. ರಾವ್ ಅವರಲ್ಲಿ ವಿನಂತಿ ಮಾಡಿಕೊಂಡೆವು. ಆ ಪ್ರಕಾರ ಹೆಚ್ಚು ಹಣ ಕೊಡಲಿಕ್ಕೆ ಒಪ್ಪಿಗೆಯನ್ನು ಕೊಟ್ಟರೂ ಇವತ್ತಿನವರೆಗೂ ಸಹ ಹೆಚ್ಚಿನ ಹಣದ ವ್ಯವಸ್ಥೆಯಾಗಿಲ್ಲ. ಈ ವರ್ಷ ಮಲಪ್ರಭಾ ಯೋಜನೆಗೆ 70 ಲಕ್ಷ ರೂಪಾಯಿ ಇಟ್ಟಿದ್ದು ಇದರಿಂದ ಹೆಚ್ಚಿನ ಕೆಲಸಗಳು ಆಗಲಿಕ್ಕೆ ಶಕ್ಯವಿಲ್ಲ. ಆ ಭಾಗದಲ್ಲಿ ಒಂದು ಗುಡ್ಡದಲ್ಲಿ ಮೂರು ಮೈಲು ಟನಲ್ ಕೆಲಸ ಆಗಬೇಕಾಗಿದೆ. ಇದಕ್ಕೆ ಸಹಿತ ಹಣದ ವ್ಯವಸ್ಥೆ ಆಗಬೇಕು. ಕಂಟ್ರಾಕ್ಟ್‌ಗೆ ತೆಗೆದುಕೊಂಡು ಕೆಲಸ ಮಾಡುತ್ತಿರುವ ವರಿಗೆ ಹಣದ ವ್ಯವಸ್ಥೆ ಇಲ್ಲದೆ ಆ ಕೆಲಸ ಸರಿಯಾಗಿ ನಡೆದಿಲ್ಲ. ಅದು ಸುಗಮವಾಗಿ ಸಾಗಬೇಕಾದರೆ ಮತ್ತು ತೀವ್ರಗತಿಯಿಂದ ನಡೆಯಬೇಕಾದರೆ ಹಣದ ವ್ಯವಸ್ಥೆ ಇಲ್ಲದೆ ನಡೆಯುವಂತಿಲ್ಲ. ಇದೂ ಅಲ್ಲದೆ ಡ್ಯಾಮ್ ಕೆಲಸ ಏನು ನಡೆದಿದೆ ಆ ಕಂಟ್ರಾಕ್ಟರು ಸಹಿತ ಅಲ್ಲಿಂದ ಬಿಟ್ಟು ಹೋದ ಸುದ್ದಿ ಕೇಳುತ್ತಿದ್ದೇವೆ. ಮಲಪ್ರಭಾ ಯೋಜನೆ ಮುಗಿಯಲಿಕ್ಕೆ 20-22 ಕೋಟಿ ರೂಪಾಯಿ ಬೇಕು. ಇದನ್ನು ಮುಗಿಸಲು ಮೂರು ಕೋಟಿ ರೂಪಾಯಿಗಳನ್ನು ಮೂರನೆ ಯೋಜನೆಯಲ್ಲಿ ಮೀಸಲಾಗಿ ಟ್ಟಿದ್ದಾರೆ. ಈ ಪ್ರಕಾರದಿಂದ ಹಣ ಮೀಸಲಿಡುತ್ತ ಬಂದರೆ ಏಳು ಪಂಚವಾರ್ಷಿಕ ಯೋಜನೆಗಳ ಅಂತ್ಯದಲ್ಲಿ ಇದು ಮುಗಿಯುವ ಹಾಗೆ ಕಾಣಿಸುತ್ತದೆ. ನಮ್ಮ ರಾಜ್ಯದ ನೀರಾವರಿ ಪ್ರದೇಶ ಸೇಕಡ 8.4 ಎಂದು ಅಂಕಿ ಸಂಖ್ಯೆಗಳಿಂದ ತಿಳಿದು ಬಂತು. ನೀರಾವರಿಯನ್ನು ಹೆಚ್ಚು ಮಾಡಬೇಕಾದರೆ ಹೆಚ್ಚಿಗೆ ಹಣವನ್ನು ಅದಕ್ಕೆ ಕೊಟ್ಟು ತೀವ್ರಗತಿಯಿಂದ ಮುಗಿಸಲಿಕ್ಕೆ ಪ್ರಯತ್ನ ಮಾಡಿದರೆ ನಮ್ಮ ದೇಶದ ಅಭಿವೃದ್ಧಿಯಾಗಿ, ಆಹಾರದ ಕೊರತೆಯನ್ನು ನೀಗಲಿಕ್ಕೆ ಒಂದು ಮಾರ್ಗವಾಗುತ್ತದೆ. ಮಲ ಪ್ರಭಾ ಯೋಜನೆ ಬಹಳ ಮಹತ್ವದ್ದಿದೆ. ಇದು ಬರಗಾಲ ಪೀಡಿತ ಪ್ರದೇಶ ಮತ್ತು ಉತ್ತಮ ಫಲಪ್ರದ ವಾದ ಪ್ರದೇಶ. ಇಲ್ಲಿ ಉತ್ತಮವಾದ ಗೋಧಿ ಬೆಳೆಯುತ್ತದೆ. ಬ್ಲಾಕ್‌ಕಾಟನ್ ಸಾಯಿಲ್ ಇದ್ದು ಅಗದಿ ಅತ್ಯುತ್ತಮವಾದ ಭೂಮಿಯಾಗಿ, ಇದಕ್ಕೆ ತಕ್ಕ ನೀರಾವರಿ ಸಿಕ್ಕಿದಲ್ಲ ಬೇಕಾದಷ್ಟು ಕಾಳಿನ ಹುಟ್ಟುವಳಿಯಾಗಬಹುದು. ಧಾರವಾಡ ಜಿಲ್ಲೆಯಲ್ಲಿ ಯಾವ ನೀರಾವರಿ ಯೋಜನೆಗಳೂ ಇಲ್ಲ. ಅಂಥದ್ದರಲ್ಲಿ ಮಲಪ್ರಭಾ ಯೋಜನೆಯನ್ನು ತೆಗೆದುಕೊಂಡಿದ್ದು ಇಷ್ಟು ವಿಳಂಬ ಮಾಡಿಕೊಂಡು ಹೋಗುವುದರಿಂದ ಜನರಿಗೆ ಏನು ಕಲ್ಪನೆಯಾಗಿದೆ ಎಂದರೆ, ಬರಗಾಲಪೀಡಿತರಾದವರು ಅದೇ ರೀತಿ ಸಾಯುತ್ತೇವೆಯೋ ಏನೋ ಎನ್ನುವ ವಿಚಾರ ಅವರ ಮುಂದೆ ಬಂದಿದೆ. ಆದ್ದರಿಂದ ಸಾಕಷ್ಟು ಹಣವನ್ನು ಪೂರೈಸಿ ಈ ಕಾರ್ಯವನ್ನು ಮಾಡುವುದು ಅತಿ ಜರೂರಾಗಿದೆ.

ನಮ್ಮ ಹಳ್ಳಿಗಳಲ್ಲಿ ಒಕ್ಕಲುತನ ಬಹಳ ಕನಿಷ್ಠ ಸ್ಥಿತಿಯಲ್ಲಿರುವುದಕ್ಕೆ ಕಾರಣವೇನು ಎಂದರೆ ನೀರಾವರಿ ವ್ಯವಸ್ಥೆ ಇಲ್ಲದಿರುವುದು ಎಂದು ಹೇಳಬೇಕಾಗುತ್ತದೆ. ಈಗ ಹೈಬ್ರಿಡ್ ಜೋಳವನ್ನು ಬೆಳೆಯಲಿಕ್ಕೆ ಎಷ್ಟೋ ರೈತರು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಅವರಿಗೆ ಬೀಜ ಸಹಿತ ಸಿಕ್ಕದ ಹಾಗೆ ಆಗಿದೆ. ಇಂಥ ಹೈಬ್ರಿಡ್ ಬೀಜವನ್ನು ಹಾಕಿದ ಮೇಲೆ ಅದಕ್ಕೆ ನೀರಾವರಿ ವ್ಯವಸ್ಥೆ ಇಲ್ಲದೆ ಇದ್ದರೆ ಅದನ್ನು ಬಿತ್ತು ಪ್ರಯೋಜನವಾದರೂ ಏನು ? ಅನೇಕ ಹಳ್ಳಿಗಳಗುಂಟ ಹೈಬ್ರಿಡ್ ಜೋಳ ವನ್ನು ಹಾಕಿ, ನೀರಿನ ವ್ಯವಸ್ಥೆ ಇಲ್ಲದೆ ಅದೆಲ್ಲ ಪೂರಾ ಒಣಗಿ ಹೋಗಿದೆ. ಪಂಪ್‌ಗಳಿಂದ ನೀರನ್ನು ಹೊಡೆಯಲು ಪ್ರಯತ್ನ ಮಾಡಿದರು. ಅದೂ ಕೂಡ ಸಫಲವಾಗದೆ ರೈತರಿಗೆ ಬಹಳ ಲುಕ್ಸಾನಾ ಗಿದೆ ಎನ್ನುವ ಮಾತನ್ನು ತಿಳಿಸುತ್ತಿದ್ದೇನೆ.

ಏನು ಹಣವನ್ನು ಇದರಲ್ಲಿ ಮೀಸಲಾಗಿಟ್ಟಿದ್ದೀರಿ ಅದೆಲ್ಲ ಔದ್ಯೋಗೀಕರಣ ಇಂಥ ಖಾತೆಗಳಿಗೆ ಮುಟ್ಟುವಂತಿದೆಯೇ ಹೊರತು ಅಭಿವೃದ್ಧಿ ಯೋಜನೆಗಳ ಕಡೆಗೆ ಹೆಚ್ಚು ಗಮನ ಕೊಟ್ಟಂತೆ ಇಲ್ಲ. ಗ್ರಾಮಾಂತರ ಅಭಿವೃದ್ಧಿ ಮತ್ತು ಗ್ರಾಮಾಂತರಗಳಲ್ಲಿ ಆಗಬೇಕಾದ ಕೆಲಸಗಳಿಗೆ ಸಾಕಷ್ಟು ಹಣ ಬೇಕು ಎಂದು ಕೇಳುವಾಗ ಆ ಕೆಲಸಗಳಿಗೆ ಹಣವನ್ನು ಒದಗಿಸುವುದು ಅತ್ಯಾವಶ್ಯಕ ಎಂದು ನನಗನ್ನಿಸುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಜನರಿಗೆ ಮನೆಗಳಿಲ್ಲ. ಗ್ರಾಮಾಭಿವೃದ್ಧಿ ಎಂದರೆ ಗ್ರಾಮಗಳ ಬಡಾವಣೆ ಏನು ಆಗಬೇಕೋ ಅದು ಆಗದೆ ಹಾಗೆಯೇ ಇದೆ. ರಾಜ್ಯಗಳ ಪುನರ್ವಿಂಗಡಣೆಯಾದ ನಂತರ ಈ 10-12 ವರ್ಷಗಳಲ್ಲಿ ಗ್ರಾಮ ಬಡಾವಣೆಯ ಕಡೆಗೆ ಹೆಚ್ಚು ಲಕ್ಷ್ಯ ಕೊಟ್ಟಿಲ್ಲ. ನಾವು ವಿಚಾರ ಮಾಡಿದರೆ ಅನೇಕ ಊರುಗಳಲ್ಲಿ ಸೈಟುಗಳಿಲ್ಲದಂತೆ ಆಗಿದೆ. ಎಷ್ಟೋ ಕುಟುಂಬಗಳು ಮನೆ ಇಲ್ಲದೆ ಹೊರಗೆ ಇರುವ ಪ್ರಸಂಗವಿದೆ; ಒಂದು ಖೋಲಿ, ಎರಡು ಖೋಲಿ ಇರುವ ಕಡೆ 20 ಜನ ಒಕ್ಕಲುತನ ಮಾಡುವ ಪ್ರಸಂಗವನ್ನು ಹಳ್ಳಿಯ ಕಡೆ ನೋಡುತ್ತೇವೆ. ಹೌಸಿಂಗ್ ಅಕಾಮೋಡೇಷನ್ ಬಗ್ಗೆ ಸಾಕಷ್ಟು ಲಕ್ಷ್ಯ ಕೊಟ್ಟು ಗ್ರಾಮ ಬಡಾವಣೆಗೆ ಸಂಬಂಧಪಟ್ಟ ಅಕ್ವಿಜಿಷನ್ ಪೇಪರ್ಸ್ ಏನಿವೆ ಅವುಗಳನ್ನು ತೀವ್ರವಾಗಿ ಪರಿಹರಿಸಿ ಗ್ರಾಮಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕು.

ಗ್ರಾಮಗಳಿಗೆ ಹೋಗಬೇಕಾದರೆ ಸರಿಯಾದ ರಸ್ತೆಗಳಿಲ್ಲ. ಈ ತುಟ್ಟಿ ದಿನಗಳಲ್ಲಿ ಎಷ್ಟೋ ರಸ್ತೆಗಳನ್ನು ಮಾಡುವುದಕ್ಕೆ ಖರ್ಚು ಬೀಳುತ್ತದೆ ಎಂದು ಪಟ್ಟಣಗಳಿಗೆ ಹೋಗುವ ರಸ್ತೆಗಳ ವ್ಯವಸ್ಥೆ ಚೆನ್ನಾಗಿ ಆಗುತ್ತಿದೆ. ಸಿಮೆಂಟ್ ರಸ್ತೆ ಆಗಬೇಕು, ಎಲ್ಲ ರೀತಿಯಲ್ಲಿ ಉತ್ತಮ ವ್ಯವಸ್ಥೆಯ ರಸ್ತೆಗಳನ್ನು ಮಾಡುತ್ತಿದ್ದಾರೆ. ಹಳ್ಳಿಯ ರಸ್ತೆ ಕಡೆಗೂ ಸ್ವಲ್ಪ ಲಕ್ಷ್ಯ ಹಾಕಿ, ಮುತುವರ್ಜಿಯಿಂದ ಆ ಕೆಲಸಗಳನ್ನು ಮಾಡಿಕೊಡಬೇಕು. ಮಳೆಗಾಲದೊಳಗೆ ಹಳ್ಳಿಗಳಿಗೆ ಸಂಪರ್ಕವಿಲ್ಲದೆ ಇರುವುದು ತಮಗೂ ಗೊತ್ತಿದೆ. ಈ ದೃಷ್ಟಿಯಿಂದ ಸಾಕಷ್ಟು ಹಣವನ್ನು ಒದಗಿಸುವುದು ಸರಿ ಎಂದು ನನಗನ್ನಿಸುತ್ತದೆ.

2-00 P.M.

ಇನ್ನು ಕುಡಿಯುವ ನೀರಿನ ವ್ಯವಸ್ಥೆ ನೋಡಿದರೆ ಬಹಳ ಚಿಂತಾಜನಕ ಪರಿಸ್ಥಿತಿ ಇದೆ. ನಮ್ಮ ಕಡೆಯಂತೂ ನೋಡಿದರೆ ಸುಮಾರು ಐದಾರು ಮೈಲಿಗಳಲ್ಲಿರತಕ್ಕ ಯಾವುದಾದರೂ ಒಂದು ಕೆರೆಯೊಳಗೆ ನೀರೇನಾದರೂ ಇದ್ದರೆ ಬಡವರು ಕೊಡಗಳನ್ನು ಹೊತ್ತುಕೊಂಡು ಅಲ್ಲಿಂದ ನೀರನ್ನು ತರುವಂತಹ ದೃಶ್ಯವನ್ನು ನೋಡಿದರೆ ಎಷ್ಟರಮಟ್ಟಿಗೆ ಅಲ್ಲಿ ಚಿಂತಾಜನಕ ಪರಿಸ್ಥಿತಿ ಇದೆಯೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಕುಡಿಯಲಿಕ್ಕೆ ಸಾಕಷ್ಟು ನೀರೇ ಅಲ್ಲಿಲ್ಲ. ಆದ್ದರಿಂದ ಕುಡಿಯುವ ನೀರಿನ ಬಾವಿಗಳನ್ನು ನಿರ್ಮಾಣ ಮಾಡುವುದರಲ್ಲಿ ಸಾಕಷ್ಟು ಸರ್ಕಾರದವರು ಮುತುವರ್ಜಿ ವಹಿಸಬೇಕು. ಅದರ ಕಡೆಗೆ ಇವರು ಹೆಚ್ಚಿನ ಲಕ್ಷ್ಯವನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ವೈದ್ಯಕೀಯ ಸೌಲಭ್ಯಗಳ ಬಗ್ಗೆ ಹೇಳುವುದಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಈಗಿನ ಸನ್ನಿವೇಶದಲ್ಲಿ ಎಷ್ಟು ಬೇಕೋ ಅಷ್ಟು ವೈದ್ಯಕೀಯ ವ್ಯವಸ್ಥೆ ಇಲ್ಲ. ಸಾಮಾನ್ಯವಾಗಿ ಔಷಧೋಪಚಾರಗಳನ್ನು ನಡೆಸಬೇಕಾದರೆ ಸುಮಾರು ಹತ್ತಾರು ಮೈಲಿಗಳವರೆಗೂ ರೋಗಿಗಳು ಹೋಗಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೋ ಯಾವುದೋ ಒಂದು ಮೂಲೆಯಲ್ಲಿ ಅಥವಾ ಒಂದು ಜಾಗದಲ್ಲಿ ಒಂದು ದವಾಖಾನೆ ಇರುತ್ತದೆ. ಸುಮಾರು 16 ಸಾವಿರ ಜನಸಂಖ್ಯೆ ಇರತಕ್ಕಂಥ ಒಂದು ಗ್ರಾಮದಲ್ಲಿ ಕೇವಲ ಒಂದು ಸಣ್ಣ ವೈದ್ಯಕೀಯ ವ್ಯವಸ್ಥೆ ಇರುವುದು ಅದಷ್ಟು ಸರಿಯಾಗಿಲ್ಲ. ಆದ್ದರಿಂದ ಸರ್ಕಾರದವರು ಇದರ ಕಡೆಗೆ ಯೋಗ್ಯ ವ್ಯವಸ್ಥೆ ಮಾಡುವುದು ಜರೂರಿದೆ. ಈ ವ್ಯವಸ್ಥೆ ಸರಿಯಾಗಿಲ್ಲದೆ ಅನೇಕ ಕಡೆಗಳಲ್ಲಿ ಜನಗಳು ಬಹಳ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ.

ಇನ್ನು ಶಾಲೆಗಳ ಅಭಿವೃದ್ಧಿ ಬಗ್ಗೆ ಕೆಲವಾರು ವಿಷಯಗಳನ್ನು ಇಲ್ಲಿ ಹೇಳಿದ್ದಾರೆ. ಈ ಸಭೆಯಲ್ಲಿ ಇವರು ಹೇಳುವಷ್ಟು ಅಭಿವೃದ್ಧಿ ಶಾಲೆಗಳ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಆಗಿಲ್ಲವೆಂದು ನಾನು ಹೇಳುತ್ತೇನೆ. ಯಾವ ರೀತಿ ಅದು ಅಭಿವೃದ್ಧಿಯಾಗಿದೆ ಎಂಬುದೇನೂ ಒಡೆದು ಕಾಣುತ್ತಾ ಇಲ್ಲ. 50 ವರ್ಷಗಳ ಕೆಳಗೆ ಶಾಲೆಗಳ ಅಭಿವೃದ್ಧಿ ಹಳ್ಳಿಗಳಲ್ಲಿ ಹೇಗಿತ್ತು, ಅದರ ಬಗ್ಗೆ ಈಗಿನ ಪ್ರಗತಿಯನ್ನು ನೋಡಿದ್ದಾರೆ ಹಿಂದಿನದನ್ನು ಒಡೆದು ಕಾಣುವಂಥಾದ್ದೇನೂ ನಾನು ಇದುವರೆಗೆ ಕಂಡಿಲ್ಲ. ಶಾಲೆಗಳ ಕಟ್ಟಡಗಳನ್ನು ಹಿಂದೆ ಕಟ್ಟಬೇಕಾಗಿದ್ದರೆ ಸುಮಾರು 50 ವರ್ಷಗಳದು ಒಂದು ವರ್ಷದ ಬಜೆಟ್ಟಿನಲ್ಲಿ ಮಾಡುತ್ತಿದ್ದರು ಎಂಬುದನ್ನು ನಾನು ಕೇಳಿದ್ದೇನೆ. ಆದರೆ ಎಷ್ಟು ಶಾಲೆಗಳಿಗಾಗಿ ಇವರು ಇದುವರೆಗೆ ಕಟ್ಟಡಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ಮಾಣ ಮಾಡಿದ್ದಾರೆ ಮತ್ತು ಎಷ್ಟು ಜನ ಶಿಕ್ಷಕರಿಗೆ ಮನೆಗಳನ್ನು ಒದಗಿಸಿದ್ದಾರೆಂಬ ಬಗ್ಗೆ ನನಗೆ ಮಾನ್ಯ ಮಂತ್ರಿಗಳು ಅಂಕಿ ಅಂಶಗಳನ್ನು ಕೊಡಬೇಕು.

(ಶ್ರೀ ಎ. ಎಸ್. ಪಾಟೀಲ್)

ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳ ಉಪಾಧ್ಯಾಯರಿಗೆ ಹಾಗೂ ಶಿಕ್ಷಕರಿಗೆ ಮನೆಗಳನ್ನು ಏರ್ಪಾಡು ಮಾಡುವುದು ಸರ್ಕಾರದವರ ಜವಾಬ್ದಾರಿ. ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ಶಿಕ್ಷಕರು ಅಲ್ಲಿ ವಾಸಮಾಡಿಕೊಂಡು ಇರಲಿಕ್ಕೆ ತಕ್ಕ ಹಾಗೆ ಮನೆಗಳನ್ನು ಕಟ್ಟಿಸಿ ಕೊಡದೆ ಹೋದರೆ ಅವರು ಹೇಗೆ ಅಲ್ಲಿ ಪಾಠ ಕಲಿಸುತ್ತಾರೆ? ಅವರು ಅಲ್ಲಿ ಹೋಗುವುದಕ್ಕೆ ಮೊದಲೇ ಹಿಂದು ಮುಂದು ನೋಡುತ್ತಾರೆ. ಇನ್ನು ಈ ಸೌಕರ್ಯವಾದರೂ ಅವರಿಗೆ ಇಲ್ಲದಿದ್ದರೆ ಹೇಗೆ ? ಶಾಲಾ ಕಟ್ಟಡಗಳನ್ನು ಗ್ರಾಮಗಳಲ್ಲಿ ಸರ್ಕಾರದವರಿಂದ ಸಾಲವನ್ನಾದರೂ ತೆಗೆದುಕೊಂಡು ಕಟ್ಟುವ ವ್ಯವಸ್ಥೆ ಮಾಡಬೇಕು.

ಇನ್ನು ಗ್ರಾಮಾಂತರ ಪ್ರದೇಶಗಳ ವಿದ್ಯುತ್ ಸರಬರಾಜು ವಿಷಯದಲ್ಲಿ ಸರ್ಕಾರದವರು ಬಹಳ ವಾಗಿ ಗಮನವನ್ನು ಕೊಡುತ್ತಿಲ್ಲ. ಬೆಂಗಳೂರಿನಲ್ಲಿ ಅದರ ಸರಬರಾಜು ಜಾಸ್ತಿ ಇದೆ. ಹಳ್ಳಿಗಳ ಕಡೆ ವಿದ್ಯುತ್ ಪೂರೈಕೆ ಬಹಳ ಅಸಮಾಧಾನಕರವಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಆದ್ಯತೆ ಕೊಡಬೇಕು ಮತ್ತು ಹೆಚ್ಚು ಪ್ರಾಶಸ್ತ್ಯ ಕೊಡಬೇಕು.

ಇನ್ನು ನೀರಾವರಿ ಪಂಪುಸೆಟ್ಟುಗಳ ವಿಚಾರ. ಒಕ್ಕಲುತನದ ನೀರಾವರಿಗೆ ವಿದ್ಯುತ್ ಪೂರೈಕೆ ಮಾಡಿದರೆ ಸಾಕಷ್ಟು ಭೂಮಿಯಲ್ಲಿ ನೀರು ಉಣಿಸಲಿಕ್ಕೆ ಬಹಳ ಪ್ರಯೋಜನವಾಗುತ್ತದೆ. ಇತ್ತ ಕಡೆಗೆ ಸರ್ಕಾರದವರು ಲಕ್ಷ್ಯ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗಿದೆ. ವಿದ್ಯುತ್ ಸರಬರಾಜು ಜಾಸ್ತಿ ಇದ್ದರೆ ಏನಾದರೂ ಸಣ್ಣ ಸಣ್ಣ ಕೈಗಾರಿಕೆಗಳನ್ನು ಅಲ್ಲಿ ಸ್ಥಾಪಿಸಲು ಉಪಯೋಗ ವಾಗುತ್ತದೆ. ಸಾಧಾರಣವಾಗಿ ಹೆಚ್ಚು ಆಹಾರ ಸಾಮಗ್ರಿಗಳನ್ನು ಬೆಳೆಯಬಹುದು. ಅಲ್ಲಿನವರು ಸಾಕಷ್ಟು ಕೆಲಸ ಮಾಡುವುದಕ್ಕೆ ಸಹಕಾರಿಯಾಗುತ್ತದೆ. ಅಲ್ಲಿ ಒಂದು ಔದ್ಯೋಗೀಕರಣವನ್ನು ಮಾಡಿದರೆ ಅಲ್ಲಿನ ಜನಗಳು ಹೊಟ್ಟೆ ಹೊರೆದುಕೊಳ್ಳಲು ಒಂದು ಉಪಜೀವನವನ್ನು ಮಾಡಿ ಕೊಟ್ಟಂತಾಗುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಧಾರವಾಡ ಜಿಲ್ಲೆಯ 114 ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ.

ಶ್ರೀ ಎ. ಎಸ್. ಪಾಟೀಲ್.—ಒಟ್ಟಾರೆ ಅಲ್ಲಿ ಸಾವಿರ ಹಳ್ಳಿಗಳು ಇರಬಹುದು. ಆದರೂ ಅವುಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನು ಕೊಡಬೇಕಾದುದು ಸರ್ಕಾರದವರ ಪ್ರಥಮ ಕರ್ತವ್ಯವಾಗಿದೆ. ಇದಲ್ಲದೆ ಭೂಸುಧಾರಣೆಯ ಅಭಿವೃದ್ಧಿ ಕಾರ್ಯದಲ್ಲಿ ಮಣ್ಣಿನ ಸಂರಕ್ಷಣೆ ಸಾಕಷ್ಟು ಚೆನ್ನಾಗಿ ಆಗಿಲ್ಲ. ಸರ್ಕಾರದವರು ಇದಕ್ಕೆ ಆದ್ಯತೆ ಕೊಟ್ಟು ಸರಿಯಾದ ವ್ಯವಸ್ಥೆ ಮಾಡದ ಹೊರತು ವ್ಯವಸಾಯಾಭಿವೃದ್ಧಿ ಯಾಗಲಾರದು. ವ್ಯವಸಾಯ ಇಲಾಖೆ ಮಾಡುವಂತಹ ಕೆಲಸಕಾರ್ಯಗಳಲ್ಲಿ ಅದು ಒಂದು ಮಹತ್ವ ವಾದುದು. ಅದರ ಕಡೆಗೆ ಸರ್ಕಾರದವರು ಹೆಚ್ಚಿಗೆ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ. ಕೆಲವು ಭೂಮಿಯೊಳಗೆ ಭೂಸುಧಾರಣೆ ಯಾವ ರೀತಿಯಲ್ಲಿ ಆಗಬೇಕೆಂಬ ಬಗ್ಗೆ ವ್ಯವಸಾಯ ಇಲಾಖೆ ಚೆನ್ನಾಗಿ ಕೆಲಸ ಮಾಡಬೇಕು. ಏನೋ ಕಮ್ಯೂನಿಟಿ ಡೆವಲಪ್‌ಮೆಂಟ್ ಬಂದ ಮೇಲೆ ಹಳ್ಳಿ ಉತ್ತಮ ರೀತಿಯಲ್ಲಿ ವಿಕಾಸವಾಗಿದೆ ಎಂಬುದಾಗಿ ಸರ್ಕಾರದವರು ತಿಳಿದುಕೊಂಡು ಅನೇಕ ಭಾಷಣಗಳನ್ನು ಹೇಳಿದ್ದನ್ನು ನಾನು ಕೇಳಿದ್ದೇನೆ. ಅದನ್ನು ಸರ್ವೆ ಮಾಡಿರುವವರು ಸೇಕಡ 20ರಷ್ಟು ಮಾತ್ರ ಅದರಲ್ಲಿ ಯಶಸ್ವಿಯಾಗಿದೆ ಎಂದು ಹೇಳುತ್ತಿದ್ದಾರೆ. ಇನ್ನೂ ಹೆಚ್ಚು ಯಶಸ್ವಿಯಾಗುವುದಕ್ಕೆ ಸರ್ಕಾರದವರು ಯಾವ ತರಹ ಧೋರಣೆಯನ್ನು ಈ ವಿಚಾರದಲ್ಲಿ ವಹಿಸಬೇಕು ಎಂಬುದು ಮಹತ್ವದ ಮಾತು. ಮಣ್ಣಿನ ಸಂರಕ್ಷಣೆ ಫಲಪ್ರದವಾಗಿ ಭೂಮಿಯೊಳಗೆ ಆದ ಹೊರತು ಬೆಳೆ ಚೆನ್ನಾಗಿ ಆಗುವುದಿಲ್ಲ. ಹಿಂದೆ ಯಾವ ರೀತಿಯಲ್ಲಿ ಭೂಮಿಯೊಳಗೆ ಬೆಳೆಯಾಗುತ್ತಿತ್ತು, ಈಗ ಯಾವ ರೀತಿಯಲ್ಲಿ ಬೆಳೆಯಾಗು ತ್ತಿದೆ ಎಂಬುದನ್ನು ನಾವು ತುಲನ ಮಾಡಿ ನೋಡಿದರೆ ಸೇಕಡ 10ರಷ್ಟು ಮಣ್ಣಿನ ಸಾರ ಕಡಿಮೆ ಯಾಗಿರುವುದನ್ನು ನಾವು ಕಾಣಬಹುದು. ಭೂಮಿಯ ಮೇಲಿನ ಉತ್ತಮ ಫಲಪ್ರದವಾದ ಮಣ್ಣೆಲ್ಲವೂ ಸಮುದ್ರಕ್ಕೆ ಹೋಗಿ ಕೂಡಿದೆ, ಇಂಥಾದ್ದನ್ನು ತಡೆಗಟ್ಟಬೇಕಾದರೆ ನಮ್ಮ ಒಕ್ಕಲುತನ ಖಾತೆ ಹಾಗೂ ರೆವಿನ್ಯೂ ಖಾತೆ ಒಟ್ಟುಗೂಡಿ ಚೆನ್ನಾಗಿ ಕೆಲಸಮಾಡಬೇಕಾಗಿದೆ. ಏಕೆಂದರೆ ಭೂಮಿ ಯಲ್ಲಿರುವ ಸತ್ವಪೂರ್ಣವಾಗಿ ಹರಿದು ಹೋದಮೇಲೆ ನಮಗೆ ಇನ್ನು ಯಾವ ರೀತಿಯಲ್ಲಿ ಬೆಳೆ ಬರುತ್ತ ದೆಂಬುದನ್ನು ನಾವು ಯೋಚನೆ ಮಾಡಬೇಕು. ಆದ್ದರಿಂದ ಮಣ್ಣಿನ ಸಂರಕ್ಷಣೆಯ ಬಗ್ಗೆ ಜಾಗ್ರತಿ ಸರ್ಕಾರದವರು ವಹಿಸಬೇಕು. ಒಂದು ವ್ಯವಸ್ಥಿತರೂಪದಲ್ಲಿ ಕೆಲಸ ಮಾಡಬೇಕು. ಇಲ್ಲದಿದ್ದರೆ ನಮಗೆ ಆಹಾರೋತ್ಪತ್ತಿ ಕಡಮೆಯಾಗುವುದೇನೋ ಸಹಜ. ಈ ತಲೆನೋವು ಎಂದಿಗೂ ಹೋಗುವು

ದಿಲ್ಲ. ಹೆಚ್ಚು ಮಣ್ಣಿನ ಸಂರಕ್ಷಣೆ ಮಾಡಲೇಬೇಕು. ಕೆಲವು ಭೂಮಿ ಹಾಳಾಗಿ ಹೋಗಿರುವುದರಿಂದ ಅವುಗಳ ಅಭಿವೃದ್ಧಿ ಯಾವ ರೀತಿಯಲ್ಲಿ ಮಾಡಬೇಕೆಂಬುದು ಜರೂರು ಇದೆ.

ಇನ್ನು ಒಕ್ಕಲುತನ ಖಾತೆ ವಿಷಯವಾಗಿ ಹೇಳಬೇಕಾದರೆ ನನ್ನ ಮನಸ್ಸಿನಲ್ಲಿ ಒಂದು ರೀತಿಯ ಕಳವಳ ಪಡಬೇಕಾಗಿದೆ. ನಮ್ಮಲ್ಲಿ ಬೀಜಗಳ ಹಂಚಿಕೆ ವ್ಯವಸ್ಥೆ ಏನೇನೂ ಸಾಲದು. ಪ್ರಾಂತಗಳಲ್ಲಿ ಗೋಧಿ ಬೀಜವನ್ನು ತಯಾರುಮಾಡುವ ವ್ಯವಸ್ಥೆಯನ್ನೂ ಸಹ ಸರಿಯಾಗಿ ಮಾಡಿಲ್ಲ. ಸುಧಾರಿತ ಬೀಜಗಳನ್ನು ಕೊಡುವ ಒಂದು ಪದ್ಧತಿಯೇ ಹೋಯಿತು. ಅದರ ಬಗ್ಗೆ ಹೆಚ್ಚಿನ ಸಂಶೋಧನೆ ಮಾಡಿ ಸರಿಯಾಗಿ ಬೀಜ ತೆಗೆಯುವ ಕಾರ್ಯವನ್ನು ಒಕ್ಕಲುತನ ಖಾತೆಯೊಳಗೆ ಅಷ್ಟು ಸಮಾಧಾನಕರವಾಗಿ ಹಾಗೂ ಸಮರ್ಪಕವಾಗಿ ಆಗಲಿಲ್ಲವಲ್ಲಾ ಎಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ನಾನು ಗೋಧಿ ಬೆಳೆ ಬಗ್ಗೆ ಹೆಚ್ಚು ಲಕ್ಷ್ಯ ವಹಿಸಬೇಕೆಂದು ಹೇಳಬೇಕಾಗಿದೆ. ಏಕೆಂದರೆ ನಮ್ಮ ಭಾಗದಲ್ಲಿ ಗೋಧಿಯನ್ನು ಹೆಚ್ಚಿಗೆ ಬೆಳೆಯುತ್ತಾರೆ. ಸಾಧಾರಣವಾಗಿ ನವಲ್‌ಗುಂದ್, ನರಗುಂದ್ ಮತ್ತು ಹುಬ್ಬಳ್ಳಿಯ ಕೆಲವು ಭಾಗಗಳಲ್ಲಿ ಗೋಧಿ ಬೆಳೆ ಬೆಳೆದರೆ ಎಲ್ಲಾ ಪ್ರಾಂತಗಳಿಗೂ ಗೋಧಿಯನ್ನು ಕೊಡಬಹುದು. ಒಂದು ಬೆಳೆ ಬೆಳೆದರೆ ಒಂದು ಪ್ರಾಂತಕ್ಕೇ ಕೊಡಬಹುದು ಎಂಬುದಾಗಿ ನಾನು ಹೇಳುತ್ತೇನೆ. ಆದರೆ ಇತ್ತೀಚೆಗೆ ಗೋಧಿ ಬೀಜವೇ ಹಾಳಾಗಿ ಹೋಗಿದೆ. ಅಲ್ಲಿ ಆ ಬೆಳೆ ರೋಗಕ್ಕೆ ತುತ್ತಾಗುತ್ತಿದೆ. ನಮ್ಮ ದೇಶದಲ್ಲಿ ಗೋಧಿ ಬೆಳೆಗೆ ಎಂದೂ ಇಲ್ಲದಂತಹ ಆ ಬೆಳೆಯೇ ನಾಶವಾಗುವಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರದವರು ಈ ಬೆಳೆಯ ಸಂಶೋಧನೆ ಸರಿಯಾಗಿ ಆಗುವಂತೆ ವ್ಯವಸ್ಥೆ ಮಾಡಬೇಕು. ಅದರ ಕಡೆಗೆ ಇವರ ಒಲವು ಹೆಚ್ಚು ಇಲ್ಲದಂತಾಗಿದೆ.

ಇನ್ನು ಗೊಬ್ಬರದ ಬಗ್ಗೆ ಹೇಳುವುದಾದರೆ, ರೈತರಿಗೆ ರಾಸಾಯನಿಕ ಗೊಬ್ಬರ ಸರಿಯಾಗಿ ಸಿಗುತ್ತಾ ಇಲ್ಲ. ಹೈಬ್ರಿಡ್ ಜೋಳವನ್ನು ಬೆಳೆಯಬೇಕು. ಅದಕ್ಕೆ ಹೆಚ್ಚಿಗೆ ಈ ರಾಸಾಯನಿಕ ಗೊಬ್ಬರವನ್ನು ಹಾಕದೇ ಹೋದರೆ ಖರ್ಚು ಮಾಡಿದ ಹಣವೆಲ್ಲಾ ನಷ್ಟವಾಗುತ್ತದೆ. ಸಾಮಾನ್ಯವಾಗಿ ಒಂದೊಂದು ಎಕರೆಗೆ ಸುಮಾರು 200-300 ರೂಪಾಯಿಗಳಷ್ಟು ಖರ್ಚು ಆಗುತ್ತದೆ. ಆ ರೀತಿ ಖರ್ಚು ಮಾಡಿರುವವರನ್ನೂ ಸಹ ನಾನು ನೋಡಿದ್ದೇನೆ. ಆ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿ ಆ ಬೆಳೆಯನ್ನು ಸಂರಕ್ಷಣೆ ಮಾಡಲು ಸರಿಯಾದ, ಔಷಧಿಯನ್ನು ಹಾಕದೇ ಇದ್ದರೆ ಇಡೀ ಬೆಳೆಯೇ ನಷ್ಟವಾಗತಕ್ಕ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ. ಆದ್ದರಿಂದ ಅದನ್ನು ಸರಬರಾಜು ಮಾಡಬೇಕು. ಮತ್ತು ಒಟ್ಟಿನಮೇಲೆ ಈಗ ಸರ್ಕಾರದವರು ಇದರೊಳಗೆ ಒಕ್ಕಲುತನ ಸುಧಾರಣೆ ಬಗ್ಗೆ ಕೆಲವೊಂದು ಕ್ರಮಗಳನ್ನ ತೆಗೆದುಕೊಂಡಿದ್ದಾರೆ. ಅದು ಸಂತೋಷದ ಸಂಗತಿ. ಇನ್ನೂ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಸುಮ್ಮನೆ ಟೀಕೆ ಮಾಡುವುದರಲ್ಲಿ ಅರ್ಥವಿಲ್ಲ. ಅನೇಕರು ಟೀಕೆ ಮಾಡಿದ್ದಾರೆ. ಅದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಇದರೊಳಗೆ ಇದ್ದುದ್ದರಲ್ಲಿ ಡೆಫಿಸಿಟ್ ಬಜೆಟ್ ಇಲ್ಲದಂತೆ ಸರ್‌ಪ್ಲಸ್ ಬಜೆಟ್ಟನ್ನು ಇಟ್ಟಿದ್ದಕ್ಕಾಗಿ ಮಾನ್ಯ ಆರ್ಥಿಕ ಸಚಿವರನ್ನು ಅಭಿನಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಪತಿಗಳೇ, ಮಾನ್ಯ ಹಣಕಾಸಿನ ಮಂತ್ರಿಗಳು 1966-67ನೇ ವರ್ಷಕ್ಕೆ ಈ ಸಭೆಯ ಮುಂದಿಟ್ಟಿರತಕ್ಕ ಆಯವ್ಯಯ ಪಟ್ಟಿಯನ್ನು ನಾನು ಅನುಮೋದಿಸುತ್ತೇನೆ. ಈ ಆಯವ್ಯಯ ವಿಷಯದಲ್ಲಿ ಮಾತನಾಡುತ್ತಾ ಕೆಲವು ಮಾನ್ಯ ಸ್ನೇಹಿತರು ಈ ಆಯವ್ಯಯ ಪಟ್ಟಿ ಆಶಾದಾಯಕವಾಗಿಲ್ಲ ಎಂದು ಹೇಳಿದರು. ಮಾನ್ಯ ಹಣಕಾಸಿನ ಮಂತ್ರಿಗಳು ಹೇಳಿದ ಹಾಗೆ ಆಯವ್ಯಯ ಪಟ್ಟಿಯಲ್ಲಿ ಉಳಿತಾಯ ಉಂಟಾಗಿದೆಯೋ ಅಥವಾ ಕೊರತೆ ಉಂಟಾಗಿದೆಯೋ ಎಂಬುದನ್ನು ಪರಿಶೀಲನೆ ಮಾಡಿದರೆ ನಮ್ಮ ಎದುರು ಪಕ್ಷದವರಿಗೆ ಅರ್ಥವಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಸ್ವಾಮಿ, ಪ್ರಾರಂಭದಲ್ಲಿ ಭಾರತದ ಜನತೆಯ ಐಕ್ಯತೆಗೆ ಮುಂದಾಗಿ ದಾರಿ ತೋರಿಸಿ ಅಮರರಾದಂತಹ ಶ್ರೀ ಲಾಲ್‌ಬಹದ್ದೂರ್‌ಶಾಸ್ತ್ರಿಗಳವರನ್ನು ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗವನ್ನು ಮಾಡಿದ ವೀರಯೋಧರನ್ನು ಪ್ರಶಂಸೆ ಮಾಡಿದ್ದಾರೆ. ಇದು ನಿಜವಾಗಿಯೂ ಶ್ಲಾಘನೀಯವಾದ ವಿಷಯ. ಈ ಆಯವ್ಯಯ ಪಟ್ಟಿಯಲ್ಲಿ ದೇಶದ ರಕ್ಷಣೆಗಾಗಿ ಸೈನಿಕರನ್ನು ತಯಾರುಮಾಡತಕ್ಕ ಸೈನಿಕ ಶಾಲೆಗೆ 15 ಲಕ್ಷ ರೂಪಾಯಿಗಳನ್ನೂ, ಸಣ್ಣ ನೌಕರರ ವಸತಿ ನಿರ್ಮಾಣಕ್ಕಾಗಿ 30 ಲಕ್ಷ ರೂಪಾಯಿಗಳನ್ನೂ, ಕಡಿಮೆ ಸಂಬಳವನ್ನು ಪಡೆಯತಕ್ಕ ನೌಕರರಿಗೆ ಐದು ರೂಪಾಯಿಗಳ ತುಟ್ಟಿಭತ್ಯವನ್ನು ಕೊಡಲು ಒಂದು ಕೋಟಿ ಐದು ಲಕ್ಷ ರೂಪಾಯಿಗಳನ್ನೂ, ಹರಿಜನರಿಗೆ ಮನೆಗಳನ್ನು ಕಟ್ಟಲು ಮೂರು ಕೋಟಿ ರೂಪಾಯಿಗಳನ್ನೂ ಒದಗಿಸಿದ್ದಾರೆ. ಸಣ್ಣ ನೀರಾವರಿಗೆ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಮಾನ್ಯ ಆರ್ಥಿಕ ಸಚಿವರು ಆಶಾದಾಯಕವಾದ ಬಜೆಟ್ಟನ್ನು ಈ ಸಭೆಯ ಮುಂದಿಟ್ಟಿದ್ದಾರೆ.

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಮೊದಲನೆಯದಾಗಿ ಈಗ ದೇಶದಲ್ಲಿ ಉಂಟಾಗಿರತಕ್ಕ ಆಹಾರದ ಅಭಾವ ಪರಿಸ್ಥಿತಿಯನ್ನು ಮೊದಲು ಪರಿಶೀಲನೆ ಮಾಡತಕ್ಕದ್ದು ಬಹಳ ಅಗತ್ಯವಾದ ವಿಷಯ. ಹೆಚ್ಚು ಸಮೃದ್ಧಿಯಾಗಿರತಕ್ಕ ದೇಶದಲ್ಲಿ ಇಷ್ಟು ಆಹಾರದ ಅಭಾವ ಈ ದಿವಸ ಉಂಟಾಗಿರತಕ್ಕದ್ದು ಅನಾವೃಷ್ಟಿಯಿಂದ ದೇಶದಲ್ಲಿ ಮಳೆಬಾರದೆ ಹೋದುದರಿಂದ ಬೆಳೆಗಳನ್ನು ಬೆಳೆಯುವುದಕ್ಕೆ ತುಂಬಾ ತೊಂದರೆಯಾಗಿದೆ. ಅದರಲ್ಲೂ ಮಲೆನಾಡಿನಲ್ಲಿಯೂ ಸಹ ಸರಿಯಾಗಿ ಮಳೆಬಾರದೆ ಬತ್ತದ ಗದ್ದೆಗಳು ಒಣಗಿಹೋಗಿ ಬೆಳೆ ನಷ್ಟವಾಗಿದೆ. ಆ ಸಂದರ್ಭದಲ್ಲಿ ಕೆಲವು ಕಡೆ ಬೆಳೆಯನ್ನು ಉಳಿಸುವುದಕ್ಕಾಗಿ ಸರ್ಕಾರದವರು ಕೂಡಲೇ ಪಂಪುಸೆಟ್ಟುಗಳನ್ನು ರೈತರಿಗೆ ಒದಗಿಸಿ ನೀರಿನ ಸೌಕರ್ಯವನ್ನು ಒದಗಿಸಿಕೊಟ್ಟು ಬೆಳೆಗಳನ್ನು ಉಳಿಸುವುದಕ್ಕೆ ಆಶ್ವಾಸನೆಯನ್ನು ಕೊಟ್ಟರು. ಆದರೆ ಸಕಾಲದಲ್ಲಿ ಪಂಪುಸೆಟ್ಟುಗಳು ಮತ್ತು ರೈತನಿಗೆ ಬರತಕ್ಕ ಇತರ ಸೌಲಭ್ಯಗಳು ತಕ್ಷಣದಲ್ಲಿ ದೊರೆಯಲಿಲ್ಲ. ಬೆಳೆಬಾರದೆ ಬಹಳ ತೊಂದರೆಯಾಗಿದೆ. ಇದನ್ನು ತಡೆದುಕೊಳ್ಳುವುದು ಬಹಳ ಕಷ್ಟವಾಗಿದೆ. ಇನ್ನು ಒಂದೆರಡು ತಿಂಗಳಲ್ಲಿ ಮಳೆ ಬಾರದೆ ಇದ್ದರೆ ಮುಂದಿನ ವರ್ಷ ಸಹ ರೈತರು ವ್ಯವಸಾಯ ಮಾಡಬೇಕಾದರೆ ದನಕರುಗಳು ದೇಶದಲ್ಲಿ ಒಂದೂ ಇರುವುದಿಲ್ಲ. ಇದ್ದಂತಹ ದನಕರುಗಳನ್ನು ಹರಾಜು ಮಾಡುವುದಲ್ಲದೆ ಕೆಲವು ಸತ್ತು ಹೋಗಿವೆ. ಕೆಲವು ಕಟುಕರ ವಶವಾಗಿವೆ. ಆದ್ದರಿಂದ ನಾಳೆ ಮುಂಗಾರು ಮಳೆ ಬಂದಾಗ ರೈತರಿಗೆ ವ್ಯವಸಾಯ ಮಾಡುವುದಕ್ಕೆ ಅನುಕೂಲವನ್ನು ಕಲ್ಪಿಸಿಕೊಡುವುದು ಸರ್ಕಾರದವರ ಮೊದಲನೆಯ ಕರ್ತವ್ಯ. ಮತ್ತು ಬಹಳ ಉಪಯುಕ್ತವಾದ ವಿಷಯ ಎಂದು ನಾನು ತಿಳಿದು ಕೊಂಡಿದ್ದೇನೆ.

ಇನ್ನು ನಮ್ಮ ದೇಶದಲ್ಲಿ ಸರ್ಕಾರದವರು ದೊಡ್ಡ ನೀರಾವರಿಗಳನ್ನು ಮಾಡಬೇಕೆಂದು ಆಸೆಯನ್ನು ಇಟ್ಟುಕೊಂಡಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಹೇಳಿದ ಹಾಗೆ ಹಿಂದೆ ಮೈಸೂರು ದೇಶ ನರೇಂದ್ರ ಸಂಸ್ಥಾನವಾಗಿತ್ತು. ಆಗ ಇಲ್ಲಿ ಅನೇಕ ಉದ್ಯಮಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರ ರಾಜ್ಯಗಳು ಔದ್ಯಮಿಕ ರಾಜ್ಯಗಳಾಗಿದ್ದಂತೆ ಹಿಂದಿನ ಮೈಸೂರು ರಾಜ್ಯವು ಅಂದಿನ ಸ್ಥಿತಿಯಲ್ಲೂ ಔದ್ಯಮಿಕ ರಾಜ್ಯವಾಗಿತ್ತೆಂದು ಹೇಳಲಾಗುವುದಿಲ್ಲ ಎಂದು ಹೇಳಿದ್ದಾರೆ. ಹಿಂದಿನ ವಿಷಯವನ್ನು ಪರಿಶೀಲನೆ ಮಾಡತಕ್ಕ ಅಪ್ಲೈಡ್ ಎಕನಾಮಿಕ್ಸ್ ಸಂಶೋಧನೆಯ ನ್ಯಾಷನಲ್ ಕೌನ್ಸಿಲ್ ಡೈರೆಕ್ಟರ್ ಜನರಲ್ಲರ ಅಭಿಪ್ರಾಯದಂತೆ ಮೈಸೂರು ರಾಜ್ಯವು ಹಿಂದೆ ರಾಜರ ಆಳ್ವಿಕೆಗೆ ಸೇರಿತ್ತು. ಆದ್ದರಿಂದ ಉತ್ತಮ ಆಡಳಿತ ಉದ್ದೇಶ ಪೂರ್ವಕವಾಗಿ ಅಭಿವೃದ್ಧಿಯ ಪರಂಪರೆಯನ್ನು ಹೊಂದಿಕೊಂಡು ಬಂದಿತ್ತು. ರಾಜ್ಯದ ಪುನರ್ ವಿಂಗಡಣೆಯ ತರುವಾಯದಲ್ಲಿ ಅದರೊಂದಿಗೆ ಹೈದರಾಬಾದು ಮತ್ತು ಮುಂಬೈ ರಾಜ್ಯಗಳ ಕೆಲವು ಭಾಗಗಳು ಸೇರಿಕೊಂಡ ಪರಿಣಾಮವಾಗಿ ಅದರ ಆರ್ಥಿಕಸ್ಥಿತಿಯು ಸರಾಸರಿ ಎಲ್ಲಾ ರಂಗಗಳಲ್ಲೂ ಇಳಿಮುಖವಾಗಿದೆಯೆಂದೂ, ಆದಕ್ಕಾಗಿ ಕೇಂದ್ರದ ಸಹಾಯದ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಹದಿನೈದು ವರ್ಷ ಖರ್ಚು ಮಾಡಿ ಅದರಲ್ಲಿ 65 ಪರ್ಸೆಂಟ್ ವ್ಯವಸಾಯ ಕೈಗಾರಿಕೆ, ವಿದ್ಯುಚ್ಛಕ್ತಿಗೆ ಖರ್ಚು ಮಾಡಿ ದೃಢದಿಂದ ಇದನ್ನು ಸಾಧಿಸಿದರೆ ಮಾತ್ರ ಇದರ ಅಭಿವೃದ್ಧಿ ಸಾಧ್ಯ ಎಂದು ಅವರು ತಿಳಿಸಿದ್ದಾರೆ. ಆದುದರಿಂದ ಭಾರಿ ನೀರಾವರಿ ಯೋಜನೆಗೆ ಪಂಜಾಬಿನ ಭಕ್ರಾನಂಗಲ್ ಯೋಜನೆ, ಒರಿಸ್ಸಾದ ಹೀರಾಕುಡ್ ಯೋಜನೆ, ಆಂಧ್ರ ಪ್ರದೇಶದ ನಾಗಾರ್ಜುನ ಸಾಗರ ಯೋಜನೆಗಳಂತೆ ಮೈಸೂರು ರಾಜ್ಯದ ಕೃಷ್ಣಾ ಯೋಜನೆ ಮುಗಿಸಲು ಕೇಂದ್ರ ಸರ್ಕಾರಕ್ಕೆ ವಹಿಸಲು ತಿಳಿಸಬೇಕು. ಇಲ್ಲದೇ ಹೋದರೆ ಈ ಯೋಜನೆಯು ಯಶಸ್ವಿಯಾಗಲಾರದು. ಮತ್ತು ದೊಡ್ಡ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಕೇಂದ್ರ ಸರ್ಕಾರದಿಂದ ನೆರವು ಬಾರದೆ ಇದ್ದರೆ, ನಮ್ಮ ದೇಶದ ಉತ್ಪತ್ತಿಯಿಂದ ಅಂಥಾ ದೊಡ್ಡ ನೀರಾವರಿ ಕಾಮಗಾರಿಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ವಿಷಯವನ್ನು ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಇಲ್ಲದೇ ಹೋದರೆ ಈಗ ನಮ್ಮಲ್ಲಿ ಪ್ರಾರಂಭವಾಗಿರತಕ್ಕ ಯೋಜನೆಗಳು ಮುಗಿಯುವುದಿಲ್ಲ. ಸಣ್ಣ ನೀರಾವರಿ ಕಾಮಗಾರಿಗಳನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಆಹಾರದ ವಿಷಯದಲ್ಲಿ ಹೇಳಬೇಕಾದರೆ, ನೀರಾವರಿ ಕಾಮಗಾರಿಗಳಲ್ಲಿ ತುಂಗಭದ್ರಾ ಅಣೆಕಟ್ಟನ್ನು ಕಟ್ಟಿದ್ದಾರೆ. ಅದರಲ್ಲಿ ನಾಲೆಗಳ ಮುಖಾಂತರ ನೀರು ಪಡೆದು ಎಷ್ಟು ಸಾವಿರ ಎಕರೆ ಜಮೀನು ಸಾಗುವಳಿಯಾಗುತ್ತದೆ, ಎಷ್ಟು ಸಾವಿರ ಟನ್ ಆಹಾರ ಪದಾರ್ಥ ನಮ್ಮ ದೇಶದ ಜನತೆಗೆ ಆದರಿಂದ ಸಿಕ್ಕುತ್ತದೆ ಎಂದು ತಜ್ಞರು ವಿಮರ್ಶೆ ಮಾಡುವುದು ಬಹಳ ಪ್ರಾಮುಖ್ಯವಾದುದು. ಯಾವ ಅಣೆಕಟ್ಟನ್ನು ಕಟ್ಟಿಸಿದರೆ ಸುಲಭವಾಗಿ ಬೆಳೆಯನ್ನು ಬೆಳೆಯಬಹುದೋ ಅಂಥಾದ್ದಕ್ಕೆ

ಪ್ರಾಶಸ್ತ್ಯ ಕೊಟ್ಟು ಅದನ್ನು ವಿಮರ್ಶೆ ಮಾಡಬೇಕು. ಅವನ್ನು ಆದಷ್ಟು ಜಾಗ್ರತೆ ಪ್ರಾರಂಭ ಮಾಡಬೇಕು. ಸಣ್ಣ ನೀರಾವರಿ ವಿಷಯದಲ್ಲಿ ಹೇಳುವುದಾದರೆ, ದೇಶದ ಪರಿಸ್ಥಿತಿ ಕೆಟ್ಟು ಹೋಗಿದೆ. ನಮ್ಮ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಮಂತ್ರಿಗಳು ಪ್ರವಾಸ ಮಾಡಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಪಟ್ಟಿ ಮಾಡಿಕೊಂಡು ಬಂದಿದ್ದರೋ ಅವುಗಳಿಗೆಲ್ಲಾ ಪ್ರೋತ್ಸಾಹ ಸಿಕ್ಕಿಲ್ಲ. ಅದರಲ್ಲಿ ಕೆಲವು ಕಾಮಗಾರಿಗಳನ್ನು ಮಾತ್ರ ಮಾಡಿದರೆ ಸಾಧ್ಯವಾಗುವುದಿಲ್ಲ. ದೇಶದ ಆಹಾರದ ಪರಿಸ್ಥಿತಿ ಉತ್ತಮವಾಗಬೇಕಾದರೆ ದೊಡ್ಡ ನೀರಾವರಿ ಕಾಮಗಾರಿಗಳಿಂದ ಅನೇಕ ವರ್ಷಗಳು ಹಿಡಿಯುತ್ತದೆ. ಆದ್ದರಿಂದ 50-100 ಎಕರೆ ಜಮೀನು ನೀರಾವರಿಯಾಗತಕ್ಕ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು ಅವುಗಳನ್ನು ಕಾರ್ಯಗತ ಮಾಡಿದರೆ ಜಾಗ್ರತೆ ಉತ್ತಮವಾದ ಬೆಳೆಯನ್ನು ಬೆಳೆಯಬಹುದು ಎಂಬುದನ್ನು ಸರ್ಕಾರದವರು ತಿಳಿದುಕೊಳ್ಳಬೇಕು. ಸರ್ಕಾರದವರು ರೈತರಿಂದ ಆಹಾರ ಪದಾರ್ಥಗಳನ್ನು ಕೊಳ್ಳುವಾಗ ಅದರ ಬೆಲೆಯನ್ನು ನಿಗದಿ ಮಾಡುವಾಗ ಸರಿಯಾಗಿ ವಿಮರ್ಶೆ ಮಾಡಬೇಕು. ರೈತರು ದೇಶದಲ್ಲಿ ಆಹಾರ ಪದಾರ್ಥಗಳನ್ನು ಬೆಳೆದು ಜನತೆಗೆ ಸಹಾಯ ಮಾಡುತ್ತಿದ್ದರು. ದೇಶದಲ್ಲಿ ಇವೊತ್ತು ಆಹಾರ ಧಾನ್ಯದ ವಿಷಯದಲ್ಲಿ ರೈತರಿಗೆ ಬಂದಿರತಕ್ಕ ತೊಂದರೆಯನ್ನು ಹೇಳುವುದು ಅನಿವಾರ್ಯವಾಗಿದೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ 4 ಆಣೆ ಬೆಳೆ ಕೂಡ ಆಗಿಲ್ಲ. ಕಡೂರು ಡಿಸ್ಟ್ರಿಕ್ಟ್‌ನಲ್ಲೂ ಬೆಳೆ ಆಗಿಲ್ಲ. ಕೆಲವು ಅಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ರೈತರು ಬೀಜಕ್ಕಾಗಿ ಇಟ್ಟಿದ್ದಂತಹ ಊಟಕ್ಕಾಗಿ ಮತ್ತು ಕೂಲಿ ಆಳುಗಳಿಗಾಗಿ ಇಟ್ಟಿದ್ದಂತಹ ಧಾನ್ಯವನ್ನು ಸ್ವಲ್ಪವೂ ಬಿಡದೆ ತಂದು ಡಿ. ಐ. ಆರ್. ಕಾನೂನು ಎಂತ ರೈತರನ್ನು ಹಿಂಸೆಗೆ ಗುರಿ ಮಾಡಿದ್ದಾರೆ. ಈ ಬಗ್ಗೆ ಸರ್ಕಾರದವರು ಕೂಡಲೇ ನಿಗಾ ತೆಗೆದುಕೊಳ್ಳಬೇಕು. ಬಲಾತ್ಕಾರದಿಂದ ರೈತರಿಗೆ ಬರುವ ತೊಂದರೆಗಳನ್ನು ನಿವಾರಣೆ ಮಾಡಬೇಕು. ಇಲ್ಲದೇ ಹೋದರೆ ರೈತ ಸಂಘಟನೆ ಮಾಡಿಕೊಂಡು ಅದರ ಬೆಂಬಲದಿಂದ ಅವನು ಸರ್ಕಾರಕ್ಕೆ ಸವಾಲು ಹಾಕುತ್ತಾನೆ. ಅದರಿಂದ ಅನಾಹುತವಾಗುತ್ತದೆ ಎಂದು ತಿಳಿದುಕೊಳ್ಳುವುದು ಬಹಳ ಪ್ರಾಮುಖ್ಯ. ಚಿಕ್ಕಮಗಳೂರು ಜಿಲ್ಲೆಯಲ್ಲದೆ ಇತರ ಕಡೆಗಳಲ್ಲಿಯೂ ಸಹ ಇದೇ ತರಹ ರೈತರಿಗೆ ಧಾನ್ಯವನ್ನು ವಸೂಲುಮಾಡುವುದರಲ್ಲಿ ಒತ್ತಾಯ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸಿದ್ದಾರೆ.

ಇನ್ನು ಹಣಕಾಸಿನ ಪರಿಸ್ಥಿತಿಯು ಉತ್ತಮವಾಗಬೇಕಾದರೆ ದೊಡ್ಡ ದೊಡ್ಡ ಕೈಗಾರಿಕೆಗಳು ಮತ್ತು ನೀರಾವರಿ ಕಾಮಗಾರಿಗಳು ಆಗಬೇಕು. ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳ ಪರಿಸ್ಥಿತಿ ಏನಾಗಿದೆ ಎನ್ನುವ ವಿಷಯದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ. ಸಿ. ಬಸಪ್ಪನವರು ಹೇಳಿದಂತೆ ಕೈಗಾರಿಕೆಗೆ ಕಚ್ಚಾ ಮಾಲಿನ ಪ್ರೋತ್ಸಾಹ ದೊರೆಯದೆ ಕೈಗಾರಿಕೋದ್ಯಮಿಗಳು ನಿರುತ್ಸಾಹಿಗಳಾಗಿದ್ದಾರೆ. ಈಗ ಉದಾಹರಣೆಗೆ ಹೇಳಬೇಕಾಗಿದ್ದರೆ, ಚಿಕ್ಕಮಗಳೂರಿನಲ್ಲಿ ಬಿ. ಎಂ. ಇಂಜಿನಿಯರಿಂಗ್ ವರ್ಕ್ಸ್ ಎಂತ ಇದೆ. ಅವರು ಕೋಲ್ ಸಿಕ್ಕದೆ, ಉಕ್ಕು ಸಿಕ್ಕದೆ ಬೆಂಗಳೂರಿಗೆ ಬಂದು ಬ್ಲಾಕ್ ಮಾರ್ಕೆಟ್ಟಿನಲ್ಲಿ ಸಾಮಾನುಗಳನ್ನು ಕೊಂಡು ಮಾಡಿಸಬಹುದೇನೋ ಬೆಂಗಳೂರಿಗೆ ಹೋಗೋಣ ಎನ್ನುತ್ತಿದ್ದರು. ಈ ವಿಚಾರವನ್ನು ನನ್ನ ಹತ್ತಿರ ಜಿಲ್ಲಾ ಮುಖ್ಯಾಧಿಕಾರಿಗಳು ಪ್ರಸ್ತಾಪ ಮಾಡಿದರು. ಹೀಗೆ ಕೈಗಾರಿಕೆಗಳನ್ನು ಮಾಡತಕ್ಕ ಜನಗಳಿಗೆ ಪ್ರೋತ್ಸಾಹ ಕೊಡತಕ್ಕ ಕಾಲದಲ್ಲಿ ಕೈಗಾರಿಕೆಗಳು ಹೇಗೆ ಅಭಿವೃದ್ಧಿಯಾಗುತ್ತವೆ ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಪಂಜಾಬಿನ ಮುಖ್ಯ ಮಂತ್ರಿಗಳಾಗಿದ್ದ ದಿವಂಗತ ಶ್ರೀ ಕೈರಾನ್ ಅವರು ಕೈಗಾರಿಕೆಯ ಅಭಿವೃದ್ಧಿಗಾಗಿ ಪ್ರೋತ್ಸಾಹ ಕೊಟ್ಟು ಅದನ್ನು ಒಳ್ಳೆಯ ಸ್ಥಿತಿಗೆ ತಂದರು. ನಮ್ಮ ದೇಶದಲ್ಲಿ ಕೈಗಾರಿಕೆಗಳು ಅಭಿವೃದ್ಧಿಗೆ ಬರಬೇಕಾದರೆ ಮದ್ರಾಸು ಮತ್ತು ಮಹಾರಾಷ್ಟ್ರದವರು ಎಷ್ಟು ಪ್ರೋತ್ಸಾಹವನ್ನು ಕೊಡುತ್ತಿದ್ದಾರೆಯೋ ಅದರಂತೆ ಇಲ್ಲಿಯೂ ಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕು. ಆ ರೀತಿ ಮಾಡುವುದಾದರೆ ಮೈಸೂರಿನ ಜನತೆ ಕೈಗಾರಿಕೆಯನ್ನು ಅವಲಂಬಿಸುತ್ತಾ ಹೋದರೆ ಕೈಗಾರಿಕೆಯಲ್ಲಿ ಅಭಿವೃದ್ಧಿ ಉಂಟಾಗಿ ಜನಗಳು ಜೀವನವನ್ನು ನಡೆಸುವುದಕ್ಕೆ ಅವಕಾಶವುಂಟಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾದ್ದು ಅಗತ್ಯ.

ಸ್ವಾಮಿ, ಬಡ್ಜೆಟ್ಟಿನಲ್ಲಿ ಅನೇಕ ವಿಧವಾದ ವಿಷಯಗಳನ್ನು ಅಳವಡಿಸಿದ್ದರೂ ನಮ್ಮ ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಯಾವ ವಿಷಯಗಳನ್ನೂ ಅಳವಡಿಸದೇ ಇರುವುದು ನಮ್ಮ ಭಾಗದ ಜನರಲ್ಲಿ ಅತೃಪ್ತಿಗೆ ಕಾರಣವಾಗಿದೆ. ಪ್ರತಿ ವರ್ಷವೂ ಮಲೆನಾಡಿನ ಅಭಿವೃದ್ಧಿಗಾಗಿ ಸ್ವಲ್ಪ ಹಣವನ್ನು ಇಡುತ್ತಿದ್ದರು. ಆದರೆ ಈ ಸಾರಿಯ ಬಡ್ಜೆಟ್ಟಿನಲ್ಲಿ ಮಲೆನಾಡಿನ ಅಭಿವೃದ್ಧಿಗಾಗಿ ನಮ್ಮ ಹಣಕಾಸಿನ ಸಚಿವರು ಯಾವ ಹಣವನ್ನೂ ಇಟ್ಟಿಲ್ಲ. ಅದರಲ್ಲೂ ನಮ್ಮ ಮಾನ್ಯ ಹಣಕಾಸಿನ ಸಚಿವರಿಗೆ ಮಲೆನಾಡಿನ ವಿಚಾರಗಳು ಚೆನ್ನಾಗಿ ಗೊತ್ತಿದ್ದರೂ ಅದೇನು ಕಾರಣವೋ ಏನೋ ಈ ಸಾರಿ ಮಲೆನಾಡಿಗಾಗಿ ಯಾವ ಹಣವನ್ನೂ ಇಟ್ಟಿಲ್ಲ. ಅಲ್ಲದೆ ನಮ್ಮ ಮಲೆನಾಡಿನ ಜನಜೀವನ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಹೇಗಿದೆ ಎನ್ನುವುದನ್ನು ನಮ್ಮ ಸಚಿವರು ಚೆನ್ನಾಗಿ ನೋಡಿ ಅರ್ಥಮಾಡಿಕೊಂಡಿದ್ದರೂ ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸದೇ ಇರುವುದು ತುಂಬಾ ವಿಷಾದವಾಗಿದೆ. ಇನ್ನು ಮುಂದಾದರೂ ಸರಕಾರ ಮಲೆನಾಡಿನ ಅಭಿವೃದ್ಧಿಗಾಗಿ ಹೆಚ್ಚು ಗಮನಕೊಡಬೇಕು.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎನ್. ಕೃಷ್ಣಸಿಂಗ್ (ಜಗಳೂರು).—ಮಾನ್ಯ ಅಧ್ಯಕ್ಷರೇ, 1966-67ನೇ ಇಸವಿಯ ಆಯವ್ಯಯವನ್ನು ನಾನು ಸ್ವಾಗತಿಸುತ್ತಾ ಸರಕಾರಕ್ಕೆ ಒಂದೆರಡು ಸಲಹೆಗಳನ್ನು ಸೂಚಿಸ ಬಯಸುತ್ತೇನೆ.

ವ್ಯವಸಾಯದ ಬಗ್ಗೆ ನಮ್ಮ ಸರಕಾರ ಈಗಾಗಲೇ ಸಹಾಯ ಸಲಕರಣೆಗಳನ್ನು ಜನಕ್ಕೆ ಒದಗಿಸಿ ಸಹಾಯ ಮಾಡುತ್ತಿದೆ. ಎಲ್ಲಕ್ಕಿಂತ ಸರಕಾರದ ಮುಖ್ಯ ಗುರಿ ರೈತರನ್ನು ಮುಂದಕ್ಕೆ ತರುವುದೇ ಆಗಿದೆ. ಸರಕಾರವು ರೈತರಿಗೆ ವ್ಯವಸಾಯ ಮಾಡಲು ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಒದಗಿಸುತ್ತಿದೆ. ಇದರಲ್ಲಿ ಮುಖ್ಯವಾಗಿ ಸಾಯಿಲ್ ಕನ್‌ಸರ್‌ವೇಷನ್ ಬಹಳ ಪ್ರಾಮುಖ್ಯ ಎಂದು ಈಗ ತೆಗೆದುಕೊಂಡಿದ್ದಾರೆ. ಇದಕ್ಕಾಗಿ ನಾನು ಅವರಿಗೆ ವ್ಯವಸಾಯದ ಇಲಾಖಾ ಮಂತ್ರಿಗಳಿಗೆ ಹಾಗೂ ಸಂಬಂಧಪಟ್ಟ ಪಾರ್ಲಿಮೆಂಟರಿ ಸೆಕ್ರೆಟರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರೆ ಅದು ಅತಿಶಯೋಕ್ತಿಯಾಗುವುದಿಲ್ಲ. ಇದರ ಜೊತೆಗೆ ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ಕೆಲವು ಕಡೆಗಳಲ್ಲಿ ಚೌಳು ಭೂಮಿಗಳಿವೆ. ಇದನ್ನು ಉತ್ತಮಪಡಿಸಲು ತಕ್ಕ ಕಾರ್ಯಕ್ರಮಗಳನ್ನು ವ್ಯವಸಾಯ ಇಲಾಖೆಯವರು ತೆಗೆದುಕೊಂಡರೆ ಜನರು ಇನ್ನೂ ಹೆಚ್ಚು ವ್ಯವಸಾಯ ಮಾಡಲು ಅನುಕೂಲವಾಗುತ್ತದೆ. ರಿಕ್ಲಮೇಷನ್ ಸಬ್‌ಸಿಡಿಯನ್ನು ಸೇಕಡಾ ಐವತ್ತರಷ್ಟು ಕೊಡಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಇಂತಹ ಕೇಂದ್ರಗಳನ್ನು ಒಂದೊಂದು ತಾಲ್ಲೂಕಿನಲ್ಲಿಯೂ ಇರುವಂತೆ ಮಾಡಿ ಅಲ್ಲಿ ಕೆಲಸಗಳನ್ನು ಕೈಗೊಳ್ಳಬೇಕು ಎಂದು ಸೂಚಿಸುತ್ತೇನೆ.

ಇನ್ನು ರೈತಾಪಿ ಜನಕ್ಕೆ ಒಳ್ಳೆಯ ಬೀಜಗಳನ್ನು ತರಿಸಿ ಸ್ವಲ್ಪ ಎಚ್ಚರಿಕೆಯಿಂದ ಹಂಚಬೇಕೆಂದು ಸೂಚಿಸುತ್ತೇನೆ. ಹಿಂದಿನ ಸಲ ಒಳ್ಳೆಯ ಬಿತ್ತವನ್ನು ಹಂಚದೇ ಇದ್ದುದರಿಂದ ಕೆಲವು ಕಡೆ ಬೆಳೆ ಹೆಚ್ಚಾಗಿ ಬರಲಿಲ್ಲ. ಆದುದರಿಂದ ಈಗ ಆಹಾರದ ಅಭಾವ ಹೆಚ್ಚಾಗಿರುವಾಗ ಒಳ್ಳೆಯ ಬೀಜವನ್ನು ಹಂಚುವ ಏರ್ಪಾಡು ಮಾಡಬೇಕು. ಅಲ್ಲದೆ ಈ ಸಾರಿ ಹಳ್ಳಿಗಳಲ್ಲ ಬೀಜಕ್ಕಾಗಿ ಇಟ್ಟ ದವಸವನ್ನೂ ಕೂಡ ಹಾಳುಮಾಡಿಕೊಂಡಿದ್ದಾರೆ. ಆದುದರಿಂದ ಸರಕಾರ ಮುಂಜಾಗರೂಕತೆಯಿಂದ ಉತ್ತಮ ವಾದ ಬೀಜ ಹಾಗೂ ಗೊಬ್ಬರಗಳನ್ನು ಸಕಾಲದಲ್ಲಿ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇಲ್ಲಿ ವ್ಯವಸಾಯದ ಕಾಲೇಜು ಎಂದು ಇದೆ. ಆ ಕಾಲೇಜಿನಲ್ಲಿ ಹಳ್ಳಿಯಿಂದ ಬರುವ ಮಕ್ಕಳಿಗೆ ಹೆಚ್ಚು ಸೀಟುಗಳನ್ನು ಕೊಡುವಂತೆ ಮಾಡಬೇಕು. ನನ್ನ ಸೂಚನೆ ಎಂದರೆ ಶೇಕಡಾ ಐವತ್ತರಷ್ಟು ಸೀಟುಗಳನ್ನು ಹಳ್ಳಿಗಾಡಿನ ಮಕ್ಕಳಿಗೇ ಇರುವಂತೆ ಮಾಡಬೇಕು. ಪಟ್ಟಣದಲ್ಲಿರುವ ಎಷ್ಟೋ ಜನರು ಭತ್ತದ ಪೈರನ್ನು ತೋರಿಸಿದಾಗ ಅದನ್ನು ತೊಗರಿ ಪೈರು ಎಂದು ಹೇಳುತ್ತಾರೆ. ಆದ್ದರಿಂದ ಹಳ್ಳಿ ಜನಕ್ಕೆ ವ್ಯವಸಾಯ ಚೆನ್ನಾಗಿ ತಿಳಿದಿರುವುದರಿಂದ ಹಳ್ಳಿಯ ಮಕ್ಕಳಿಗೆ ಹೆಚ್ಚು ಗಮನ ಕೊಟ್ಟು ಇಲ್ಲಿಗೆ ಸೇರಿಸಬೇಕೆಂದು ಸೂಚಿಸುತ್ತೇನೆ.

ಇನ್ನು ಪಶುವೈದ್ಯ ಶಾಲೆಗಳನ್ನು ಪ್ರತಿ 15 ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲಿ ಒಂದು ವೈದ್ಯಶಾಲೆ ಇರಬೇಕೆಂದು ಮಾಡಿದ್ದಾರೆ. ನಾನು ಸೂಚಿಸುವುದು ಸುಮಾರು 8000 ಜನ ಸಂಖ್ಯೆ ಇರುವ ಪ್ರದೇಶದಲ್ಲಿ ಒಂದು ಪಶು ವೈದ್ಯ ಶಾಲೆ ಇರುವಂತೆ ವ್ಯವಸ್ಥೆ ಮಾಡಬೇಕು ಮತ್ತು ಐದು ಮೈಲಿ ಫಾಸಲೆ ಇರುವ ಪ್ರದೇಶಗಳಲ್ಲಿ ಒಂದೊಂದು ಕೃತಕ ಗರ್ಭಧಾರಣಾ ಕೇಂದ್ರ ಇರುವಂತೆ ಮಾಡಬೇಕೆಂದು ಸರಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ.

ನೀರಾವರಿಯ ಬಗ್ಗೆ ಸರಕಾರವೇನೋ ವಿಪರೀತವಾದ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಬೇಕಾದಷ್ಟು ಸಬ್ಸಿಡಿ ಹಾಗೂ ಲೋನುಗಳು ಎಂದು ಕೊಟ್ಟು ಬಾವಿಗಳು ಹಾಗೂ ಸಣ್ಣ ಕೆರೆಗಳ ರೆಸ್ಟೋರೇಷನ್ನು ಕೆಲಸಗಳನ್ನು ಮಾಡಲು ಕ್ರಮ ತೆಗೆದುಕೊಂಡಿದ್ದಾರೆ ಮತ್ತು ಇದರ ಕೆಲಸಗಳು ಬಹಳ ಭರಾಟೆಯಿಂದಲೂ ನಡೆಯುತ್ತಿವೆ. ಆದರೆ ಇದನ್ನೆಲ್ಲಾ ನೋಡಿಕೊಳ್ಳಲು ಸರಿಯಾದ ಹಾಗೂ ಖಾಯಂ ಆದ ಸಿಬ್ಬಂದಿ ಇಲ್ಲ. ಇದಕ್ಕೆ ಖಾಯಂ ಆದ ಸಿಬ್ಬಂದಿಯನ್ನು ನೇಮಕ ಮಾಡ ಬೇಕು. ಎಲ್ಲೆಲ್ಲಿ ಫೀಡರ್ ಚಾನಲ್ಲುಗಳು ಆಗಬೇಕೋ ಅಲ್ಲೆಲ್ಲಾ ಬೇಗನೆ ಮಾಡಿಸಿಕೊಡಬೇಕೆಂದು ಸೂಚಿಸುತ್ತೇನೆ.

ಇನ್ನು ವಿದ್ಯಾ ಇಲಾಖೆಯ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಡುತ್ತೇನೆ. ಮಾಧ್ಯಮಿಕ ಹಾಗೂ ಪ್ರೈಮರಿ ವಿದ್ಯಾಭ್ಯಾಸದಲ್ಲಿ ಸ್ಟಾಂಡರ್ಡು ಬಹಳ ಕಡಿಮೆಯಾಗುತ್ತಾ ಹೋಗುತಿದೆ. ಇದರ ಉದ್ದೇಶಗಳೇನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅಲ್ಲದೆ ಈಗಿರುವ ಕರ್ರ್ಯಲಮ್ಮು ಗಳು ಹಾಗೂ ಪುಸ್ತಕಗಳಲ್ಲಿ ಮತ್ತು ಶಿಕ್ಷಣದ ಮಟ್ಟ ಕಡಮೆಯಾಗುತ್ತಾ ಬರುತ್ತಿದೆ. ಅಲ್ಲದೆ ನಮ್ಮಲ್ಲಿ ಕಾನ್ವೆಂಟು ಸ್ಕೂಲುಗಳು ಬಹಳ ಹೆಚ್ಚಾಗಿ ಶಿಕ್ಷಣವನ್ನು ಕೊಡುತ್ತಿವೆ. ಅದರಿಂದಾಗಿ ಅಲ್ಲಿ ನಮ್ಮ ಹಿಂದೂ ಸಂಸ್ಕೃತಿ ಸ್ವಲ್ಪ ಕಡಿಮೆಯಾಗುತ್ತಾ ಬರುತ್ತಿದೆ. ಆ ಸ್ಕೂಲುಗಳಲ್ಲಿ ಹೋಗುವ ಹೆಣ್ಣು ಹುಡುಗರು ಹೂ ಮುಡಿದು ಹೋಗುವಂತಿಲ್ಲ ಮತ್ತು ಹಣೆಯಲ್ಲಿ ಅಕ್ಷತೆ, ಕುಂಕುಮ ಹಾಗೂ ವಿಭೂತಿಗಳನ್ನು ಇಟ್ಟುಕೊಂಡು ಇಲ್ಲಿನ ಕಾನ್ವೆಂಟ್ ಸ್ಕೂಲುಗಳಿಗೆ ಹೋಗುವಂತಿಲ್ಲ. ಇದರಿಂದಾಗಿ ನಮ್ಮ ಸಂಸ್ಕೃತಿಯ ಮಟ್ಟ ಕಡಿಮೆಯಾಗುತ್ತದೆ. ಆದುದರಿಂದ ಮಾಧ್ಯಮ ಶಾಲೆಯಲ್ಲಿರುವ ಪುಸ್ತಕಗಳಲ್ಲಿ ಇನ್ನು ಮೇಲೆ ಸ್ವಲ್ಪ ಬಸವಣ್ಣನವರ ವಚನಗಳು, ಅಮರಕೋಶದ ಶಬ್ದಗಳು ಇತ್ಯಾದಿಗಳು ಇರುವಂತೆ ಮಾಡಿರುವ ಪುಸ್ತಕಗಳನ್ನು ಹೆಚ್ಚು ಹೆಚ್ಚಾಗಿ ನಮ್ಮ ಶಾಲೆಗಳಲ್ಲಿ ತಂದು ಪ್ರಚಾರ ಮಾಡಿದರೆ ಹಿಂದೂ ಸಂಸ್ಕೃತಿ ಉಳಿಯಲು ಅವಕಾಶವಾಗುತ್ತದೆ. ಇದರ ಬಗ್ಗೆ ಸರಕಾರ ತಕ್ಕ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಕಾರ್ಮಿಕರ ಬಗ್ಗೆ ಒಂದೆರಡು ಸೂಚನೆಗಳನ್ನು ಹೇಳುತ್ತೇನೆ. ಇದರ ಬಗ್ಗೆ ಸರಕಾರ ಸರಿಯಾದ ವ್ಯವಸ್ಥೆ ಮಾಡಿಲ್ಲ. ಕಾರ್ಮಿಕರು ವಾಸ ಮಾಡುವ ವಸತಿಗಳ ಬಗ್ಗೆ ಸರಿಯಾಗಿ ಮಾಡಿಲ್ಲ, ಕಾರ್ಮಿಕರು ವಾಸ ಮಾಡುವ ಸ್ಥಳಗಳು 'ಕಲಿಯುಗದ ನರಕದಂತೆ' ಇವೆ. ಉದಾಹರಣೆಯಾಗಿ ಹೇಳುವುದಾದರೆ, ನಮ್ಮ ದಾವಣಗೆರೆ ಕಾಟನ್ ಮಿಲ್ಲಿನಲ್ಲಿರುವ ಕಾರ್ಮಿಕರ ಕಾಲೋನಿಯಲ್ಲಿ ಹೋಗಿ ನೋಡಬಹುದು. ಈ ಕಾರ್ಮಿಕರು ವಾಸ ಮಾಡುವ ಸ್ಥಳದಲ್ಲಿ ದುರ್ವಾಸನೆಯಿಂದ ಕೂಡಿದ ನೀರು ಹತ್ತಿರದಲ್ಲಿಯೇ ಇದೆ ಮತ್ತು ನೀರಿನ ಆಸರೆಯೇ ಬೇಕೆಂದು ಇರುವ ಎಮ್ಮೆ ಕೂಡ ಹೋಗಿ ಇಂತಹ ನೀರಲ್ಲಿರಲು ಇಷ್ಟಪಡುವುದಿಲ್ಲ. ಇಷ್ಟು ಹೊಲಸಾದ ಸ್ಥಳಗಳಲ್ಲಿ ಇಲ್ಲಿನ ಕಾರ್ಮಿಕರು ವಾಸ ಮಾಡುತ್ತಿದ್ದಾರೆ, ಇದರ ಬಗ್ಗೆ ಸರಕಾರ ಇನ್ನೂ ಹೆಚ್ಚು ಸೌಕರ್ಯಗಳನ್ನು ಮಾಡಿಸಿಕೊಡಬೇಕೆಂದು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮತ್ತು ಧಾರ್ಮಿಕ ವಿಚಾರವಾಗಿ ಹೇಳುವಾಗ ನಮ್ಮಲ್ಲಿ ಅನೇಕ ಪುರಾತನವಾದ ದೇವಸ್ಥಾನಗಳು ಇವೆ. ಈ ದೇವಸ್ಥಾನಗಳನ್ನು ಹಿಂದೆ ಇದ್ದಂತಹ ಶಿಲ್ಪಿಗಳು ಕಟ್ಟಿದ್ದಾರೆ. ಕಲೆಗೆ ಹೆಸರಾದಂತಹ ಅನೇಕ ದೊಡ್ಡ ದೊಡ್ಡ ದೇವಸ್ಥಾನಗಳೂ ಇವೆ. ಇಂತಹ ಕೆಲವು ದೇವಸ್ಥಾನಗಳ ಕಟ್ಟಡಗಳು ಶಿಥಿಲವಾಗುತ್ತ ಹೋಗುತ್ತಿವೆ. ಇವೆಲ್ಲ ಮುಜರಾಯಿ ಇಲಾಖೆಗೆ ಸೇರಿವೆ. ಆದುದರಿಂದ ಶಿಥಿಲವಾಗಿರುವ ದೇವಸ್ಥಾನಗಳನ್ನು ಖಾಯಂ ಆಗಿ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಎಲ್ಲಕ್ಕಿಂತ ಮುಖ್ಯವಾದುದು ಎಂದರೆ ಹರಿಜನರ ಮತ್ತು ಗಿರಿಜನರ ಅಭಿವೃದ್ಧಿ ಬಗ್ಗೆ ಒಂದೆರಡು ಸಲಹೆಗಳನ್ನು ಸರಕಾರದ ಮುಂದೆ ಇಡಬೇಕಾಗಿದೆ. ಹರಿಜನರಿಗೆ ಸರಕಾರ ವ್ಯವಸಾಯ ಕ್ಕೋಸ್ಕರ ಅನೇಕ ಕಡೆಗಳಲ್ಲಿ ಜಮೀನನ್ನು ಕೊಟ್ಟಿದ್ದಾರೆ. ಅದರಲ್ಲೂ ಕೆಲವು ಕಡೆ ಬಗರು ಹುಕುಂನಲ್ಲಿ ಸಾಗುವಳಿ ಮಾಡುತ್ತಿರುವ ಹರಿಜನರೂ ಇದ್ದಾರೆ. ಇವರು ಮೂರು ವರ್ಷಕಾಲ ಹಾಗೆಯೇ ಸಾಗುವಳಿ ಮಾಡುತ್ತಿದ್ದರೆ ಅವರಿಗೆ ಸಾಗುವಳಿ ಚೀಟಿ ಕೊಡಬಹುದು ಎಂದು ಹಿಂದೆ ಸರಕಾರ ಆರ್ಡರು ಮಾಡಿದ್ದರು. ಹೀಗೆ ಸುಮಾರು 10-15-20 ವರ್ಷಗಳಿಂದಲೂ ಎಷ್ಟೋ ಹರಿಜನರು ಜಮೀನುಗಳನ್ನು ಬಗ್ಗರು ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಆದರೆ ಸರಕಾರ ಮೂರು ವರ್ಷಗಳ ಕಾಲ ಸಾಗುವಳಿ ಮಾಡಿದವರಿಗೆ ಸಾಗುವಳಿ ಚೀಟಿ ಕೊಡಬೇಕೆಂದಿದ್ದರೂ ಅದನ್ನು ಕೊಡದೆ ಇಲ್ಲಿನ ಎಷ್ಟೋ ಹರಿಜನರಿಗೆ ಅವರ ಜಮೀನುಗಳನ್ನು ಬಿಡಿಸಿ ತಕರಾರು ತಪ್ಪೆಗಳನ್ನು ಹಾಕಿ ತೊಂದರೆ ಕೊಡುತ್ತಿರುವುದು ಬಹಳ ದುಃಖದ ಸಂಗತಿ. ಇದರ ಬಗ್ಗೆ ಸರಕಾರ ಸೂಕ್ತ ವ್ಯವಸ್ಥೆ ಮಾಡಿಕೊಂಡು ಬೇಕೆಂದು ಹೇಳುತ್ತೇನೆ.

2-30 P.M.

ಉದ್ಯೋಗ ವಿಮೆಯವರು ಸೊಸೈಟಿಗಳಿಗೆ ಮೂರೂವರೆ ಕೋಟಿ ರೂಪಾಯಿ ಸಾಲ ಕೊಡುತ್ತಾರೆ, ಆ ರೀತಿ ಅವರಿಂದ ಛಾರ್ಜ್ ಬಂದಿದೆ ಎಂದು ಹೇಳಿದ್ದಾರೆ. ಅದು ನಿಜ, ಆದರೆ ಅದು ರಿಲೀಸ್ ಆಗಿ ಅದು ಅವರಿಗೆ ತಲುಪುವುದು ಯಾವಾಗ? ಇದನ್ನು ಆದಷ್ಟು ಜಾಗ್ರತೆ ಕಾರ್ಯ ರೂಪಕ್ಕೆ ತರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

(ಶ್ರೀ ಎಂ. ಎನ್. ಕೃಷ್ಣಸಿಂಗ್)

ಕೊನೆಯದಾಗಿ, ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಪಾದಯಾತ್ರೆ ಮಾಡಿ 20 ಲಕ್ಷ ರೂಪಾಯಿಗಳನ್ನು ಶೇಖರಿಸಿದ್ದಾರೆ. ಅದಕ್ಕಾಗಿ ಆರ್ಥಿಕ ಸಚಿವರು ಅವರಿಗೆ ಋಣಿಗಳಾಗಿದ್ದಾರೆ, ಅದರಲ್ಲಿ ನಾನೂ ಕೂಡ ಅವರ ಜೊತೆಯಲ್ಲಿ ಅದಕ್ಕಾಗಿ ಭಾಗಿಯಾಗಿದ್ದೇನೆ. ಇಷ್ಟನ್ನು ಹೇಳಿ ನಾನು ಮಾನ್ಯ ಆರ್ಥಿಕ ಸಚಿವರನ್ನು ಮತ್ತು ಅಧ್ಯಕ್ಷರನ್ನೂ ಸಹ ವಂದಿಸಿ ನನ್ನಮಾತನ್ನು ಮುಗಿಸು ತ್ತೇನೆ.

ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ (ಷಹಾಪೂರ್).—ಸ್ವಾಮಿ, ಅಧ್ಯಕ್ಷರೆ, ಇಂದು ನಮ್ಮ ಬೃಹತ್ ಭವನದ ಮುಂದೆ ನಮ್ಮ ಮೈಸೂರು ರಾಜ್ಯದ ಸುಂದರವಾದ ಹಣಕಾಸಿನ ಸಚಿವರು ಕೃತ್ರಿಮ ಸೌಂದರ್ಯದಿಂದ ಕೂಡಿರತಕ್ಕ ಒಂದು ಉಳಿತಾಯ ಮುಂಗಡ ಪತ್ರವನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಈ ಮುಂಗಡ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿದ್ದೇ ಆದರೆ ಈ ಮುಂಗಡ ಪತ್ರದಲ್ಲಿ ಮಾನ್ಯ ಹಣಕಾಸಿನ ಸಚಿವರು ಯಾವುದೋ ಈ ಲೆಕ್ಕದ ಚಾಕಚಕ್ಯತೆಯಿಂದಲೋ ಅಥವಾ ಯಾವುದೋ ಒಂದು ಯುಕ್ತಿಯಿಂದಲೋ ಎರಡು ಕೋಟಿ ಐವತ್ತು ಲಕ್ಷ ರೂಪಾಯಿಗಳ ಉಳಿತಾಯವನ್ನು ತೋರಿಸಿದ್ದಾರೆ. ಯಾವ ಭಾಷೆಯಲ್ಲಿ ಯಾವ ಶಬ್ದವನ್ನುಪಯೋಗಿಸಿ ಹೇಳ ಬೇಕೋ ನಾನು ಅರಿಯೆ, ವಿಶೇಷವಾಗಿ ಈ ಮುಂಗಡ ಪತ್ರವನ್ನು ಕೂಲಂಕಷವಾಗಿ ವಿಚಾ ರಿಸಿದ್ದೇ ಆದರೆ ಹೈದರಾಬಾದಿನ ಸುಮಾರು 3 ಜಿಲ್ಲೆಗಳಿಂದ ಬಂದಿರತಕ್ಕ ನಾವು ಯಾವಾಗಲೂ ಹಿಂದುಳಿದ ಭಾಗದವರು. ಈ ಭಾಗದಲ್ಲಿ ಯಾವಾಗಲೂ ಕೃತ್ರಿಮತನದಿಂದಲಾಗಲಿ ಅಥವಾ ನೈಸರ್ಗಿಕದಿಂದಾಗಲಿ ಮೇಲಿಂದ ಮೇಲೆ ದೇವರು, ವರುಣನ ಆಶ್ರಯಕ್ಕೆ ಪಾತ್ರರಾಗಿ ಮಳೆ ಬೆಳೆ ಗಳ ಮೇಲೆ ಆಶ್ರಯವಾಗಿರಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಾವು ನಮ್ಮ ಮುಂದಿನ ಪೀಳಿಗೆ ಗಾಗಲಿ ಅಥವಾ ನಮಗಾಗಲ್ಲಿ ಅಪ್ಪರ್ ಕೃಷ್ಣಾ ಯೋಜನೆಯನ್ನು ನಮ್ಮ ದೇಶದ ಸರ್ಕಾರ ತೆಗೆದು ಕೊಂಡು ಕಾರ್ಯ ರೂಪಕ್ಕೆ ತಂದು ಅದರಿಂದ ನಮ್ಮ ನಾಡಿಗೆ, ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಲ್ಲಿ ವಾಸ ಮಾಡತಕ್ಕ ನಮ್ಮಗಳಿಗೆ, ನಮ್ಮ ಜನರ ಭವಿಷ್ಯದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯನ್ನು ಸಾಧಿಸಿ ನಾವು ಎಂದು ನಂದನವನದಲ್ಲಿ ಆನಂದದಿಂದ ಲೋಲಾಡುತ್ತೇವೆಯೋ ಏನೋ ಎಂದು ಅನ್ನು ವಂತಹ ಒಂದು ಕನಸನ್ನು ಕಾಣುತ್ತಾ ಇದ್ದೇವೆ. ಅದನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಎರಡು ವರ್ಷಗಳ ಕೆಳಗೆ ತೃತೀಯ ಪಂಚವಾರ್ಷಿಕ ಯೋಜನೆಯ ಕೊನೆಯ ಹಂತದಲ್ಲಿ ನಮ್ಮ ದೇಶದ ದಿವಂಗತ ಪ್ರಧಾನಿಯವರಾದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳವರನ್ನು ಕರೆಸಿಕೊಂಡು ಅದಕ್ಕೆ ಅಡಿಗಲ್ಲನ್ನೂ ಕೂಡ ಹಾಕಿಸಿದ್ದರು. ಆಮೇಲೆ ಕಟ್ಟಡಗಳಿಗೆ ಮತ್ತು ತಳಹದಿಗೆ 50 ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಿ ಕೇಂದ್ರ ಸರ್ಕಾರದ ವಿದ್ಯುತ್ ಮತ್ತು ನೀರಾವರಿ ಸಚಿವರ ಸಲಹೆ ಮೇರೆಗೆ ಅದರ ನಿವೇಶನವನ್ನು ಬದಲಾಯಿಸಿದರು.

ನಾರಾಯಣಪುರದಿಂದ ಸಿದ್ಧಾಪುರಕ್ಕೆ ಸುಮಾರು 4 ಮೈಲಿ ಅಪ್ಪರ್ ಸ್ಟ್ರೀಂನಲ್ಲಿ ಮಾಡಬೇಕೆಂದು ಕೇಂದ್ರ ಸರ್ಕಾರದವರು ಸಲಹೆ ಕೊಟ್ಟರು. ಆ ಸಲಹೆ ಯಾವುದೋ ಒಂದು ರಾಜಕೀಯ ತಂತ್ರ ದಿಂದ ಕೊಡಿತ್ತು ಎಂಬುದು ನನ್ನ ಭಾವನೆ. ಆ ರಾಜಕೀಯ ತಂತ್ರ ನಮ್ಮ ಸರ್ಕಾರಕ್ಕೆ ಆಗಲಿ ಅಥವಾ ನಮ್ಮ ದೇಶದ ಆಡಳಿತವನ್ನು ಹಿಡಿದಿರತಕ್ಕ ತಮಗೆ ಆಗಲಿ ಅರ್ಥವಾಯಿತೋ ಇಲ್ಲವೋ ನಾನು ಅರಿಯೇ ? ಮಾನ್ಯ ಶ್ರೀ ಕೆ. ಎಲ್. ರಾವ್ ಅವರು ಕೇವಲ 3-4 ಕೋಟಿ ರೂಪಾಯಿಗಳು ಉಳಿಯುತ್ತವೆ ಅದಕ್ಕಾಗಿ ನಾರಾಯಣಪುರದಿಂದ ಸಿದ್ಧಾಪುರಕ್ಕೆ ಸ್ಥಳಾಂತರಿಸಿಕೊಳ್ಳಿ ಎಂದು ಸಲಹೆ ಮಾಡಿದರು. ನಮ್ಮ ದೇಶದ ಮುಖ್ಯ ಇಂಜನಿಯರುಗಳು, ತಜ್ಞರುಗಳು ಕೂಡಿಕೊಂಡು ನಮ್ಮ ಸರ್ಕಾರದವರಿಗೆ ಸಾಕಾದಷ್ಟು ಸಲಹೆಗಳನ್ನು ಕೊಟ್ಟರು. ಇದರಲ್ಲಿ ಉಳಿತಾಯದ ಮಾರ್ಗವೇ ಇಲ್ಲ. ಕೇವಲ ನಾರಾಯಣಪುರ ತೆಗೆದುಕೊಳ್ಳಬೇಕು ಅದರಿಂದಲೇ ಹೈದರಾಬಾದು ಕರ್ನಾಟಕದ ಎರಡು ಜಿಲ್ಲೆಗಳಿಗೆ ಸಾಕಾದಷ್ಟು ಲಾಭ ಇದೆ ಎನ್ನುವಂಥ ಸಲಹೆಯನ್ನು ನಮ್ಮ ಸರ್ಕಾರದವರು ಕೇಳಲಿಲ್ಲ, ಕಿವಿಯಲ್ಲಿ ಕೂಡ ಹಾಕಿಕೊಳ್ಳಲಿಲ್ಲ. ಏನೋ ದೊಡ್ಡವರು, ಕೇಂದ್ರ ಸರ್ಕಾರದ ಮಂತ್ರಿಗಳು ಹೇಳುತ್ತಾರೆ ಆದ್ದರಿಂದ ಮಾಡಿಬಿಡಿಯಪ್ಪ ಎಂಬ ಸುಂದರವಾದ ಒಂದು ವಾಕ್ಯ ಮಾನ್ಯ ಮುಖ್ಯಮಂತ್ರಿಗಳಿಂದ ಬಂತು. ನಮ್ಮ ದುರದೃಷ್ಟವದಿಂದ ಆ ಪ್ರಾಜೆಕ್ಟು ಅಥವಾ ಆ ಯೋಜನೆ–120 ಕೋಟಿ ರೂಪಾಯಿಗಳಿಂದ ಮಾಡಿಸಬೇಕಾಗಿತ್ತು ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ 3 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಒಂದು ಹಾಸ್ಯಾಸ್ಪದಕರ ವಾದ ಮಾತು. ಅಪ್ಪರ್ ಕೃಷ್ಣಾ ಯೋಜನೆಯಲ್ಲಿ ನಾರಾಯಣ ಪುರ ಸಬ್ ಡಿವಿಜನ್ ಅದು ಈಗ ಸುಮಾರು 3-4 ತಿಂಗಳ ಕೆಳಗೆ ಅಲ್ಲಿದ್ದ ನೂರಾರು ಜನ ಕೆಲಸಗಾರರು ಲಾರಿಯಲ್ಲಿ ತಮ್ಮ ಗುಡಿಸಲುಗಳನ್ನು ಹಾಕಿಕೊಂಡು ಯಾವುದೋ ಜಾಗಕ್ಕೆ ಹೊರಟುಹೋದರು. 50ಲಕ್ಷ ರೂಪಾಯಿ ಗಳ ಕಟ್ಟಡ ಕಟ್ಟಿರುವುದಲ್ಲಿ ಈಗ ಯಾರೊಬ್ಬರೂ ಕೂಡ ಅಲ್ಲಿರುವುದಿಲ್ಲ ಇಂತಹ ಸನ್ನಿವೇಶ ಅಲ್ಲಿ ಇದೆ.

ಆಲಮಟ್ಟಿ ಪರಿಸ್ಥಿತಿಯೂ ಕೂಡ ಹಾಗೆಯೇ ಇದೆ. ತೃತೀಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ಸುಮಾರು 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರಂತೆ ಅದೂ ಕೇವಲ ಇಂಜನಿಯರುಗಳ ಸಂಬಳ ಮತ್ತು ಸಾರಿಗೆಗೆ ವೆಚ್ಚವಾಯಿತು. ಹೀಗೆ ಅಪ್ಪರ್ ಕೃಷ್ಣಾ ಯೋಜನೆಯ ಬಗ್ಗೆ ನಾವು ಯಾವ ಆಶೋತ್ತರವನ್ನು ಇಟ್ಟುಕೊಂಡಿದ್ದೆವೋ ಅದು ಗಾಳಿ ಗೋಪುರವಾಗುತ್ತಾ ಇದೆ. ತೃತೀಯ ಪಂಚವಾರ್ಷಿಕ ಯೋಜನೆ ಮುಗಿದು ಚತುರ್ಥ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುತ್ತಾ ಇದೆ. ಇದರಲ್ಲೂ ಕೂಡ ನಮ್ಮ ಸರ್ಕಾರದವರು ಒಳ್ಳೆಯ ಉತ್ಸಾಹದಿಂದ ಕೇಂದ್ರ ಸರ್ಕಾರದವರಿಗೆ ಮನವಿ ಮಾಡಿಕೊಂಡು ಅಗಲಿ ಅಥವಾ ಒತ್ತಾಯ ತಂದಾಗಲಿ ಅಪ್ಪರ್ ಕೃಷ್ಣಾ ಯೋಜನೆಯನ್ನು ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಅರ್ಧ ಮಟ್ಟಕ್ಕಾದರೂ ಸಮಾಪ್ತ ಮಾಡುವುದು ಒಳ್ಳೆಯದೆಂದು ನಮ್ಮ ಸರ್ಕಾರದವರಲ್ಲಿ ನಾನು ಕಳಕಳಿಯಿಂದ ಕೇಳಿ ಕೊಳ್ಳುತ್ತಾ ಇದ್ದೇನೆ. ಈಗ ಈ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಸರ್ಕಾರದವರು ಕೇವಲ 47 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕೆನ್ನುವಂಥ ಒಂದು ಸಲಹೆಯನ್ನು ಕೇಂದ್ರ ಸರ್ಕಾರದ ಆಯೋಜನಾ ಮಂಡಲಿಯವರು 50 ಕೋಟಿ ರೂಪಾಯಿಗಳಿಗೆ ಏರಿಸಿದ್ದಾರೆ. ಹಳ್ಳಿ ಜನರಲ್ಲಿ ಒಂದು ನಾಣ್ನುಡಿ ಇದೆ ಹೆಸರು ಹಾಲಪ್ಪ, ಕುಡಿಯಲಿಕ್ಕೆ ಒಂದು ತೊಟ್ಟು ನೀರಿಲ್ಲ ಅಂತ ಆ ರೀತಿ ಕೇಂದ್ರ ಸರ್ಕಾರದವರು 50ಕೋಟಿ ರೂಪಾಯಿ ಅಲ್ಲ ನೂರು ಕೋಟಿ ರೂಪಾಯಿ ಕೊಟ್ಟರೂ ಸಹಿತ ಅದನ್ನು ಖರ್ಚು ಮಾಡಲು ಆಸ್ಪದ ಇಲ್ಲದೇ ಹೋದರೆ ಏನೂ ಪ್ರಯೋಜನ ಇಲ್ಲ. ಅಂತೂ ಅವರು 50ಕೋಟಿ ರೂಪಾಯಿಗಳಿಗೆ ಏರಿಸಿರುವುದು ಒಂದು ಸಂತೋಷದ ಸಂಗತಿ ಎಂದು ಹೇಳ ಬಹುದು. ಅಂತೂ ಹಿಂದುಳಿದಿರತಕ್ಕ ಈ ಭಾಗದ ಈ ಮಹಾನ್ ಯೋಜನೆಯನ್ನು ಸಫಲ ಮಾಡಿ ನಮಗೆ ಆರ್ಥಿಕ ದೃಷ್ಟಿಯಿಂದ ಪರಿಹಾರೋಪಾಯವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಇನ್ನು ಸ್ವಲ್ಪ ವಿಷಾದದಿಂದ ಹೇಳಬೇಕಾದರೆ ಬಿಜಾಪುರದಲ್ಲಿ ಸುಮಾರು 7ಲಕ್ಷ ಎಕರೆ ನೀರಾವರಿಯಾಗುತ್ತಾ ಇದೆ, ಆದರೂ ಸಹ ಅಪ್ಪರ್ ಕೃಷ್ಣಾ ಯೋಜನೆಯ ಬಗ್ಗೆ ಏನೋ ರಾಜಕೀಯ ತಾಂಡವವಾಡುತ್ತಾ ಇದೆ ಎಂದು ಹೇಳುತ್ತಾರೆ. ಏನೇ ಆಗಲಿ ಆಲಮಟ್ಟಿ ಅಥವ ಸಿದ್ದಾಪುರದ ಯೋಜನೆ ಮಾಡಿಕೊಡಬೇಕೆಂಬುದು ಮುಖ್ಯ ಉದ್ದೇಶ.

ಎರಡನೆಯದಾಗಿ ಹೇಳಬೇಕಾದರೆ ಸಹಕಾರ, ಔದ್ಯೋಗಿಕ ಕ್ಷೇತ್ರದ ವಿಚಾರ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ ರಾಯಚೂರು, ಬಾಗಲಕೋಟೆ ಮತ್ತು ಬೆಳಗಾಂಗಳಲ್ಲಿ ಮೂರು ನೂಲಿನ ಗಿರಣಿಗಳಿಗೆ ಈ ಮೂರೂ ಕಡೆ 10ಲಕ್ಷ ನಮ್ಮ ಪಾಲಿನ ಹಣವನ್ನು ಕೂಡಿಸಿದ್ದೇವೆ. ಅದಕ್ಕೆ ಸರಕಾರ ದವರು ಕೊಡಬೇಕಾದ 30 ಲಕ್ಷ ಮ್ಯಾಚಿಂಗ್ ಗ್ರಾಂಟನ್ನು ಕೊಡಬೇಕಾಗಿದೆ. ಆದರೆ ಮಾನ್ಯ ಆರ್ಥಿಕ ಸಚಿವರು ಬಜೆಟ್ಟಿನಲ್ಲಿ ಕೇವಲ ಒಂದು ಲಕ್ಷ ರೂಪಾಯಿಗಳನ್ನೊದಗಿಸಿರುವುದು ವಿಷಾದಕರ. ನಾವು ಎಷ್ಟೋ ಸಲ ಅವರಲ್ಲಿ ಮನವಿ ಮಾಡಿದ್ದೇವೆ, ಛೇರ್ಮನ್ನರನ್ನು ಸಹ ಕರೆದುಕೊಂಡು ಹೋಗಿ ವಿನಂತಿಮಾಡಿದ್ದೇವೆ. ಆಗ ಆರ್ಥಿಕ ಸಚಿವರು ಒಳ್ಳೆಯ ವಾಗ್ದಾನಮಾಡಿದ್ದರು. ಆದರೆ ಅದರಂತೆ ನಡೆದುಕೊಂಡಿಲ್ಲ. ಈಗಲಾದರೂ ಕೂಡ ಅವರು ಪ್ರಯತ್ನಮಾಡಿ ನಮ್ಮ ಕಡೆ ಕರುಣೆ ತೋರಿ ತಮ್ಮ ಭಾಗದ ಮ್ಯಾಚಿಂಗ್ ಗ್ರಾಂಟನ್ನು ಕೊಡುವರೆಂದು ಆಶೆ. ನಾನು ಸೂಚಿಸಿದ ಸಲಹೆ ಯಶಸ್ವಿಯಾಗುವಂತೆ ಮಾಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಪಾಟೀಲ್ (ಟಿಕೋಟ).—ಮಾನ್ಯ ಸಭಾಪತಿಯವರೆ, 1966-67ನೆ ಸಾಲಿನ ಬಜೆಟ್ಟನ್ನು ಉಳಿತಾಯದ ಬಜೆಟ್ಟಾಗಿ ಮಂಡಿಸಿದ್ದಕ್ಕೆ ನಾನು ಮೊದಲು ಮಾನ್ಯ ಹಣಕಾಸಿನ ಸಚಿವರನ್ನು ಅಭಿನಂದಿಸುತ್ತೇನೆ. ರೆವೆನ್ಯೂ ಸೈಡ್‌ನಲ್ಲಿ 2.53 ಕೋಟಿ ರೂಪಾಯಿ ಮತ್ತು ಒಟ್ಟು ಸುಮಾರು 1.62 ಕೋಟಿ ರೂಪಾಯಿಗಳ ಉಳಿತಾಯದ ಆಯವ್ಯಯ ಪಟ್ಟಿಯನ್ನು ಹಣಕಾಸಿನ ಸಚಿವರು ನಮ್ಮ ಮುಂದಿಟ್ಟಿದ್ದಾರೆ. ಈಗ ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿದು ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಕಾಲಿಡುತ್ತಿದ್ದೇವೆ. ಇದಕ್ಕೆ ಹೆಚ್ಚು ಹಣ ಬೇಕು. ಅದಕ್ಕಾಗಿ ಹಣಕಾಸಿನ ಆಯೋಗದ ಮುಂದೆ ಸಮರ್ಥ ರೀತಿಯಿಂದ ನಮ್ಮ ಹಣಕಾಸಿನ ಸ್ಥಿತಿ ಯನ್ನಿಟ್ಟು ನಮ್ಮ ಕೇಸ್ ಮಂಡಿಸಿ ಸ್ಥೂಲವಾಗಿ ನಮ್ಮ ಯೋಜನೆಯ ಗಾತ್ರವನ್ನು 537 ಕೋಟಿ ರೂಪಾಯಿಗಳಷ್ಟು ಮಾಡಿಕೊಂಡಿದ್ದಾರೆ. ನಮ್ಮ ಮೂರನೆಯ ಪಂಚವಾರ್ಷಿಕ ಯೋಜನೆ ಕಾರ್ಯ ರೂಪಕ್ಕೆ ಬರುವಾಗ ರಾಜ್ಯದ ಹಣಕಾಸಿನ ಪರಿಸ್ಥಿತಿ ಚಿಂತಾಜನಕವಾಗಿತ್ತು, ಅದಾದನಂತರ ನಿರಾಶಾದಾಯಕವಾಗಿದೆ ಎಂದು ಅನೇಕ ಸದಸ್ಯರು ಹೇಳುತ್ತಿದ್ದಾರೆ. ಆದರೆ ಮೂರನೆಯ ಯೋಜನೆಯಲ್ಲಿ ಹಣಕಾಸಿನ ಮುಗ್ಗಟ್ಟಿದ್ದುದಕ್ಕೆ ಅನೇಕ ಕಾರಣಗಳಿದ್ದುವು. ಪ್ರಕೃತಿಯ ವಿಕೋಪದಿಂದ, ರಾಜ್ಯ ಸರಕಾರ ಅಂದಾಜು ಮಾಡಿದಾಗ ಎಷ್ಟು ಆದಾಯ ಬರಬಹುದೆಂದು ನಿರೀಕ್ಷೆಮಾಡಿದ್ದರೋ ಅಷ್ಟು ಕಂದಾಯ ಬರಲಿಲ್ಲ. ಆದುದರಿಂದ ಆರ್ಥಿಕ ಮುಗ್ಗಟ್ಟಿತ್ತೆಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಆದರೆ ನಿರಾಶಾದಾಯಕವಾಗಿಲ್ಲ.

(ಶ್ರೀ ಬಿ. ಎಂ. ಪಾಟೀಲ್)

ಬರುಬರುತ್ತಾ ರಾಜ್ಯದ ಆರ್ಥಿಕ ಚಿತ್ರ ಆಶಾದಾಯಕವಾಗುತ್ತಿದೆ, ಸ್ಥಿರವಾಗುತ್ತಿದೆ. ನಾಲ್ಕನೆಯ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ನಮ್ಮಲ್ಲಿರುವ ಸಂಪನ್ಮೂಲಗಳನ್ನು ಬೆಳೆಸಬೇಕಾಗಿದೆ. ಹಾಗೆ ಮಾಡುವಾಗ ರಾಜ್ಯ ಸರಕಾರ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂದು ನೋಡಿದರೆ ಈ ವರ್ಷ ನಮ್ಮ ಕಂದಾಯದ ಪುನರ್ವಿಮರ್ಶೆಯಾಗಿದೆ, ಅದೇ ರೀತಿಯಿಂದ ರಾಜ್ಯದಲ್ಲಿ ಒಂದೇ ರೀತಿಯಾದ ವಾಟರ್ ರೇಟನ್ನು ವಿಧಿಸಲಾಗಿದೆ ಮತ್ತು ಸೇಲ್ಸ್‌ಟ್ಯಾಕ್ಸ್‌ನಿಂದ ಬರುವ ಆದಾಯ ವರ್ಷೇ ವರ್ಷೆ ಹೆಚ್ಚುತ್ತಿದೆ. ಇದರಿಂದ ಅಂದಾಜು ಮಾಡುವಾಗ ಎಷ್ಟು ಆದಾಯ ಬರುತ್ತದೆಂದು ಅಂದಾಜು ಮಾಡಿದ್ದರೋ ಅಷ್ಟು ಬರುತ್ತಿದೆ. ಶರಾವತಿ ಯೋಜನೆ, ತುಂಗಭದ್ರ ಯೋಜನೆ ಕಾರ್ಯರೂಪಕ್ಕೆ ಬಂದು ಆದಾಯ ದೊರೆಯುತ್ತಿದೆ, ವಿದ್ಯುಚ್ಛಕ್ತಿ ಮಂಡಲಿಯಿಂದ ಸುಮಾರು 4 ಕೋಟಿ ರೂಪಾಯಿ ಬರುತ್ತಿದೆ. ಇದರಿಂದ ಭದ್ರವಾದ ತಳಹದಿಯಮೇಲೆ ನಾಲ್ಕನೆಯ ಯೋಜನೆಯನ್ನು ರೂಪಿಸಿದ್ದಾರೆ. ಇದೇ ರೀತಿಯಿಂದ ರಾಜ್ಯದ ಪರ್‌ಕ್ಯಾಪಿಟಾ ಇನ್‌ಕಂ ಈ ದಿವಸ 305 ರೂಪಾಯಿ ಆಗಿದೆ. ಇದರಿಂದ ರಾಜ್ಯದಲ್ಲಿ ಎಷ್ಟು ಅಭಿವೃದ್ಧಿಯಾಗುತ್ತದೆಂಬುದು ವ್ಯಕ್ತವಾಗುತ್ತದೆ. ಈ ವರ್ಷ ಆರ್ಥಿಕ ಮಂತ್ರಿಗಳು ಬಜೆಟ್ಟನ್ನು ಚಾಕಚಕ್ಯತೆಯಿಂದ ಅಂಕಿ ಅಂಶಗಳ ಒಂದು ರೀತಿಯ ಜೋಡಣೆಯಿಂದ ಚೆನ್ನಾಗಿ ಕಾಣುವಂತೆ ಮಂಡಿಸಿದ್ದಾರೆಂದು ಅನೇಕ ಸದಸ್ಯರು ಆಕ್ಷೇಪಿಸಿದರು. ಆದರೆ ಹಾಗಿಲ್ಲ, ಅಂಕಿಸಂಖ್ಯೆಗಳನ್ನು ಕೂಲಂಕಷವಾಗಿ ನೋಡಿದರೆ ನಿಜವಾಗಿಯೂ ಕೂಡ ಮೂರನೆಯ ಯೋಜನೆಯ ಕಾಲದಲ್ಲಿದ್ದ ಬಿಕ್ಕಟ್ಟು ಮಾಯವಾಗಿ ನಾಲ್ಕನೆಯ ಯೋಜನೆಯ ಕಾಲದಲ್ಲಿ ಭದ್ರವಾದ ತಳಹದಿ ಕಾಣಬರುತ್ತಿದೆ. ಅನೇಕರು ಆಡಳಿತ ಸುಧಾರಣೆಯಾಗಬೇಕೆಂದು ಹೇಳಿದರು. ಅದನ್ನು ಒಪ್ಪಬೇಕು. ಆಡಳಿತ ಮಟ್ಟ ಹೆಚ್ಚಬೇಕು, ಆಡಳಿತ ಬಿಗಿಯಾಗಿರಬೇಕು, ನಿಜ. ಯಾವ ಸರಕಾರವೂ ಒಳ್ಳೆಯ ಆಡಳಿತ ಇರಬಾರದೆಂದು ಹೇಳುವುದಿಲ್ಲ. ಆದರೆ ಆಡಳಿತ ಒಳ್ಳೆಯದಾಗಿರಬೇಕಾದರೆ ನಾವೂ ಕೂಡ ಒಳ್ಳೆಯವರಾಗಿರಬೇಕು, ಆರೋಪ, ಪ್ರತ್ಯಾರೋಪ ಮಾಡುವವರು ಒಳ್ಳೆಯ ರೀತಿಯಿಂದ ಸಮಾಜದಲ್ಲಿ ನಡೆದುಕೊಳ್ಳಬೇಕು. ತಮ್ಮ ಕರ್ತವ್ಯವನ್ನು ಎಲ್ಲರೂ ಸರಿಯಾಗಿ ನೆರವೇರಿಸಿದರೆ ಆಡಳಿತ ಮಟ್ಟವೂ ಹೆಚ್ಚುತ್ತದೆ. ಆದುದರಿಂದ ಆಡಳಿತ ಸುಧಾರಣೆಯಾಗಬೇಕೆಂದು ಹೇಳಿ ಸರಕಾರದ ಮೇಲೆ ಮಾತ್ರ ಅದರ ಜವಾಬ್ದಾರಿಯನ್ನು ಹಾಕಿ ತಪ್ಪು ಹೊರಿಸುವುದು ಸರಿಯಲ್ಲವೆಂದು ನಾನು ವಿನಂತಿ ಮಾಡುತ್ತೇನೆ. ಆಡಳಿತ ಸುಧಾರಣೆಯಾಗಬೇಕಾದರೆ ಪ್ರತಿಯೊಬ್ಬರೂ ಬಿಗಿಯಾಗಿರಬೇಕು, ಸಮಾಜ ಸುಧಾರಣೆಯಾಗಬೇಕು, ಹಾಗಾದರೆ ಆಡಳಿತ ಸುಧಾರಣೆಯಾಗುತ್ತದೆ. ಆಡಳಿತದ ಮಟ್ಟ ಸಮಾಜದ ಸ್ಥಿತಿಯ ಮಟ್ಟವನ್ನವಲಂಬಿಸಿದೆ. ಸರಕಾರವೇ ಎಲ್ಲವನ್ನೂ ಮಾಡಬೇಕೆಂದರೆ ಸಾಧ್ಯವಿಲ್ಲ, ಇದರ ಹೊಣೆ ಎಲ್ಲರೂ ಹೊರಬೇಕು.

ಸಾಲದ ಹೊರೆ ಹೆಚ್ಚುತ್ತಿದೆ, ಪ್ರಸಕ್ತ ವರ್ಷದ ಕೊನೆಗೆ ಕೇಂದ್ರ ಸರಕಾರದಿಂದ 196 ಕೋಟಿ ರೂಪಾಯಿ, ಇತರ ಸಾಲ 72 ಕೋಟಿ ಇದೆ, ರಿಸರ್ವ್ ಬ್ಯಾಂಕಿನ ಓವರ್ ಡ್ರಾಫ್ಟ್ ಇದೆ ಎಂದು ಟೀಕಿಸಿದ್ದಾರೆ. ಆದರೆ ಅದರಿಂದ ಅಭಿವೃದ್ಧಿ ಕಾರ್ಯವೆಷ್ಟಾಗಿದೆ ಎಂಬುದನ್ನು ನೋಡಬೇಕು. ಕೇಂದ್ರ ಸರಕಾರವಾಗಲಿ, ಯಾವುದೇ ಸರಕಾರವಾಗಲಿ ಅಭಿವೃದ್ಧಿ ಕಾರ್ಯ ಮಾಡಬೇಕಾದರೆ ಸಾಲ ಪಡೆಯಲೇ ಬೇಕು. ಆಯೋಜಿತ ಅಭಿವೃದ್ಧಿಯಲ್ಲಿ ಇದು ಆವಶ್ಯ. ಅದನ್ನು ಹೇಗೆ ತೀರಿಸಬೇಕೆಂಬ ಬಗ್ಗೆ ಕೆಲವರಿಗೆ ಸರಿಯಾದ ಮಾರ್ಗ ಹೊಳೆಯದಿರಬಹುದು. ನಮ್ಮಲ್ಲಿ ಪ್ರಕೃತಿ ಸಂಪತ್ತು ಹೇರಳವಾಗಿದೆ. ಶಿಕ್ಷಣ, ಆರೋಗ್ಯ, ರಕ್ಷಣೆ, ನೀರಾವರಿ ಮುಂತಾದ ಯೋಜನೆಗಳಿಗೆ ಕೇಂದ್ರ ಸರಕಾರದ ವತಿಯಿಂದ ಸಾಲ ತೆಗೆದುಕೊಂಡಿರುವುದುಂಟು. ಇನ್ನು ವರಮಾನ ಕೊಡುವ ಯೋಜನೆಗಳಲ್ಲಿ ರಾಜ್ಯಕ್ಕೂ ಮತ್ತು ಕೇಂದ್ರ ಸರಕಾರಕ್ಕೂ ಮಧುರ ಬಾಂಧವ್ಯವಿರಬೇಕು, ಆ ಬಾಂಧವ್ಯ ಬೆಳೆಯಲು ಭಾರತ ಸರಕಾರ ರಾಜ್ಯದ ಆರ್ಥಿಕ ಸ್ಥಿತಿ ನೋಡಿ ಅದರಮೇಲೆ ಹೆಚ್ಚು ಭಾರ ಬೀಳದಹಾಗೆ ನೋಡಿಕೊಳ್ಳಬೇಕು. ಎರಡನೆಯ ಮತ್ತು ನಾಲ್ಕನೆಯ ಆರ್ಥಿಕ ಆಯೋಗಗಳು ಬಹಳ ಉನ್ನತವಾದ ಮಹತ್ವದ ಸೂಚನೆಗಳನ್ನು ಕೊಟ್ಟಿವೆ. ಅವನ್ನು ಕಾರ್ಯರೂಪಕ್ಕೆ ತರಬೇಕು. ಅದರ ಸಲುವಾಗಿ ಕೇಂದ್ರವನ್ನು ಒತ್ತಾಯ ಮಾಡಬೇಕು. ಕೇಂದ್ರ ಸರಕಾರವೂ ಒಳ್ಳೆಯ ಧೋರಣೆ ತಾಳಿ ಉದಾರ ಭಾವನೆಯಿಂದ ವರ್ತಿಸಬೇಕು. ಇದಕ್ಕಾಗಿ ರಾಜ್ಯ ಸರಕಾರ ಪ್ರಯತ್ನಪಡುತ್ತಿದೆ. ರಾಜ್ಯ ಸರಕಾರಗಳು ಮತ್ತು ಭಾರತ ಸರಕಾರದ ನಡುವಣ ಆರ್ಥಿಕ ಸಹಾಯದ, ಸಾಲ ಕೊಟ್ಟು ತಕ್ಕೊಳ್ಳುವ ಧೋರಣೆಯ ಪರಿಷ್ಕರಣ ಅವಶ್ಯ. ಯಾವ ರೀತಿಯ ಧೋರಣೆಯ ನಿರೂಪಣೆಯಾಗಬೇಕೆಂಬುದನ್ನು ಆಮೂಲಾಗ್ರ ಚರ್ಚಿಸಿ ಉದಾರ ನಿರ್ಧಾರಕ್ಕೆ ಬರುವುದು ಅತ್ಯಾವಶ್ಯ.

ನಮ್ಮ ಸರಕಾರದವರು ಈ ವರ್ಷ ಅಪ್ಪರ್ ಕೃಷ್ಣಾ ಯೋಜನೆ ತೆಗೆದುಕೊಳ್ಳಬೇಕೆಂದು ಅನೇಕ ಸದಸ್ಯರು ಅದರಲ್ಲಿಯೂ ಹೈದರಾಬಾದು ಕರ್ನಾಟಕ ಪ್ರದೇಶದಿಂದ ಬಂದಿರತಕ್ಕ ಸದಸ್ಯರು ಒತ್ತಾಯ ಮಾಡಿ ಹೇಳಿದರು. ವಿಜಾಪೂರ ಮತ್ತು ಗುಲಬುರ್ಗಾ ಜಿಲ್ಲೆಗಳು ಮೇಲಿಂದ ಮೇಲೆ ಬರಗಾಲದ

ಬವಣೆಗೆ ತುತ್ತಾಗುವ ಜಿಲ್ಲೆಗಳಾಗಿರುವುದರಿಂದ ಈ ಎರಡೂ ಜಿಲ್ಲೆಗಳಿಗೆ ಉಪಯೋಗವಾಗುವ ಈ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ತೆಗೆದುಕೊಳ್ಳಬೇಕಾದುದು ಅತ್ಯಗತ್ಯವಾಗಿದೆ. ಆದುದರಿಂದ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಸರಕಾರ ಜಾಗ್ರತೆ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಈ ಯೋಜನೆ ಕಾರ್ಯಗತ ಮಾಡುವುದರಲ್ಲಿ ಏನಾದರೂ ರಾಜಕೀಯ ಇರಬಹುದು ಎಂದು ಕೆಲವು ಸದಸ್ಯರು ಸಂದೇಹ ವ್ಯಕ್ತಪಡಿಸಿದರು. ಆದರೆ ಇದರಲ್ಲಿ ರಾಜಕೀಯವೇನೂ ಇಲ್ಲ. ಇದು ಬಹಳ ಒಳ್ಳೆಯ ಯೋಜನೆಯಾಗಿದೆ. ವಿಜಾಪುರ ಜಿಲ್ಲೆಯವರೆಲ್ಲರೂ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದಾರೆ. ರಾಜ್ಯ, ಕೇಂದ್ರ ಸರಕಾರಗಳಿಗೆ ಮನದಟ್ಟಾಗುವಂತೆ ಪ್ರತಿನಿಧಿಸಿದ್ದಾರೆ. ಆದುದರಿಂದ ಕೇಂದ್ರ ಸರಕಾರದ ಮೇಲೆ ಒತ್ತಾಯ ತಂದು ಈ ಯೋಜನೆ ಬೇಗನೆ ಕಾರ್ಯರೂಪಕ್ಕೆ ಬರುವ ಹಾಗೆ ಮಾಡಬೇಕಾದುದು ಅತ್ಯಾವಶ್ಯಕ. ಇದು ಒಂದು ಒಳ್ಳೆಯ ಯೋಜನೆಯಾಗಿರುವ ಮೂಲಕ ಪ್ರಧಾನಮಂತ್ರಿಗಳಾಗಿದ್ದ ದಿವಂಗತ ಶ್ರೀ ಲಾಲ ಬಹಾದ್ದೂರ ಶಾಸ್ತ್ರಿಯವರು ಬಂದು ಇದರ ಅಡಿಗಲ್ಲನ್ನು ಹಾಕಿದ್ದಾರೆ. ಮುಖ್ಯವಾಗಿ ಬರಗಾಲ ಪೀಡಿತ ಜಿಲ್ಲೆಗಳಿಗೆ ಉಪಯೋಗವಾಗುವುದರಿಂದ ಇದು ಬಹಳ ಮಹತ್ವದ ಯೋಜನೆಯಾಗಿದೆ. ಬಿಜಾಪುರ, ಗುಲ್ಬರ್ಗಾ ಜಿಲ್ಲೆಗಳ ಜನತೆಯ ಜೀವಾಳದ ಪ್ರಶ್ನೆಯಾಗಿದೆ. ಅವರ ಅಳಿವು ಉಳಿವು ಆಗು ಹೋಗುಗಳು ಈ ಯೋಜನೆಯ ಮೇಲೆ ಅವಲಂಬಿಸಿವೆ. ಈ ಯೋಜನೆಗೆ ಅಗತ್ಯವಿರುವ ಹಣವನ್ನು ಸರಕಾರ ಒದಗಿಸಬೇಕು. ಈಗ ಈ ಯೋಜನೆ ಪ್ರಾರಂಭ ಮಾಡಿದಾಗ್ಗೆ ಯಾವ ಸ್ಥಿತಿಯಲ್ಲಿ ಇದ್ದಿತೋ ಅದೇ ಸ್ಥಿತಿಯಲ್ಲಿ ಈಗಲೂ ಇದೆ. ಜನ ಜೀವಾಳದ ಈ ಯೋಜನೆ ಕಾರ್ಯರೂಪಕ್ಕೆ ತರಲು ಕೇಂದ್ರ ಸರಕಾರದ ಮೇಲೆ ಒತ್ತಾಯ ಮಾಡಬೇಕು. ಕೇಂದ್ರ ಸರಕಾರದವರು ಬೇರೆ ರಾಜ್ಯಗಳಿಗೆ ಹಣ ಒದಗಿಸುವ ಹಾಗೆ ನಮ್ಮ ರಾಜ್ಯಕ್ಕೂ ಈ ಯೋಜನೆಗೂ ಹಣ ಒದಗಿಸುವಂತೆ ಪ್ರಭಾವಶಾಲಿಯಾಗಿ ಒತ್ತಾಯ ಮಾಡಬೇಕು ಎಂದು ಹೇಳುತ್ತೇನೆ. ಈ ಕಾರ್ಯದಲ್ಲಿ ನಾವು ವಿಫಲರಾಗದೆ ಪೂರ್ಣವಾಗಿ ಕಾರ್ಯರೂಪಕ್ಕೆ ತರುತ್ತೇವೆ ಎಂದು ಜನತೆಯಲ್ಲಿ ವಿಶ್ವಾಸ ಮೂಡುವಂತೆ ಮಾಡಬೇಕು. ನಮ್ಮ ರಾಜ್ಯಕ್ಕೆ ದೊರೆಯುವ ಒಂದು ಹನಿ ನೀರನ್ನು ನಾವು ಬಿಡುವುದಿಲ್ಲ ಎಂಬ ದೃಢ ನಿರ್ಧಾರದಿಂದ ಕೃಷ್ಣಾ ಮೇಲ್ದಂಡೆಯ ಯೋಜನೆ ಸರಕಾರ ಮಾಡಿದೆ. ನಮ್ಮ ರಾಜ್ಯಕ್ಕೆ ದೊರೆತ ಪ್ರತಿ ಹನಿ ನೀರನ್ನು ನಾವು ಉಪಯೋಗಿಸಿ ರಾಜ್ಯದ ಜನತೆಯ ರಾಜ್ಯದ ಹಿತರಕ್ಷಣೆ ಸರ್ಕಾರದ ಆದ್ಯ ಕರ್ತವ್ಯ. ನಮ್ಮ ಆಶೋತ್ತರಗಳು ಈ ರೀತಿ ಇರುವಾಗ ಜಾಗ್ರತೆಯಾಗಿ ಈ ಯೋಜನೆ ಕಾರ್ಯರೂಪದಲ್ಲಿ ತರಲು ಹೆಚ್ಚು ಹಣ ಒದಗಿಸಬೇಕೆಂದು ಸರಕಾರಕ್ಕೆ ನಾನು ಕೇಳಿಕೊಳ್ಳುತ್ತೇನೆ. ಈ ಬಜೆಟ್ಟಿನಲ್ಲಿ ಒದಗಿಸಿರುವ 20 ಲಕ್ಷ ರೂಪಾಯಿ ಹಣ ನೋಡಿದರೆ ಈ ಯೋಜನೆ ಕಾರ್ಯರೂಪದಲ್ಲಿ ಬರಲು 500 ವರ್ಷವಾಗುತ್ತದೆ ಎಂದು ಭಾವಿಸಬೇಕಾಗುತ್ತದೆ. ಯಾವ ರೀತಿ ಶರಾವತಿ ಯೋಜನೆಯನ್ನು ತೀವ್ರಗತಿಯಲ್ಲಿ ಪೂರ್ತಿ ಮಾಡಿ ವರಮಾನ ಬರುವ ಹಾಗೆ ಮಾಡಲಾಗಿದೆಯೋ ಅದೇ ರೀತಿಯಲ್ಲಿ ಸರಕಾರ ಇದನ್ನು ಸಹ ಮಾಡಬೇಕು ಮತ್ತು ಮಾಡುತ್ತಾರೆ ಎಂದು ಆಶೆ ಮಾಡುತ್ತೇನೆ.

ಇನ್ನು ಘಟಪ್ರಭಾ ಯೋಜನೆಯ ಬಗ್ಗೆ ಹೇಳುವುದಾದರೆ ಈ ಬಜೆಟ್ಟಿನಲ್ಲಿ 6 ಲಕ್ಷ ರೂಪಾಯಿಗಳನ್ನು ಸರಕಾರ ಒದಗಿಸಿದ್ದಾರೆ. ಘಟಪ್ರಭಾ ಯೋಜನೆ ಪೂರ್ಣವಾಗಿ ಮುಗಿಯಬೇಕಾದರೆ ಸರಕಾರ ಈ ಬಜೆಟ್ಟಿನಲ್ಲಿ ಇನ್ನೂ ಹೆಚ್ಚು ಹಣ ಒದಗಿಸಬೇಕಾಗಿತ್ತು. ಈ ಯೋಜನೆಯಲ್ಲಿ ನೀರು ಒದಗಿಸುವುದರಿಂದ ಸರಕಾರಕ್ಕೆ ವರಮಾನ ಬರುತ್ತಿದೆ. ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕಾದುದು ಅವಶ್ಯಕವಾಗಿದೆ. ಸರಕಾರಕ್ಕೆ ಈಗ ವರಮಾನ ಬರುತ್ತಾ ಇದೆ. ಬರಗಾಲ ಬಂದಾಗ್ಗೆ ಪರಿಹಾರ ಕಾರ್ಯವೆಂದು ಇಂಥ ಕೆಲಸ ತೆಗೆದುಕೊಳ್ಳದೆ ಯೋಜನೆಯ ಮಹತ್ವಕ್ಕೆ ಅನುಗುಣವಾಗಿ ಸರಕಾರ ಹಣ ಒದಗಿಸಬೇಕು. ಆದುದರಿಂದ ಸರಕಾರ ತನ್ನ ಧೋರಣೆ ಪುನರ್ ವಿಮರ್ಶೆ ಮಾಡಿ ಇಂಥ ಉಪಯುಕ್ತ ಯೋಜನೆಗೆ ಹೆಚ್ಚು ಹಣ ಒದಗಿಸಿಕೊಡುತ್ತಾರೆಂದು ಆಶಿಸುತ್ತೇನೆ.

ಇನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಯಿಲ್ ಕನ್‌ಸರ್ವೇಶನ್ ಸ್ಕೀಂ ಬಗ್ಗೆ ಹಣ ಒದಗಿಸಲಾಗಿದೆ. ಇದಕ್ಕಾಗಿ ಒದಗಿಸಿದ 16 ಲಕ್ಷ ರೂಪಾಯಿಯಲ್ಲಿ ನಮ್ಮ ರಾಜ್ಯ ಸರಕಾರ ಎಷ್ಟರ ಮಟ್ಟಿಗೆ ಹಣ ಉಪಯೋಗ ಮಾಡಿದ್ದಾರೆ ಎಂಬುದು ಕಂಡುಬಂದಿಲ್ಲ. ವಿಜಾಪೂರ ಜಿಲ್ಲೆಯಲ್ಲಿ ಮಣ್ಣು ಉಪ್ಪು ಆಗುತ್ತದೆ. ಆದುದರಿಂದ ಇದಕ್ಕಾಗಿ ಕೇಂದ್ರ ಸರಕಾರದಿಂದ ಸಹಾಯ ಸಿಕ್ಕ ಧನ ಉಪಯೋಗಿಸದಿರುವುದು ಶೋಚನೀಯವಾದುದು. ಒದಗಿಸಿರತಕ್ಕಂಥ ಹಣವನ್ನು ಅಲಕ್ಷ್ಯ ಮಾಡದೆ ಉಪಯೋಗಿಸಬೇಕೆಂದು ಹೇಳುತ್ತೇನೆ. ಸಾಯಿಲ್ ರಿಕ್ಲೆಮೇಶನ್ ಸ್ಕೀಂ ಬಗ್ಗೆ ಹೆಚ್ಚು ಗಮನ ಕೊಡಬೇಕಾದುದು ಅಗತ್ಯವಾಗಿದೆ ಎಂದು ಹೇಳುತ್ತೇನೆ.

ಕೊನೆಯದಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಆದಷ್ಟು ಬೇಗನೆ ಕಾರ್ಯಗತ ಮಾಡಬೇಕೆಂದು ಮತ್ತೊಮ್ಮೆ ಹೇಳುತ್ತೇನೆ. ಯಾಕಂದರೆ ಆಂಧ್ರದವರು ಈಗಾಗಲೇ ತಮಗೆ ದೊರೆತಂಥ ನೀರನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ನಾಗಾರ್ಜುನ ಸಾಗರ ಶ್ರೀಶೈಲಂ ಯೋಜನೆಗಳನ್ನು ಪೂರ್ತಿಯಾಗಿ

(ಶ್ರೀ ಬಿ. ಎಂ. ಪಾಟೀಲ್)

ಮಾಡಿಬಿಟ್ಟಿದ್ದಾರೆ. ಈ ಯೋಜನೆಗಳು ಮುಗಿದಾಗ Riparian Rights ಹುಟ್ಟಿ ನಾವು ನೀರು ಕಳೆದುಕೊಳ್ಳಬಹುದೆಂಬ ವಾದವನ್ನು ತಜ್ಞರು ಪ್ರತಿಪಾದಿಸುತ್ತಾ ಇದ್ದಾರೆ. ನಾವು ಹಿಂದೆ ಉಳಿದರೆ ನಮಗೆ ನೀರು ದೊರೆಯಲಿಕ್ಕಿಲ್ಲ ಎಂಬ ಸಂಶಯ ಉಂಟಾಗುತ್ತದೆ. ಆದುದರಿಂದ ಸರಕಾರ ಈ ಯೋಜನೆ ಬಗ್ಗೆ ಪೂರ್ಣ ಲಕ್ಷ್ಯವಹಿಸಿ ಯಶಸ್ವಿಯಾಗುವಂತೆ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ವರ್ಷದ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ನನ್ನ ಕೆಲವು ಅಭಿಪ್ರಾಯಗಳನ್ನು ಸೂಚಿಸಿ ಮಾತನಾಡಲು ನಾನು ಈಗ ನಿಂತಿದ್ದೇನೆ. ಈ ವರ್ಷದ ಬಜೆಟ್ಟು ಹೇಗೆ ಇದೆ ಅಂದರೆ ಇದೊಂದು ಮಾಡರ್ನ್ ಆರ್ಟ್ ಎಂದು ಕರೆಯುವ ಪೇಂಟಿಂಗ್ ಇದ್ದ ಹಾಗೆ ಇದೆ. ಅದು ಏನೆಂದರೆ, ಒಬ್ಬ ಕಲಾವಿದನು ಒಂದು ಮ್ಯೂಜಿಯಂನಲ್ಲಿ ಚಿತ್ರ ವಿಚಿತ್ರವಾದಂಥ ಪಟಗಳನ್ನು ಬರೆದು ಪ್ರದರ್ಶನಕ್ಕೆ ಇಟ್ಟಿದ್ದನು. ಅವುಗಳನ್ನು ನೋಡಿ ಇವು ಚೆನ್ನಾಗಿ ಇವೆ ಎಂದು ಯಾರೂ ಹೇಳಿದವರು ಇರಲಿಲ್ಲ. ಇದರಿಂದ ಆ ಪೇಂಟರನಿಗೆ ಬೇಜಾರಾಗಿ ಇನ್ನು ನಾನು ಮಾಡರ್ನ್ ಆರ್ಟ್ ಬರೆಯುತ್ತೇನೆ ಎಂದು ಹೇಳಿ ತನ್ನ ಎಲ್ಲಾ ಬ್ರಶ್ಯುಗಳನ್ನು ಪೇಂಟಿನಲ್ಲಿ ಅದ್ದಿ ಒಂದು ಪಟದ ಮೇಲೆ ಸಿಕ್ಕಾಪಟ್ಟೆ ಎಸೆದು ಬಿಟ್ಟನು. ಪಟದ ಮೇಲೆ ಬ್ರಶ್ಯುಗಳು ಸಿಕ್ಕಾಪಟ್ಟೆ ತಗಲಿ ಬೇರೆ ಬೇರೆ ಬಣ್ಣದ ಚಿತ್ರ ವಿಚಿತ್ರವಾದ ಒಂದು ಚಿತ್ರ ತಯಾರಾಯಿತು. ಅದಕ್ಕೆ ಅವನು ಇದು ಮಾಡರ್ನ್ ಆರ್ಟ್ ಎಂದು ಕರೆದನು. ಈ ಮಾಡರ್ನ್ ಆರ್ಟ್ ಯಾರಿಗೂ ಅರ್ಥವಾಗದೆ ಜನ ಆಶ್ಚರ್ಯಪಟ್ಟರು. ಆ ರೀತಿಯಾಗಿದೆ ನಮ್ಮ ಈ ವರ್ಷದ ಬಜೆಟ್ಟು. ನನಗಂತೂ ಅರ್ಥ ಮಾಡುವುದಕ್ಕಾಗಿಲ್ಲ. ಅಂಥ ಬಜೆಟ್ಟನ್ನು ಬಹು ಹುರುಪಿನಿಂದ ಚಿಕ್ಕ ವಯಸ್ಸಿನ ಹಣಕಾಸಿನ ಮಂತ್ರಿಗಳು ನಮ್ಮ ಮುಂದೆ ಇಟ್ಟಿದ್ದಾರೆ. ಅದನ್ನು ನಾನು ಸ್ವಾಗತ ಮಾಡಬೇಕಾಗಿದೆ. ನಮ್ಮ ಗುಂಡ್ಲುಪೇಟೆ ತಾಲ್ಲೂಕಿಗೆ ಏನಾದರೂ ಕೊಟ್ಟಿದ್ದಾರೆಯೇ ಎಂದು ನೋಡಿದರೆ ಏನೂ ಇಲ್ಲ. ಇವರಿಂದ ಏನಾಗಿದೆ ಅಂದರೆ ಸಮುದ್ರ ರಾಜನ ನೆಂಟತನ ಮಾಡಿದರೂ ಕೂಡ ಅವನಿಗೆ ಉಪ್ಪಿಗೆ ಬಡತನ ತಪ್ಪಲಿಲ್ಲ ಎಂಬ ಗಾದೆಯ ಮಾತು ಜ್ಞಾಪಕಕ್ಕೆ ಬರುತ್ತಿದೆ. ರೆವೆನ್ಯೂ ಮಂತ್ರಿಗಳು 1963ರಲ್ಲಿ ನಮ್ಮ ತಾಲ್ಲೂಕಿನಲ್ಲಿ ಪ್ರವಾಸ ಮಾಡಿದಾಗ್ಗೆ ನಮ್ಮ ತಾಲ್ಲೂಕಿಗೆ ಏನೇನು ಅನುಕೂಲತೆ ಮಾಡಿ ಕೊಡಬೇಕು ಎಂಬುದನ್ನು ಬರೆದು ಇಟ್ಟಿದ್ದಾರೆ. ಮುಖ್ಯವಾಗಿ ಹಳ್ಳಿಗಳಲ್ಲಿ ಕುಡಿಯುವ ನೀರಿನ ಒಂದು ವ್ಯವಸ್ಥೆ ಇಲ್ಲ. ಈ ವ್ಯವಸ್ಥೆಯ ಅನುಕೂಲ ಇದುವರೆಗೂ ಆಗಿಲ್ಲ. ಅದೇ ರೀತಿಯಾಗಿ 1964ರಲ್ಲಿ ಬರೆದ ಕಾಗದ ನನ್ನ ಹತ್ತಿರ ಇದೆ. ಅದನ್ನು ತಮ್ಮ ಮುಂದೆ ಇಡುತ್ತೇನೆ. ಶ್ರೀ ಪುಟ್ಟಸ್ವಾಮಿಯವರು ನಮ್ಮ ತಾಲ್ಲೂಕಿಗೆ ಬಂದಾಗ್ಗೆ ಅಲ್ಲಿ ಸೇರಿದ್ದ ಜನಗಳಿಗೆ ಒಂದು ಮಾತು ಹೇಳಿದ್ದಾರೆ. ''ಹೌದು, ಪಾಪ ನಿಮಗೆ ಬಹಳ ಕಷ್ಟವಿದೆ, ಕ್ಷಾಮ ಬಂದು ಅಭಾವ ಉಂಟಾಗಿದೆ, ನಿಮಗೆ ಸರಕಾರ ಸಹಾಯ ಮಾಡಬೇಕು'' ಎಂದು ಹೇಳಿದರು. ಇದನ್ನು ಹೇಳುವುದಕ್ಕೆ ನನಗೆ ಸಂಕಟವಾಗುತ್ತದೆ. ಅವರು ತಮಾಷೆಗಾಗಿ ಹಾಗೆ ಅಂದಿರಬಹುದೇ, ಎಂದು ಅನ್ನಿಸುತ್ತದೆ. ನಮಗೆ ಸಹಾಯ ದೊರೆಯುತ್ತದೆಯೇ? ಸರಕಾರದ ದೃಷ್ಟಿಯಲ್ಲಿ ರಾಜ್ಯದ ಎಲ್ಲಾ ಪ್ರಜೆಗಳೂ ಒಂದೇ. ಸರಕಾರಕ್ಕೆ ನಾವು ಯಾವಾಗಲೂ ಅನ್ಯಾಯ ಮಾಡಿಲ್ಲ. ನಮ್ಮ ತಾಲ್ಲೂಕಿನ ಜನರು ಕಾಲ ಕಾಲಕ್ಕೆ ಕಂದಾಯ ಸರಕಾರಕ್ಕೆ ಕೊಟ್ಟಿದ್ದಾರೆ ಸರಕಾರ ಹೇಳಿದಂತೆ ನಡೆದಿದ್ದಾರೆ. ಗುಂಡ್ಲುಪೇಟೆ ಜನ ಒಳ್ಳೆ ಜನ ಎಂಬುದು ಸರಕಾರಕ್ಕೆ ಗೊತ್ತಿದೆ. ಆದುದರಿಂದ ನಮ್ಮ ತಾಲ್ಲೂಕಿಗೆ ಮಾಡಿ ಕೊಡಬೇಕಾದ ಅನುಕೂಲತೆಗಳನ್ನು ಸರಕಾರ ಬೇಗ ಮಾಡಿಕೊಡುತ್ತಾರೆಂದು ನಾನು ಭಾವಿಸಿದ್ದೇನೆ. ಆ ನಂಬಿಕೆ ನನಗೆ ಇದೆ.

ಇನ್ನು ಪಂಪ್‌ಸೆಟ್ಟು ಒದಗಿಸುವ ವಿಚಾರ ಹೇಳಬೇಕಾಗಿದೆ. ನಮ್ಮ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಯಾವ ರಿಲೀಫ್ ವರ್ಕ್ಸ್ ಕೂಡ ತೆಗೆದುಕೊಂಡಿಲ್ಲ. ಯಾವ ಸಣ್ಣ ನೀರಾವರಿ ಕೆಲಸವನ್ನೂ ಪ್ರಾರಂಭ ಮಾಡಿಲ್ಲ. ಅಗ್ರಿಕಲ್ಚರಲ್ ಡೆವಲಪ್‌ಮೆಂಟಿಗೆ ಬೇಕಾಗುವ ಯಾವ ಅನುಕೂಲತೆಯನ್ನೂ ಒದಗಿಸಿಕೊಟ್ಟಿಲ್ಲ. ಇದೆಲ್ಲವನ್ನೂ ಹೇಳುವುದಕ್ಕೆ ನಿಜವಾಗಿಯೂ ಸಂಕಟವಾಗುತ್ತದೆ. ಸ್ವಲ್ಪ ವಿಚಾರ ಮಾಡಿ ನೋಡಿದರೆ, ಸರಕಾರವು ಸಾವಿರಾರು ರೂಪಾಯಿ ಮನಸ್ಸಿಗೆ ಬಂದ ಹಾಗೆ ಖರ್ಚು ಮಾಡುತ್ತಾರೆ. ನ್ಯಾಯವಾದ ಕೆಲಸಕ್ಕೆ ಸರಕಾರ ಖರ್ಚು ಮಾಡುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಪಂಪುಸೆಟ್ಟು ಒದಗಿಸುವ ಬಗ್ಗೆ ಚೀಫ್ ಮಿನಿಸ್ಟರ್ ಅವರಿಗೆ ಒಂದು ಪಟ್ಟಿ ಕೊಟ್ಟಿದ್ದೆ. ಅನ್ಯಾಯವಾಗಿರುವುದನ್ನು ಸರಿಪಡಿಸುತ್ತೇನೆಂದು ಅವರು ಹೇಳಿ ಮೂರು ನಾಲ್ಕು ವರ್ಷವಾಯಿತು. ಈ ವಿಚಾರವನ್ನು ಶ್ರೀ ಆರ್. ಎಂ. ಪಾಟೀಲ್ ಅವರಿಗೂ ಹೇಳಿದೆ ಅವರು ನಮ್ಮ ತಾಲ್ಲೂಕಿಗೆ ಬಂದಾಗ್ಗೆ ಹೇಳಿದರು, ಅವರ ಪ್ರದೇಶದಲ್ಲಿ ರೈತರನ್ನು ಕರೆದು ಪಂಪುಸೆಟ್ಟು ಕೊಟ್ಟಿದ್ದಾರೆ

ನಿಮಗೆ ಮಾತ್ರ ಏತಕ್ಕೆ ಕೊಟ್ಟಿಲ್ಲ ಎಂದು ಕೇಳಿದರು. ಅವರು ಈ ರೀತಿ ನಿಜ ಹೇಳಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಮೂರು ನಾಲ್ಕು ವರ್ಷವಾದರೂ ಕೂಡ ಇದುವರೆಗೆ ನಮ್ಮ ತಾಲ್ಲೂಕಿಗೆ ಪಂಪುಸೆಟ್ಟು ಬಂದಿಲ್ಲ. ಈ ಬಗ್ಗೆ ವಿಚಾರಿಸಿದಾಗ್ಗೆ ಇನ್ನೂ ರವಾನೆಯಾಗಿಲ್ಲ ಎಂದು ತಿಳಿದುಬಂದಿದೆ. ಯಾಕೆ ರವಾನೆಯಾಗಿಲ್ಲ ಎಂದು ಕೇಳಿದರೆ ಈಗ ಮೂರು ವರ್ಷ ಕಾಲ ಮಿತಿ ಆಗಿ ಹೋಗಿದೆ ಅದಕ್ಕಾಗಿ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು.

3-00 P.M.

ಅಲ್ಲಿರತಕ್ಕ ಆಪರೇಟರ್‌ಗೆ 100 ರೂಪಾಯಿ ಕೊಟ್ಟಲ್ಲದೆ ಅವನು ಹತ್ತಿರ ಕೂಡ ಬರುವುದಿಲ್ಲ. ಅಲ್ಲದೆ ಅನೇಕ ಜನಗಳು ಕೊಟ್ಟ ಹಣವನ್ನು ಅವನು ಜೇಬಿಗೆ ಹಾಕಿಕೊಳ್ಳುತ್ತಾನೆಯೇ ಹೊರತು, ಆ ಹಣವನ್ನೂ ಸರ್ಕಾರದ ಬೊಕ್ಕಸಕ್ಕೆ ಕೊಡುವುದಿಲ್ಲ. ಈ ವಿಚಾರದಲ್ಲಿ ನಾನು ಮತ್ತು ಶ್ರೀಮಾನ್ ಎಂ. ಸಿ. ಬಸಪ್ಪನವರು ಸೇರಿ ಎಕ್ಸಿಕ್ಯುಟೀವ್ ಇಂಜನಿಯರ್ ಮತ್ತು ಸೂಪರಿಂಟೆಂಡೆಂಟ್ ಇಂಜನಿಯರಿಗೆ ಕಾಗದಗಳನ್ನು ಬರೆದು ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆವು. ಅದಕ್ಕೆ ಅವರು, ''ಅವನು ಬಂದು ಕೇವಲ ಒಂದು ವರ್ಷವಾಗಿದೆ, ವರ್ಗಾಮಾಡುವುದಕ್ಕಾಗುವುದಿಲ್ಲ, ಸರ್ಕಾರದ ರೂಲ್ಸ್ ಆ ರೀತಿ ಇದೆ, ನಾವು ಏನೂ ಮಾಡುವುದಕ್ಕಾಗುವುದಿಲ್ಲ, ಬೇಕಾದರೆ ಸರ್ಕಾರಕ್ಕೆ ಕಾಗದ ಬರೆಯಿರಿ,'' ಎಂದು ತಿಳಿಸಿದರು. ಜನಗಳಿಗೆ ಇಷ್ಟು ಅನ್ಯಾಯವಾಗುತ್ತಿದ್ದರೂ ಸಹ ಸೂಪರಿಂಟೆಂಡೆಂಟ್ ಇಂಜನಿಯರ್ ಯಾವ ಶಿಕ್ಷೆಯನ್ನೂ ಅತನಿಗೆ ಕೊಟ್ಟಿಲ್ಲ. ಈ ರೀತಿಯಾದರೆ ಜನಗಳು ಏನು ಮಾಡಬೇಕು ಎಂಬುದು ಗೊತ್ತಾಗುವುದಿಲ್ಲ, ರಿಲೀಫ್ ಕಾಮಗಾರಿಗಳಿಗೆ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು ನಿಮ್ಮ ಹತ್ತಿರವೇ ಇದೆಯೇ ವಿನಾ ಜನಗಳಿಗೆ ಇನ್ನೂ ತಲುಪಿಲ್ಲ. ಈ ಹಣವನ್ನು ಸರ್ಕಾರದವರು ಪ್ರತಿಯೊಂದು ಜಿಲ್ಲೆಗೂ ಹಂಚಿದಮೇಲೆ, ಸಂಬಂಧಪಟ್ಟ ಅಧಿಕಾರಿಗಳು ಈ ಹಣವನ್ನು ಜನಗಳಿಗೆ ಸರಿಯಾಗಿ ಕೊಡುವುದಿಲ್ಲ. ಸರಿಯಾದ ಲೆಕ್ಕಗಳನ್ನು ಸಹ ಇಡುವುದಿಲ್ಲ. ಈ ವಿಚಾರದಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಮತ್ತು ಎಕ್ಸಿಕ್ಯುಟಿವ್ ಆಫೀಸರ್‌ಗಳು ತಹಶೀಲ್‌ದಾರರಿಗೆ ಸರಿಯಾದ ಲೆಕ್ಕಗಳನ್ನು ಕೊಡದಿದ್ದರೆ ತಹಶೀಲ್‌ದಾರರಿಗೆ ಸಂಬಳ ಕೊಡುವುದನ್ನು ನಿಲ್ಲಿಸುತ್ತಾರೆ. ಈ ರೀತಿ ಒಂದೊಂದು ಸಾರಿ 3-4 ತಿಂಗಳವರೆಗೆ ಸಂಬಳ ನಿಲ್ಲಿಸಿದರೆ, ಈ ಕಷ್ಟಕಾಲದಲ್ಲಿ ಅವರು ಏನು ಮಾಡಬೇಕು ? ಇವರುಗಳ ಜಗಳದಲ್ಲಿ ರಿಲೀಫ್ ಕಾಮಗಾರಿಗಳು ಯಾವ ರೀತಿ ನಡೆಯಬೇಕು ? ಸರ್ಕಾರದವರು ಈ ವಿಚಾರದಲ್ಲಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಮೈನರ್ ಇರಿಗೇಷನ್ ಕೆಲಸ ನೋಡುವುದಾದರೆ ನಮ್ಮ ತಾಲ್ಲೋಕಿನಲ್ಲಿರುವ 8-10 ಕೆರೆಗಳ ಪೈಕಿ, ಈ ವರ್ಷ ಕೇವಲ ಒಂದು ಕೆರೆಗಾಗಿ ಒಂದು ಲಕ್ಷ ರೂಪಾಯಿ ಒದಗಿಸಿದ್ದಾರೆ. ಶ್ರೀಮಾನ್ ಆಲೂರು ಹನುಮಂತಪ್ಪನವರಿಗೆ 2 ವರ್ಷದಿಂದಲೂ ಈ ವಿಚಾರವಾಗಿ ಕಾಗದ ಬರೆಯುತ್ತಲೇ ಇದ್ದೇನೆ, ಅವರು ಕೇಂದ್ರದಿಂದ ಹಣ ಬಂದಿಲ್ಲ, ಬಂದಕೂಡಲೆ ನಿಮ್ಮ ತಾಲ್ಲೂಕಿನ ಕೆರೆಗಳ ದುರಸ್ತಿಗಾಗಿ ಹಣ ಒದಗಿಸುತ್ತೇವೆ ಎಂದು ಹೇಳುತ್ತಲೇ ಬಂದಿದ್ದಾರೆ. ನನಗಂತೂ ಅರ್ಥವಾಗುತ್ತಿಲ್ಲ. ನಮ್ಮ ತಾಲ್ಲೋಕಿನಲ್ಲಿರುವ ಮಂಟೀಗೆರೆ ಮತ್ತು ಹೆಬ್ಬಾಳ ಕೆರೆಗಳನ್ನಾದರೂ ಈ ವರ್ಷದಲ್ಲೇ ತೆಗೆದುಕೊಳ್ಳಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶರಾವತಿ ಪ್ರಾಜೆಕ್ಟ್‌ನಿಂದ ಬರುವ ಪವರನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಕೋಟಿ ಕೋಟಿ ರೂಪಾಯಿ ಖರ್ಚು ಮಾಡಿ ಕಟ್ಟಿದರು. ನಮ್ಮ ಜನಗಳಿಗೆ ಅದರ ಉಪಯೋಗವಾಗದೆ ಬೇರೆ ರಾಜ್ಯಗಳಿಗೆ ಕೊಡುತ್ತಿದ್ದಾರೆ. ಮುಂದುವರೆದ ದೇಶಗಳಲ್ಲಿ ಜನಗಳ ಒಂದು ಮಟ್ಟವನ್ನು ಅಳೆದು ಅವನಿಗೆ ಎಷ್ಟು ಯುನಿಟ್ ಪವರ್ ಬೇಕು, ಎಷ್ಟು ಖರ್ಚು ಮಾಡುತ್ತಾನೆ ಎಂದು ಲೆಕ್ಕ ಹಾಕಿ ಸರಿಯಾದ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ನಮ್ಮ ದೇಶದ ಜನರು ಅಡಿಗೆಗೆ ಪವರನ್ನು ಉಪಯೋಗಿಸದೆ ಕಾಡಿನಲ್ಲಿರುವ ಮರಗಳನ್ನು ಕಡಿದು ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಪವರ್ ರೇಟನ್ನು ಕಮ್ಮಿಮಾಡಿ ಅಡಿಗೆ ಮಾಡಿಕೊಳ್ಳಲು ಜನಗಳಿಗೆ ಕೊಟ್ಟರೆ ಸರಿಯಾಗಿ ವಿನಿಯೋಗವಾಗುತ್ತದೆ ಆದರಿಂದ ಹೆಚ್ಚು ಉತ್ಪತ್ತಿ ಬರುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಉಪಯೋಗ ಸರಿಯಾದ ರೀತಿಯಲ್ಲಿ ಆಗಬೇಕಾದರೆ ಮದ್ರಾಸ್, ಬೊಂಬಾಯಿನಲ್ಲಿರುವಂತೆ ವಿದ್ಯುತ್ ರೈಲ್ವೆಯನ್ನು ಬೆಂಗಳೂರಿನಲ್ಲೂ ಹಾಕಬೇಕು. ಕಾರ್ಪೋರೇಷನ್ ಅವರು ಇದನ್ನು ಯೋಚನೆ ಮಾಡಬೇಕು. ಈಗ ಬಸವನಗುಡಿ ಮತ್ತು ಜಯನಗರದಿಂದ ಬರುವುದಕ್ಕೆ ಸರಿಯಾಗಿ ಬಸ್‌ಗಳು ಸಿಗದೆ ತೊಂದರೆಯಾಗಿದೆ. ಬೆಳಿಗ್ಗೆ 6 ಘಂಟೆಗೆ ಬಸ್‌ಸ್ಟಾಪ್‌ನಲ್ಲಿ ನಿಂತರೆ ವಿಧಾನ ಸೌಧಕ್ಕೆ ಹತ್ತೂವರೆ ಘಂಟೆಗೆ ಮುಂಚೆ ತಲುಪುವುದಕ್ಕಾಗುವುದಿಲ್ಲ. ಆದ್ದರಿಂದ ಈ ವಿದ್ಯುತ್ ರೈಲಿನ ವಿಚಾರವನ್ನು ಮನಸ್ಸಿಗೆ ತೆಗೆದುಕೊಳ್ಳಬೇಕು.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ವ್ಯವಸಾಯ ಇಲಾಖೆಯನ್ನು ತೆಗೆದುಕೊಂಡರೆ, ಇದು ನಿದ್ರೆಹೋಗಿಬಿಟ್ಟಿದೆ. ಎಷ್ಟು ಕಾಗದ ಬರೆದರೂ ಅಲ್ಲಿಯ ಜನಗಳಿಂದ ಉತ್ತರ ಬರುವುದಿಲ್ಲ. ಅಧಿಕಾರಿಗಳಿಗೇ ಕಾಗದ ಬರೆಯಲಿ, ಸೆಕ್ರೆಟರಿಯವರಿಗೆ ಕಾಗದ ಬರೆಯಲಿ, ಮಂತ್ರಿಗಳಿಗೇ ಕಾಗದ ಬರೆಯಲಿ, ಯಾರಿಂದಲೂ ಉತ್ತರ ಬರುವುದಿಲ್ಲ. ನಾಯಿ ತಾನು ಹುಲ್ಲು ತಿನ್ನುವುದಿಲ್ಲ, ಹಸುವಿಗೂ ತಿನ್ನುವುದಕ್ಕೆ ಬಿಡುವುದಿಲ್ಲ, ಎನ್ನುವ ರೀತಿಯಾಗಿದೆ. ಲಕ್ಷಾಂತರ ರೂಪಾಯಿ ಬಾಳುವ ಸಾಮಾನುಗಳು, ಟ್ರಾಕ್ಟರ್‌ಗಳು ವರ್ಕ್‌ಷಾಪ್‌ನಲ್ಲಿ ಕೊಳೆಯುತ್ತಾ ಬಿದ್ದಿದೆ. ತಾವೂ ಉಪಯೋಗಿಸುವುದಿಲ್ಲ, ಫ್ಯಾಕ್ಟರಿಯವರಿಗೆ ಮಾರಾಟವನ್ನೂ ಮಾಡುವುದಿಲ್ಲ. ಲಕ್ಷಾಂತರ ರೂಪಾಯಿಗಳ ಸಾಮಾನುಗಳನ್ನು ಅಪ್‌ಸೆಟ್ ರೇಟಿಗೆ ಮಾರುವುದಕ್ಕಾಗದಿದ್ದರೆ ಆಕ್ಷನ್‌ಗೆ ಇಟ್ಟರೂ ಬೇಕಾದಷ್ಟು ಹಣ ಬರುತ್ತದೆ. ಬಿಸಾಡುವುದಕ್ಕಿಂತ ಈ ರೀತಿ ಮಾಡುವುದು ಒಳ್ಳೆಯದು. ನಾನು ವಿದೇಶಗಳಿಗೆ ಹೋದಾಗ ಅಲ್ಲಿಯವರು ಹೇಳಿದರು, ನಿಮ್ಮ ಮಂತ್ರಿಗಳು ಊಟಮಾಡುವುದಕ್ಕೆ ಮಾತ್ರ ಇಲ್ಲಿಗೆ ಬರುತ್ತಾರೆ, ಯಾವ ಸಹಾಯವನ್ನೂ ಸರಿಯಾಗಿ ಕೇಳುವುದಿಲ್ಲವೆಂದು ಹೇಳಿದ್ದನ್ನು ಕೇಳಿ ನನಗೆ ನಿಜವಾಗಿಯೂ ಪಶ್ಚಾತ್ತಾಪವಾಯಿತು. ಹೈಬ್ರಿಡ್ ಬೀಜ ನಮ್ಮಲ್ಲಿ ಹೆಚ್ಚು ಸಿಗುತ್ತದೆ, ಎಷ್ಟು ಬೇಕಾದರೆ ಕೊಡುತ್ತೇವೆಂದು ಹೇಳಿದರು. ಆದ್ದರಿಂದ ಕೊಯಮತ್ತೂರ್‌ನಿಂದ ಹೈಬ್ರಿಡ್ ಬೀಜವನ್ನು ತರಿಸಿ ಕೆ.ಜಿ.ಗೆ 8-9 ರೂಪಾಯಿಗೆ ಮಾರುವುದಕ್ಕಿಂತ ವಿದೇಶಗಳಿಂದ ಹೆಚ್ಚು ಹೆಚ್ಚು ತರಿಸಿ ಕಡಿಮೆ ದರದಲ್ಲಿ ರೈತರಿಗೆ ಒದಗಿಸಬೇಕು. ಶ್ರೀಮಾನ್ ನಾರಾಯಣಗೌಡರು ವಿದೇಶಕ್ಕೆ ಹೋಗಿದ್ದಾರೆ, ಅವರಿಗೆ ಕಾಗದ ಬರೆಸಿ ವಿದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಹೈಬ್ರಿಡ್ ಬೀಜವನ್ನು ತರಿಸುತ್ತಾರೆಂದು ನಂಬಿದ್ದೇನೆ.

ವಿದ್ಯಾ ಇಲಾಖೆಯ ವಿಷಯಕ್ಕೆ ಬಂದರೆ, ಅದು ಬರೀ ಕನ್‌ಫ್ಯೂಷನ್ ಆಗಿದೆ. ಏಕೆ ಆ ರೀತಿಯಾಗಿದೆ ಗೊತ್ತಿಲ್ಲ. ತಾಲ್ಲೋಕ್ ಬೋರ್ಡ್‌ನವರು, ವಿದ್ಯಾ ಇಲಾಖೆಯವರು ಸೇರಿಕೊಂಡು ಯಾವ ಸ್ಕೂಲುಗಳೂ ಸರಿಯಾಗಿ ನಡೆಯುವುದಕ್ಕೆ ಬಿಡುವುದಿಲ್ಲ. ಸರ್ಕಾರದವರು ಟ್ರಾನ್ಸ್‌ಫರ್ ಮಾಡಿದರೆ, ತಾಸಿಲ್ದಾರರು ಕ್ಯಾನ್ಸಲ್ ಮಾಡಿಸುತ್ತಾರೆ. ಸ್ಕೂಲುಗಳಲ್ಲಿ ಸರಿಯಾಗಿ ಉಪಾಧ್ಯಾಯರುಗಳು ಇಲ್ಲದೆ ಗೋಳಾಟವಾಗಿದೆ. ಸರ್ಕಾರದವರು ಇದನ್ನು ಸರಿಯಾಗಿ ನೋಡಬೇಕು. ಯೂನಿವರ್‌ಸಿಟಿ ಲೆವಲ್‌ಗೆ ಬಂದರೆ ಹಿಂದೆ ಆಗಿಲ್ಲ, ಮುಂದೆ ಆಗುವುದಿಲ್ಲ, ಆ ರೀತಿಯಾಗಿದೆ. ಪ್ರೊಫೆಸರ್‌ಗಳು ಬೇರೆ ಬೇರೆ ಯೂನಿವರ್‌ಸಿಟಿಗಳಿಗೆ ಹೋಗಿ ಎಕ್ಸಾಮಿನರ್‌ಗಳಾಗುತ್ತಿದ್ದಾರೆ. ಇಲ್ಲಿಯವರಿಗೆ ರೀಡರ್‌ಗಳಾಗುವುದಕ್ಕೆ ಲಾಯಕ್ ಇಲ್ಲ ಎಂದು ಹೇಳುತ್ತಾರೆ. ಮೈಸೂರು ಯೂನಿವರ್‌ಸಿಟಿಯಲ್ಲಿ ಈ ರೀತಿ ಅನ್ಯಾಯಗಳಾಗಬಾರದೆಂದು ದೂರದೃಷ್ಟಿಯಿಂದ ಹೇಳುತ್ತಿದ್ದೇನೆ.

ರೈತರುಗಳು ಟ್ರಾಕ್ಟರ್ ಉಪಕರಣಗಳನ್ನು ತೆಗೆದುಕೊಳ್ಳುವುದಕ್ಕೆ ಸ್ಟಾಂಪ್ ಫೀ 1200 ಕೊಡಬೇಕಾಗುತ್ತದೆ. ಮೊದಲೇ 20-23 ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡು ಕೊಂಡುಕೊಳ್ಳುತ್ತಾನೆ, ಇದರ ಜೊತೆಗೆ ಇಷ್ಟೊಂದು ಸ್ಟಾಂಪ್ ಫೀ ಕೊಡುವುದು ಯಾವ ನ್ಯಾಯ ? ಇದರ ಬಗ್ಗೆ ಸ್ವಲ್ಪ ರಿಯಾಯಿತಿ ತೋರಿಸಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಟ್ರಾನ್ಸ್‌ಪೋರ್ಟ್ ವಿಚಾರ ಮಾತನಾಡುತ್ತಾ, ನಮ್ಮ ತಾಲ್ಲೋಕಿನಲ್ಲಿ ಏಪ್ರಿಲ್ ಒಂದನೇ ತಾರೀಕಿನಿಂದ ನ್ಯಾಷನಲೈಸ್ ಮಾಡುವುದಕ್ಕೆ ಹೊರಟಿದ್ದಾರೆ. ಈಗ ನಡೆಸುತ್ತಿರುವುದೇ ಸಾಕಾಗಿದೆ. ಈಗ 140-150 ಬಸ್‌ಗಳನ್ನು ಖಾಸಗೀಯವರು ಚೆನ್ನಾಗಿ ನಡೆಸುತ್ತಿದ್ದಾರೆ. ನಿಮ್ಮ ಬಸ್‌ಗಳಲ್ಲಿ ಶೇಕಡ 40-50 ಸರಿಯಾಗಿ ನಡೆಯುವುದಿಲ್ಲ, ಕುಂಟುತ್ತಾ ಹೋಗುತ್ತವೆ, ಅಲ್ಲಲ್ಲೇ ನಿಂತುಕೊಳ್ಳುತ್ತವೆ. ಇರುವ ಬಸ್‌ಗಳನ್ನೇ ಸರಿಯಾಗಿ ನಡೆಸಿಕೊಂಡು, ನಂತರ ಬೇಕಾದರೆ ನ್ಯಾಷನಲೈಸ್ ಮಾಡಿ, ಸುಮ್ಮನೆ ಪ್ರಯಾಣಿಕರಿಗೆ ತೊಂದರೆ ಕೊಡಬಾರದೆಂದು ಹೇಳುತ್ತೇನೆ. ನನ್ನ ಟೈಮ್ ಮುಗಿದುಹೋಯಿತು. ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ಈ ಬಡ್ಜೆಟ್ ಬಹಳ ಸುಂದರವಾಗಿದೆಯೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† Sri V. S. PATIL (Belgaum).—Sir, I have just now heard the learned speech made by one of our lady members who had criticised the Goverhment for so many mistakes committed in the administration and I feel, Sir, that she wants to join the Congress in order to repair all these mistakes. She expects to purify the administration of the Congress by rectifying these mistakes. We hope that she may succeed in her attempts.

Sir, regarding the financial position of the State, I am studying this financial position since the inception of the new Mysore State. In the year 1956, the then Finance Minister Sri T. Mariappa on 22nd December 56 placed before this House a deficit budget to the tune of Rs. 4·50 crores. Then in the next budget that was presented on 15th June 1957, the net deficit mounted up to 9.36 crores. In his budget speech he has stated, Sir, that there is scope for economy and he will try to effect it. On page 7 of that speech he has given for the first time the debt position of our State and the figure is Rs. 77,38,70,000. That was the debt position on 1st April 1957. And in the subsequent budget speeches, the debt is mentioned on 3rd March 1959 by the Finance Minister as amounting to Rs. 101.76 crores. Then our Hon'ble the temporary Chief Minister Sri S. R. Kanthi on 22nd March 1962 gave these figures of debt as Rs. 137.73 crores and today according to the present Finance Minister the debt position is Rs. 268 crores plus the overdraft of Rs. 39.49 crores. The total debt comes to Rs. 306.49 crores. It is the position of debt that we have to pay to others. Nobody will say that it is a good sign. On the contrary the Finance Commission said 'Development expenditure should be adjusted to the available resources and the State should not run into revenue deficit even for meeting such expenditure.' We earnestly trust that they will bear this in mind in shaping their financial policy. That is the earnest request made by the Finance Commission but I do not think that anybody has cared to look into these matters at all, because debts are mounting every day and according to our Finance Minister at present, the debt discharge is not possible at all. Under these circumstances, what is to be done? That is the most important thing before this House. That debts are mounting and the expenditure is mounting and there is absolutely no hope that anything good can be turned out at the hands of the present Government. Sir, there are some suggestions made by the experts from various corners as to how to solve this problem of debts due by the Government. In my opinion, Sir, the debt position so far as debts that are incurred for the welfare of the people, *i.e.*, for education, for health and for drinking water supply, all these necessities of life are concerned, these amounts taken from the Central Government or by way of advances of debts must be treated as ordinary revenue of which the Central Government must be held liable to pay. The Central Government is recovering income tax inter-State salestax, excise tax and even railway surcharge from the residents of various States. Why those sums should not be returned to the particular State? Why should we wait and ask just like alms from the Central Government to meet our day to day expenditure? When our people pay money, we must have a right for that money even though it is collected by the Centre. Such a law or such a convention must be established in order to see that our economy is adjusted.

Sri M. Y. GHORPADE (Sandur).—I would like to know if this principle was followed what finances would remain for the Centre at all.

Sri V. S. PATIL.—Sales Tax and excise are not the main source. Their main source is the Customs. Customs is a huge amount. Let the customs be there with them; Railways are also there; we are not claiming all the thing; Only the surcharge that is collected on the railway fare should be returned to the State. That is why I should like to suggest that these are minor things subsequently introduced by the Centre; sales tax, excise tax on certain cloths, etc.; Those things should be returned to the State. Then alone it is possible for us to wipe out this huge mounting debt and to maintain our progress. Otherwise, it is not possible at all. That is why I should like to suggest that all the State Governments must try to convince the Centre that unless those things are done, unless the taxes that are collected by them within the State are returned to us, it is not possible to run the Government. Unless these things are done, it is not possible to improve our financial condition at all. There is another way to get over this difficulty and that way is we have to change the cutlook so far as the administration is concerned. Uptil now what our Congress friends are doing is to spend money regardless of results. Money that is collected by way of taxes or by any means they want to spend. You read all these documents of various Departments; you will find that they have complied with the provisions in the Budget by spendig money. What is turned out is not given and they will never give it. That is the difficulty. So, we have to change this outlook by looking to them to spend all the money, but we have to look to what is the realisation by spending the money. We do not care if the amount spent is less. We must see that the results are realised and that must be the criteria. The outlook must be changed from this angle. Otherwise we will be going on spending the money and we call it merely wasting the money because there is no resnlt or there is no return at all. That is why we have to change the outlook so far as spending of our huge amounts on various items is concerned. Sir, another thing I have to impress is that there is absolutely no consciousness amongst our Government servants with regard to duty. Duty consciousness is completely absent,and the Government servant feels that he belongs to a partieular Community and if he can command some influence with one of the ruling bosses of the Congress, then he need not worry about duty at all. This sort of a thing is really causing chaotic conditions in the administration. This must be wiped out and I should like to appeal to the Leader of the House who is now fully entrenched in power—nobody at least for a decade can shake him from his position. At least now he should change his attitude and see that Government servants are made duty consciousness. They must be made to feel that they are taking money from the public for the purpose of doing a particular duty. Unless that consciousness is created, it is very difficult to curtail expenditure that is mounting up day by day.

The second thing is that there must be honesty in enforcing laws. Sir, we pass here laws and we give so many power to the Government. But at the time of implementation, if there is no honesty in the minds of the Government Officers, the laws become ineffective. Take for

example, we have passed the Better Levy and Water Rate Bill in 1957. What is the recovery ? Every time we are changing and changing that law and making rules, and the Department is completely silent about recovery. We expect Sir, that these schemes which have been completed, ought to have given us return equitable at least, which will cover the interest for the amount that has been spent.

There is another point which I should like to suggest. Real encouragement must be given to the producer either in the factory or in the field. At prerent only idlers who do not work either in the factory or on the field who produces wealth, are given more importance. They have become the bosses of the ruling party and they really spoiling the whole structure of the country and they have spoiled even before. Sir, if we look to foreign countries, you will find that, that every man in whatever position, he may be, he always respects labour. He will not shirk his reponsibility or spend his time in idleness. We have seen Sir, all these European countries where the last world war was fought were devastated, but within the space of a decade, they reconstructed the whole thing. And what is ours ! There was no war and we have become practically beggars at the doors of the other countries. This shows that the idler who does not work is much better than the person who works either in the factory or on the field. Manual work is treated as a degradation by them. This outlook must be changed. Unless we reconstitute our society, it is not possible for us to overcome these difficulties. Dignity of labour must be encouraged. We have seen in some countries that person who turns better work is given reward. In our country, I do not think there is no example where labourer who turns out manual work has ever been given any reward. That is really strange If other countries are progressive, the main reason is everybody puts up his effort according to his ability in order to achieve the production. But in our country, we merely rely upon those who preach, write books or read newspapers they are give nmuch-more importance than a person who does manual labur. That outlook has got to be changed.

The huge wastage that is being committed in the administration has got to be curtailed. I know definitely from most reliable persons, most responsible persons, that we pay these clerks simply to come here at 10 of the clock and leave the Secretariat by 4.30 P.M. They do not turn out any work—sometimes they do not touch even a single paper. This is the way in which administration is being carried on. All the Departments are over-crowded with Government servants. This shows that even though the past finance ministers have stated that they will try to cut down expenditure, it has not come into effect, because there is no co-ordination between one department and the other, and between one Minister and the other and between the Minister and his department, and the Finance Minister is unable to curtail any expenditure. Sir, if I am allowed to mention, our Hon'ble Minister Sri Ramakrishna Hegde has stated in a public meeting at Mangalore, or Karwar that no work—no buildings or roads or bridges will be taken up

(SRI V. S. PATIL)

because of financial stringency. But on the contrary in the Gulbarga Division, the PWD has published notifications calling for tenders for more than 12 lakhs work of construction, only for road, bridges and buildings. This shows that there is absolutely no co-ordination between the Finance Department and the P.W.D. or even between the Finance Department and any other Department of Government. They go on in their own way. That is why I request that this waste must be stopped. Drastic cuts must be effected in the number of Government servants. My eyes are specially on this so-called investigation department in the P.W.D. There is a huge wastage of public funds. The officers have absolutely no work and still the Government is creating new circles for investigation work. There are reports from the heads of department that is unecessary, there is no work for the existing staff. But stiil the Government goes on creating posts and appointing big officers. This is nothing but waste, criminal waste of public funds. I should like to submit that all these things and services which are quite unnecessary, which are superfluous must be curtailed immediately.

The travelling allowance is mounting up day by day and our Ministers and first class officers now traval only by plane. They are not resorting to the usual railway travel Apart from the recent accidents in the air travel, we are looking only from the point of view of finances, I should like to request that all our Hon'ble Ministers should not travel by plane, not merely due to accidents, but we do want to lose them. And the huge amounts which are drawn from the treasury on this account may be reduced considerably.

One more thing which I should like to suggest is that the Finance Department should be independent. It must carry out strict economy in all the departments. Since this department is in charge of collection of taxes, it become rather difficult for them to supervise the execution of works or the carrying out of economy instructions in the Depariments.

MR. SPEAKER.—The hon'ble Minister is common. The whole set of officers in the Department is common.

SRI V. S. PATIL.—The Finance Department is now controlling the collection of taxes, income-tax, sales-tax and some other taxes. This should be handed over to the Revenue Department and the Finance Department should look to the strict enforcement of expenditure and to effect enconomy. They must have over-riding powers over all the departments to see that no wastage is committed in any matter at all. That power must be given to the Finance Department and then only, it is likely that we can have some retrenchment or saving from the wastage. Otherwise, it is not possible at all.

Now, Sir, it is of no use making unrealistic planning. I have seen, and to quoto an example, take the instance of agriculture, in the budget of 66-67. You will see that in every respect, in no case has the target been achieved by the Agricultural Department. Why? Because the officers sitting here in the Secretariat make the Plan. At the time of

execution when it goes down to the level of the field, there is no planning at all. Those people do not know what to do. That is why this unrealistic planning must be stopped.

One more thing which I should like to refer is we are in need of foodgrains and we are trying our level best to increase the foodgrains. But we must remember, Sir, that for increasing the capacity of the soil for more yield, it requires manure. Due to the growth of cities and towns, and a majority of human beings are residing in cities and towns, the residue or compost that is required for the soil in the countryside is lacking. The Maharashtra Government have passed an order recently making it compulsory to all municipalities, whether district or town municipality, big or small, that they must prepare compost within their area. They cannot allow the sullage water or nightsoil to be wasted, and the municipality which does not do this will loss all Government grants. That is the order passed by the Government there. Why should this Government not pass such an order and see that the compost is prepared in the every town and city and especially in this city, which is the biggest one in our State. We have seen the huge wastage of compost and and the sullage water which is flowing away in this city. It must be converted in fertilisers. In order to meet the deficit of fertilisers, this will be one of the good things that we can do.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಸಭಾಧ್ಯಕ್ಷರೇ, ಸಭೆಯ ಮುಂದೆ ನಮ್ಮ ಮಾನ್ಯ ಅರ್ಥ ಸಚಿವರು ಇಟ್ಟ ಬಜೆಟ್ಟನ್ನು ಸ್ವಾಗತಿಸುತ್ತ ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ನಮ್ಮ ಮಾನ್ಯ ಅರ್ಥ ಸಚಿವರು ಈ ಆಯವ್ಯಯ ಅಂದಾಜು ಪಟ್ಟಿಯನ್ನು ಮುಚ್ಚುಮರೆ ಇಲ್ಲದೆ ಅದರ ಚಿತ್ರವನ್ನು ಇದ್ದಹಾಗೆಯೇ ನಮ್ಮ ಮುಂದೆ ಇಟ್ಟಿರುವುದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಅವರ ಭಾಷಣದ ಮೂರನೆ ಪ್ಯಾರಾದಲ್ಲಿ ಅಂಕಿ ಅಂಶಗಳನ್ನು ಬೇರೆ ಪ್ಲಾನ್ ವಿಚಾರ ಇಲ್ಲಿ ಬಿಟ್ಟಿದ್ದು ಸ್ವಾಗತಾರ್ಹ, ಸ್ತುತ್ಯ.

10ನೆಯ ಪ್ಯಾರಾದಲ್ಲಿ ಉದ್ಯೋಗ ವಿನಿಮಯ ಸಂಸ್ಥೆಯ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಇದರಲ್ಲಿ ಕೆಲಸ ಸಿಕ್ಕದ ಜನರ ಸಂಖ್ಯೆ ಕಡಮೆಯಾಗಿದೆ ಎಂದು ಹೇಳಿದ್ದಾರೆ. ಈಗ ಲೋಕಲ್ ಕ್ಯಾಂಡಿಡೇಟುಗಳಾಗಿ ತೆಗೆದುಕೊಂಡಿರುವವರು ಅನೇಕ ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ಕನ್‌ಫರಂ ಆಗಿ ಬರುವವರೆಗೂ ಅವರಿಗೆ ಕೆಲಸ ಖಾಯಂ ಆಗುವುದಿಲ್ಲ. ಯಾವಾಗ ಕೆಲಸ ಹೋಗುತ್ತದೆಯೋ ಎನ್ನುವ ಬಯದಿಂದ ಸರಿಯಾಗಿ ಕೆಲಸ ಮಾಡುವುದಿಲ್ಲ. ಹೆಣ್ಣು ಮಕ್ಕಳು ಇರುವವರು ಕೆಲಸ ಆಗಿದೆ ಎಂದು ಅವರನ್ನು ಕೊಟ್ಟು ಮದುವೆ ಬೇರೆ ಮಾಡಿ ಬಿಡುತ್ತಾರೆ ಮಕ್ಕಳೂ ಆಗಿರುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ಅವರ ಹೆಸರು ಬರದೆ ಹೋದರೆ, ಅಥವಾ ಬೇರೆ ಅಭ್ಯರ್ಥಿಗಳು ಬಂದರೆ ಇವರ ಕೆಲಸ ಹೋಗುತ್ತದೆ. ಈ ರೀತಿಯಾಗಿ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವವರನ್ನು ಅವರು ಕೆಲಸ ಮಾಡುತ್ತಿರುವ ಕಡೆಗಳಲ್ಲೇ ಖಾಯಂ ಮಾಡಬೇಕು ಎಂದು ಸಲಹೆ ಮಾಡುತ್ತಿದ್ದೇನೆ. ಸ್ವಲ್ಪ ದಿವಸದ ಕೆಳಗೆ ನಾನು ಪತ್ರಿಕೆಗಳಲ್ಲಿ ಓದಿದೆ : 1-1-1965ನೆ ತಾರೀಖಿನವರೆಗೂ ಲೋಕಲ್ ಕ್ಯಾಂಡಿಡೇಟುಗಳಾಗಿ ಕೆಲಸ ಮಾಡುತ್ತಿರುವವರನ್ನು ರೆಗ್ಯುಲರೈಸ್ ಮಾಡುತ್ತಾರೆಂದು. ಅದನ್ನು ಹಾಗೆಯೇ ಮುಂದಕ್ಕೂ ಮಾಡಿ ಅಥವಾ ಖಾಯಂ ಮಾಡಬೇಕಾದರೆ ಯಾವ ರೀತಿ ರಿಕ್ರೂಟ್‌ಮೆಂಟ್ ಮೆಥೆಡ್ ಮಾಡಬೇಕೋ ಆ ರೀತಿಯಾಗಿ ಮಾಡಿ. ಆದರೆ ಸ್ಥಳೀಯ ಅಭ್ಯರ್ಥಿಗಳಾಗಿ ಬಹಳ ವರ್ಷ ಹಾಗೆಯೇ ಇಡಬೇಡಿ ಎಂದು ಸಲಹೆ ಮಾಡುತ್ತಿದ್ದೇನೆ.

11ನೆ ಪ್ಯಾರಾದಲ್ಲಿ, 1964–65ರಲ್ಲಿ ವ್ಯವಸಾಯೋತ್ಪನ್ನಗಳಿಂದ ಜಾಸ್ತಿ ಆಯಿತು ಎಂದಿದ್ದಾರೇ. ಹಾಗೆಯೇ ಆಹಾರದ ಬೆಳೆ ಕೂಡ ಜಾಸ್ತಿ ಆಯ್ತು. ಈ ಸಲ ಮಳೆ ಸರಿಯಾಗಿ ಬೀಳದೆ ಆಹಾರ ಧಾನ್ಯಗಳ ಬೆಳೆ ಸಾಸ್ತಿ ಆಯಿತು ಎನ್ನುವುದನ್ನು ಒಪ್ಪಿಕೊಳ್ಳಬೇಕಾದ್ದೇ. ಆದರೆ ಮಳೆ ಚೆನ್ನಾಗಿ ಆದಾಗಲೂ ಕೂಡ ಬೆಳೆ ಏರುತ್ತಲೆ ಹೋಗಿದೆ. ಇನ್ನು ಮುಂದೆ ಎಷ್ಟು ಜಾಸ್ತಿಯಾಗುತ್ತದೆಯೋ ಎನ್ನುವ ಭಯ ಇದೆ. ಉತ್ಪತ್ತಿ ಜಾಸ್ತಿಯಾಗಬೇಕು ಎಂದು ಹೇಳುವಾಗ ಬೆಲೆಗಳು ಏರದಂತೆ ತಡೆಗಟ್ಟಬೇಕಾದೂ

೧

(ಶ್ರೀಮತಿ ರತ್ನಮ್ಮ ಮಾಧವರಾವ್)

ನಮ್ಮ ಕರ್ತವ್ಯ ಎಂದು ಕಾಣುತ್ತದೆ. ನಾವೂ ಕೂಡ ಇದರ ಬಗ್ಗೆ ಯೋಚಿಸಿ ಬೆಲೆಗಳ ಏರಿಕೆಯನ್ನು ತಡೆಗಟ್ಟಬೇಕಾಗಿದೆ. ಸರ್ಕಾರ ಇದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಸಲಹೆ ಮಾಡುತ್ತಿದ್ದೇನೆ.

17ನೆ ಪ್ಯಾರಾದಲ್ಲಿ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯವನ್ನು ಜಾಸ್ತಿ ಮಾಡಿರುವುದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಆದರೆ ಕೊಡುವಾಗ ಬಹಳ ಸಂತೋಷದಿಂದ ಕೊಡಬೇಕು. ಮದ್ರಾಸ್‌ನವರು ಕೊಟ್ಟರು, ಡೆಲ್ಲಿಯಲ್ಲಿ ಕೊಟ್ಟರು, ಆದ್ದರಿಂದ ನಾವೂ ಕೊಡ ಕೊಡಬೇಕಾಯಿತು, ನಮಗೆ ನಷ್ಟವಾಯಿತು ಎಂದು ಹೇಳಬೇಡಿ. ನಮ್ಮ ಧರ್ಮ, ನಾವು ಕೊಟ್ಟಿದ್ದೇವೆ ಎಂದು ಹೇಳಿದರೆ ಚೆನ್ನಾಗಿರುತ್ತದೆ. ಒಂದೂವರೆ ಕೋಟಿ ರೂಪಾಯಿ ನಷ್ಟವಾಗುತ್ತದೆ, ತುಟ್ಟಿ ಭತ್ಯವನ್ನು ಹೆಚ್ಚು ಮಾಡುವುದರಿಂದ ಎಂದು ಕೂಡ ಹೇಳಿದ್ದಾರೆ. ಹೀಗೆ ಹೇಳುವುದು ಸರಿಯಾದುದಲ್ಲ ಎಂದು ನನಗನ್ನಿಸುತ್ತದೆ. 210 ರೂಪಾಯಿ ಸಂಬಳ ಬರತಕ್ಕ ಮನುಷ್ಯನಿಗೆ 5 ರೂಪಾಯಿ ಕೊಟ್ಟರೆ ಈ ಕಾಲದಲ್ಲಿ ಏನೂ ಸಹಾಯ ಮಾಡಿದ ಹಾಗೆ ಆಗುವುದಿಲ್ಲ. ಅದಕ್ಕಿಂತ ಆ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟಿ ಅವರಿಗೆ ಕಡಮೆ ಬಾಡಿಗೆಗೆ ಕೊಟ್ಟರೆ ಅವರು ಸಂತೋಷವಾಗಿ ಇರುತ್ತಾರೆ. ಐದು ರೂಪಾಯಿ ಕೊಡುವುದಕ್ಕಿಂತ 50 ರೂಪಾಯಿ ಕೊಟ್ಟಷ್ಟು ಸಮಾಧಾನವಾಗುತ್ತದೆ. 210 ರೂಪಾಯಿ ಸಂಬಳ ಬರುವುದರಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಸಹ ಮಾಡಿಸುವುದಕ್ಕಾಗುವುದಿಲ್ಲ. ಆ ಸಂಭಳದ ಮೇಲೆ ಅನುಕೂಲ ಸಿಕ್ಕುವುದಿಲ್ಲ.

21ನೆ ಪ್ಯಾರಾದಲ್ಲಿ ಸಾಲದ ಹೊರೆಯ ವಿಷಯವನ್ನು ತಿಳಿಸಿದ್ದಾರೆ. ಕೇಂದ್ರ ಸರ್ಕಾರ ಒಪ್ಪುವುದಿಲ್ಲ, ನಮಗೆ ಬರಬೇಕಾದ್ದು ಬೇಗನೆ ಬರುವುದಿಲ್ಲ, ಬಡ್ಡಿ ಜಾಸ್ತಿ ಆಗುತ್ತಿದೆ ಎಂದು ಹೇಳಿದ್ದೀರಿ ಇಂಥ ಸ್ಕೀಮುಗಳೇ ಬೇಡ. ಕ್ಷಿಪ್ರವಾಗಿ ಫಲವನ್ನು ಕೊಡುವ ಯೋಜನೆಗಳನ್ನೇ ಹಾಕಿಕೊಳ್ಳಬೇಕು. ಒಂದು ತೆಂಗಿನಕಾಯಿ ಮರವನ್ನು ಹಾಕಿದರೆ ಅದರ ಕಾಯನ್ನು ನನ್ನ ಮೊಮ್ಮಕ್ಕಳು ತಿನ್ನುತ್ತಾರೆ ಎಂದು ಹೇಳುವಂತೆ ಆಗುತ್ತದೆ. ಅರಣ್ಯಗಳಲ್ಲಿ ತೇಗದ ಮರಗಳನ್ನು ಹಾಕಿದರೆ ಅದು ಕೈಗೆ ಬರಬೇಕಾದರೆ 80-90 ವರ್ಷಗಳಾಗುತ್ತವೆ. ಅದೇ ನೀಲಗಿರಿ ಗಿಡಗಳನ್ನು ಹಾಕಿದರೆ ಅವು 10 ವರ್ಷಗಳಲ್ಲಿ ಕೈಗೆ ಬೇಗ ಬರುತ್ತವೆ, ಇಂಡಸ್ಟ್ರೀ (ಕೈಗಾರಿಕೆಯ) ಅವು ಎಣ್ಣೆಗೂ ಆಗುತ್ತವೆ, ಎಲೆಕ್ಟ್ರಿಕ್ ಪೋಲ್ಸ್ ಆಗಿ ಉಪಯೋಗಿಸುವುದಕ್ಕೂ ಬರುತ್ತದೆ, ಈ ತರಹ ಯೋಜನೆಗಳನ್ನು ತೆಗೆದುಕೊಳ್ಳಬೇಕು. ನಾನು ಇಲ್ಲವೆ ಇದ್ದರೆ 500 ರೂಪಾಯಿ ಜರಿ ಸೀರೆ ಉಟ್ಟು ನನ್ನ ಪ್ರಗತಿ ಆಯಿತು ಎಂದಂತಾಗುತ್ತೆ.

24ನ ಪ್ಯಾರಾದಲ್ಲಿ ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಈ ರಾಜ್ಯಗಳಲ್ಲಿ ಜಾಸ್ತಿ ಕೈಗಾರಿಕೆಯ ಪ್ರಗತಿ ಆಯಿತು ಎಂದು ಹೇಳಿದ್ದಾರೆ. ಅದು ಏನು ಎಂದು ನನಗೆ ಗೊತ್ತಾಗಲಿಲ್ಲ. ನಮ್ಮ ಮೈಸೂರು ರಾಜ್ಯದಲ್ಲಿ ಯಾವುದು ಇರಲಿಲ್ಲ? ಚಿನ್ನದ ಗಣಿ ಇತ್ತು, ಕಬ್ಬಿಣದ ಕಾರ್ಖಾನೆ ಇತ್ತು ಗಂಧದ ಎಣ್ಣೆ ಕಾರ್ಖಾನೆ ಇತ್ತು, ಸಿಮೆಂಟ್ ಕಾರ್ಖಾನೆ ಇದೆ, ಸಾಬೂನು ಕಾರ್ಖಾನೆ ಇದೆ. ಮೈಸೂರು ಎಂದರೆ 'ಮಾದರಿ ಮೈಸೂರು' ಎಂದು ಹೇಳುತ್ತಿದ್ದರು. ಅದನ್ನು ತಾವೇ ಹೇಳಿದ್ದರೆ ಬಹಳ ಸಂತೋಷಪಡುತ್ತಿದ್ದೆ. ಇಲ್ಲಿರುವ ಖನಿಜ ಸಂಪತ್ತು ಬೇಕಾದಷ್ಟಿದೆ. ಇಲ್ಲಿಯೂ ಕೂಡ ಕೈಗಾರಿಕೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

25 ಮತ್ತು 26ನೆ ಪ್ಯಾರಾಗಳಲ್ಲಿ ಹೇಳಿದ್ದಾರೆ, ಕೈಗಾರಿಕೆಯ ಬೆಳವಣಿಗೆಗೆ ವಿದ್ಯುಚ್ಛಕ್ತಿ ಇಲ್ಲದ್ದರಿಂದ ಪ್ರಗತಿಯಾಗಿಲ್ಲ, ಶರಾವತಿ ವಿದ್ಯುಚ್ಛಕ್ತಿ ಸಿಕ್ಕಿದೆ, ಈಗ ಪ್ರಗತಿಯಾಗುತ್ತದೆ ಎಂದು ಹೇಳಿದ್ದಾರೆ. 400 ಅರ್ಜಿ ಬಂದಿದ್ದು ಅವುಗಳ ಪೈಕಿ 151ಕ್ಕೆ ಲೈಸೆನ್ಸು ಕೊಟ್ಟಿದೆ. ಆದರೆ ಯಾರೂ ಕೆಲಸ ಮಾಡಲಿಲ್ಲ ಎಂದು ಹೇಳಿದ್ದಾರೆ. ಲೈಸೆನ್‌ಸನ್ನು ಕೊಡುವುದಕ್ಕೆ ಮುಂಚೆಯೇ ಸರಿಯಾದವರಿಗೆ ವಿಚಾರಿಸಿ ಕೊಡಬೇಕಾಗಿತ್ತು. ಕೆಲಸ ಮಾಡದಿರುವುದಕ್ಕೆ ಪವರ್ ಇಲ್ಲ ಎನ್ನುವದೊಂದೇ ಕಾರಣ ಎಂದು ನಾನು ಒಪ್ಪುವುದಿಲ್ಲ. ಬೇರೆ ಏನಾದರೂ ಕಾರಣ ಇರಬೇಕು. ಈಗಲಾದರೂ ಕೂಡ ಅದರ ಬಗ್ಗೆ ವಿಚಾರಿಸಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಆಹಾರಕ್ಕೆ ಸ್ವಯಂ ಪರಿಪೂರ್ಣತೆ ಬೇಕೆಂದಿದ್ದೀರಿ. ಹೇಗೆ ಬರುತ್ತೆ? ಭಾರತವೆಲ್ಲ ಆಹಾರದಲ್ಲಿ ಒಂದೇ ಆಗಬೇಕು. ಇಲ್ಲಿಂದ ಪವರ್ ಬೊಂಬಾಯಿವರೆಗೆ ರವಾನಿಸುತ್ತೀರಿ. ಅಲ್ಲೇನು ಸಿಕ್ಕುತ್ತೋ ಇಲ್ಲಿ ತಯಾರಿಸಬೇಕು. ಇಲ್ಲಿರುವುದನ್ನು ಅಲ್ಲಿಗೆ ಕೊಡಬೇಕು. ಸ್ವಯಂ ಪರಿಪೂರ್ಣತೆ ಎನ್ನುವಾಗ ವಿಧಾನ ಸೌಧದಲ್ಲಿ ಮೂಲಂಗಿ ಬೆಳೆಸಿದ್ದು ಒಂದು ಸಂಕೇತ ಅದಕ್ಕಾಗಿ ಕ್ರೋಟನ್, ಹೂ, ಇತ್ಯಾದಿ ಬೆಳೆಯುತ್ತಿದ್ದು ಈಗ ಆಹಾರ ಅಭಾವವೆಂದು ತರಕಾರಿ ಬೆಳೆದರು. ಒಳ್ಳೆಯದು 1 ಎಕರೆ ಬೀಳು ಭಾಗ ಬಿಡಬೇಡಿ. ಎಲ್ಲ ಕಡೆ ಬೆಳೆಯಿರಿ. ಬೆಳೆಯುವವರಿಗೆ ಅನುಕೂಲ ಮಾಡಿಕೊಡಿ.

ಇನ್ನು ಸರ್ಕಾರದವರು ಇರ್ರಿಗೇಷನ್ ಬಗ್ಗೆ ಸಾಕಾದಷ್ಟು ಸಹಾಯಗಳನ್ನು ರೈತರಿಗೆ ಒದಗಿಸುತ್ತಿದ್ದಾರೆ. ಪಂಪುಸೆಟ್ಟುಗಳ ವಿತರಣೆ ಸರಿಯಾಗಿ ಆಗುತ್ತಿಲ್ಲ. ಅದಕ್ಕಾಗಿ ಸುಪೀರಿಯರ್ ಚೆಕ್ ಇಡಬೇಕು. ಇದರಿಂದ ನೀವು ಮಾಡಿರತಕ್ಕ ಕೆಲಸ ಬಹಳ ಯಶಸ್ವಿಯಾಗುತ್ತದೆ.

ಇನ್ನು ಸಣ್ಣ ಸಣ್ಣ ಲಂಚ ತೆಗೆದುಕೊಳ್ಳುವವರನ್ನು ಸರ್ಕಾರದವರು ಹಿಡಿಯುತ್ತಿದ್ದಾರೆಯೇ ಹೊರತು ದೊಡ್ಡ ದೊಡ್ಡ ಲಂಚ ತೆಗೆದುಕೊಳ್ಳುವವರನ್ನು ಹಿಡಿಯುತ್ತಾ ಇಲ್ಲ. ಅವರ ಹಾಗೆ ಇವರನ್ನೂ ಸಹ ಹಿಡಿಯಬೇಕೆಂದು ನನ್ನ ಸಲಹೆ. ಆಗ ಆಡಳಿತದಲ್ಲಿ ದಕ್ಷತೆ ಹೆಚ್ಚುತ್ತದೆ.

ಕುಡಿಯುವ ನೀರಿನ ಬಾವಿಗಳ ಸೌಕರ್ಯವನ್ನು ಒದಗಿಸುವುದರಲ್ಲಿ ಸರ್ಕಾರ ಇನ್ನೂ ಸಾಕಷ್ಟು ಗಮನ ಕೊಡಬೇಕು. ಏನು ಕೊಟ್ಟರೆ ತಾನೇ ನೀರು ಕೊಟ್ಟಷ್ಟು ತೃಪ್ತಿಯಾದೀತು? ಜನತೆಗೆ ಕುಡಿಯಲು ನೀರು ಕೊಟ್ಟು ತೃಪ್ತಿಪಡುವಂತೆ ಮಾಡಿ ಬಾವಿಗಳಿಗಾಗಿ ರೈತನಾದವನು ಒಂದು ಅರ್ಜಿಯನ್ನು ಕೊಟ್ಟರೆ ಎಲ್ಲಿ ಆ ಅರ್ಜಿಯನ್ನು ಕೊಡುತ್ತಾನೋ ಅದು ಅಲ್ಲಿಯೇ ಇರುತ್ತದೆ. ಅದರ ಜೊತೆಗೆ ನಾವು ಓಡಾಡಿದರೆ ಅವೂ ಮುಂದಕ್ಕೆ ಹೋಗುತ್ತದೆ ಇನ್ನು ಮುಂದೆ ಹಾಗಾಗದೆ ತಾನಾಗಿಯೇ ರೈತನಿಗೆ ಸಿಗುವಂತೆ ವ್ಯವಸ್ಥೆ ಮಾಡಬೇಕು. 4ನೇ ಪಾಂಚವಾರ್ಷಿಕ ಯೋಜನೆಯಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಕುಡಿಯುವ ನೀರಿನ ಬಾವಿಗಳನ್ನು ನಿರ್ಮಾಣ ಮಾಡುತ್ತಾರೆಂದು ನಾನು ನಂಬಿದ್ದೇನೆ. ಮಾನ್ಯ ಸದಸ್ಯರೊಬ್ಬರು ಆರ್ಥಿಕ ಪರಿಸ್ಥಿತಿ 8 ವರ್ಷಗಳು ಚೆನ್ನಾಗಿತ್ತು. ಈಗ Finance is in bad hands. ಅದು ಬಹಳ ಕೆಟ್ಟುಹೋಗಿ ಅದರಿಂದ ಕೊಳೆ ಮುಟ್ಟುತ್ತಿದೆಯೆಂದು ಹೇಳಿದರು. ಅದು ಸ್ಥಳ ಬದಲಾವಣೆ ಮಹತ್ವ ಎಂದು ನಾನು ತಿಳಿಯುತ್ತೇನೆ. ಏನೇ ಆಗಲಿ ನಮ್ಮ ಬಡ್ಜೆಟ್ಟನ್ನು ನೋಡಿದರೆ ಆರ್ಥಿಕ ಪರಿಸ್ಥಿತಿ ಅಷ್ಟೇನು ಕೆಟ್ಟಿಲ್ಲ ಅದು bad hands ನಲ್ಲಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಲಂಚಗುಳಿತನ ಹಾಗೂ ಭ್ರಷ್ಟಾಚಾರ ಬಡ್ಜೆಟ್‌ನಲ್ಲಿ ಇದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಆರೋಪಿಸಿದರು. ನಾನು ಬಡ್ಜೆಟ್ಟೆಲ್ಲಾ ಹುಡುಕಿದೆ. ಅದು ಎಲ್ಲೂ ಕಾಣಲಿಲ್ಲ. ನನ್ನ ಮಾನ್ಯ ಸ್ನೇಹಿತರಾದ ಶ್ರೀಮತಿ ಸುಬ್ಬಮ್ಮನವರು ಮಲೆನಾಡಿನ ಅಭಿವೃದ್ಧಿ ಬಗ್ಗೆ ಹೆಚ್ಚು ಗಮನವನ್ನು ಸರ್ಕಾರದವರು ಕೊಡಬೇಕೆಂದು ಹೇಳಿದರು. ಮಾನ್ಯ ಅರ್ಥಸಚಿವರೂ ಸಹ ಮಲೆನಾಡಿನವರಾದ್ದರಿಂದ ಮಲೆನಾಡಿನ ಅಭಿವೃದ್ಧಿ ವಿಚಾರದಲ್ಲಿ ಹೆಚ್ಚಿಗೆ ಗಮನ ಕೊಡುತ್ತಾರೆಂದು ನಾನು ನಂಬಿದ್ದೇನೆ. ಕೊನೆಯದಾಗಿ ಈ ಬಡ್ಜೆಟ್ಟನ್ನು ನಾನು ಸಂಪೂರ್ಣವಾಗಿ ಅನುಮೋದಿಸಿ ಇಷ್ಟು ಹೊತ್ತು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಮೊಟ್ಟಮೊದಲನೆಯದಾಗಿ ಅರ್ಥ ಮಂತ್ರಿಗಳು ಮಂಡಿಸಿರುವ ಈ ವರ್ಷದ ಆಯವ್ಯಯ ಉಳಿತಾಯ ಬಡ್ಜೆಟ್ಟನ್ನು ಸ್ವಾಗತಿಸಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರನ್ನು ವಂದಿಸಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಈಗ ಆಹಾರ ಸಮಸ್ಯೆ ಬೃಹದಾಕಾರವಾಗಿ ನಮ್ಮ ದೇಶವನ್ನೇ ಕಾಡಿಸುತ್ತಿರುವುದರಿಂದ ಇಂತಹ ಸಂದರ್ಭದಲ್ಲಿ ನಮ್ಮ ಆರ್ಥಿಕ ಮಂತ್ರಿಗಳು ಒಂದು ಕೋಟಿ ರೂಪಾಯಿಗಳನ್ನು ಕ್ಷಾಮ ನಿವಾರಣೆಗಾಗಿ ಮೀಸಲಾಗಿಟ್ಟು ಅದನ್ನು ಹಂಚುತ್ತಿದ್ದಾರೆ. ಆದರೆ ಅದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತಿದೆ ಎನ್ನುವುದನ್ನು ಆರ್ಥಿಕ ಮಂತ್ರಿಗಳು ಬಹಳ ಎಚ್ಚರಿಕೆಯಿಂದ ಜವಾಬ್ದಾರಿಯನ್ನು ತೆಗೆದುಕೊಂಡು ಆದಷ್ಟು ಜಾಗ್ರತೆ ಅದರಿಂದ ಪರಿಹಾರ ಜನಗಳಿಗೆ ಸಿಗುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ನನ್ನ ಒಂದೆರಡು ಸಲಹೆಗಳನ್ನು ಈ ಸಭೆಯ ಮುಂದಿಡಲು ಇಚ್ಛಿಸುತ್ತೇನೆ. ಸರ್ಕಾರದವರು ರಿಲೀಫ್ ಕಾಮಗಾರಿಯನ್ನು ಈಗ ಮಂಡ್ಯ ಜಿಲ್ಲೆಗೆ ಕೊಟ್ಟಿದ್ದಾರೆ. ಅಲ್ಲಿ ತಹಸೀಲ್ದಾರರು ಇದರ ದುಡ್ಡಿನ ಜವಾಬ್ದಾರಿಯನ್ನು ಹೊತ್ತಿರುವವರಾಗಿದ್ದಾರೆ. ತಾಲ್ಲೂಕು ಬೋರ್ಡಿನವರು ಇದರ ಮೇಲ್ವಿಚಾರಣೆ ನೋಡುವವರಾಗಿದ್ದಾರೆ. ಆರ್ಥಿಕ ಅಧಿಕಾರ ತಹಸೀಲ್ದಾರರ ಹತ್ತಿರವೂ, ಸೂಪರ್‌ವಿಷನ್ ಅಧಿಕಾರ ತಾಲ್ಲೂಕ್ ಬೋರ್ಡಿಗೂ ಹೋಗುತ್ತದೆ. ಅವರಲ್ಲಿ ಒಬ್ಬರಿಗೊಬ್ಬರಿಗೆ ಮಿಳಿತವಾಗದಿದ್ದರೆ ಎಷ್ಟರಮಟ್ಟಿಗೆ ಅಲ್ಲಿನ ಜನಗಳಿಗೆ ಆ ಕಾರ್ಯ ಸಾಧನೆಯಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳಾದಿಯಾಗಿ ಗಮನಿಸಬೇಕಾಗಿದೆ. ನಮ್ಮ ತಾಲ್ಲೂಕು ಕ್ಷಾಮದ ದವಡೆಯಲ್ಲಿ ಸಿಕ್ಕಿ ಬಹಳವಾಗಿ ತೊಂದರೆಯನ್ನು ಪಡುತ್ತಿರುವ ಪ್ರದೇಶ. ಇದುವರೆಗೆ ಕೇವಲ 4 ಸಾವಿರ ರೂಪಾಯಿಗಳಷ್ಟು ರಿಲೀಫ್ ಕಾಮಗಾರಿ ಅಲ್ಲಿ ನಡೆದಿದೆ. ಇದರ ಮುಖ್ಯ ಕಾರಣ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಅವರ ಒಮ್ಮತ ವಿಲ್ಲದೆ ನಿಧಾನವಾಗಿರುವುದು ಆಗಿದೆ. ಈ ರೀತಿ ಮೈಸೂರಿನ ಅನೇಕ ಕಡೆಗಳಲ್ಲಿ ಆಗಿರಬಹುದು ಎಂಬುದಾಗಿ ನಾನು ಭಾವಿಸುತ್ತೇನೆ. ಆದ್ದರಿಂದ ಇಂಥಾದ್ದನ್ನೆಲ್ಲಾ ಯಾರಾದರೂ ಒಬ್ಬರಿಗೆ ಜವಾಬ್ದಾರಿಗೆ ಕೊಟ್ಟು ಅವರ ಮೂಲಕ ಎಲ್ಲೆಲ್ಲಿ ಕ್ಷಾಮ ಇದೆಯೋ ಅಂತಹ ಕಡೆಗಳಲ್ಲಿ ಬಹಳ ಮುತುವರ್ಜಿಯಿಂದ ಕೆಲಸ ಮಾಡಿಸಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವಂತೆ ಒಂದು ನಿರ್ಬಂಧವನ್ನು ವಿಧಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ತಾಲ್ಲೂಕಿನ ಜನಗಳು ಹೆಚ್ಚಿಗೆ ವ್ಯವಸಾಯದಿಂದ ಕಷ್ಟವನ್ನು ಅನುಭವಿಸುತ್ತಿದ್ದಾರೆ. ನನ್ನ ತಾಲ್ಲೂಕಾದ ಕೃಷ್ಣರಾಜಪೇಟೆಯಲ್ಲಿ ನಾನು ಕಂಡ ಕೆಲವು ವಿಷಯಗಳನ್ನು ಆರ್ಥಿಕಮಂತ್ರಿಗಳ

(ಶ್ರೀ ಎನ್. ನಂಜೇಗೌಡ)

ಮುಂದೆ ಇಡುತ್ತೇನೆ. ಮಧ್ಯಮ ತರಗತಿ ಜನಗಳು ಅಲ್ಲಿ ದನಗಳಿಂದ ವ್ಯವಸಾಯ ಮಾಡಿ ಜೀವನವನ್ನು ಮಾಡುತ್ತಿದ್ದಾರೆ. ಅಲ್ಲಿನ ಜನರು ದನಗಳಿಗೆ ಮೇವು ಹೊಂದಿಸಲು ಶಕ್ತಿಯಿಲ್ಲದೆ ಅವುಗಳನ್ನು ಪೂಜೆ ಮಾಡಿ ಹೊರಗಡೆ ಬಿಡುತ್ತಾರೆ ಅವು ಹೊರಗಡೆ ಹೋಗಿ ಎಲ್ಲಿ ಹೋದರೂ ಸಾಕಾಗುವಷ್ಟು ಮೇವು ಸಿಗದೆ ಪುನಃ ಮನೆಯ ಹತ್ತಿರ ಬಂದು ಕಣ್ಣುಗಳಲ್ಲಿ ನೀರು ಸುರಿಸಿಕೊಂಡು ನಿಂತುಕೊಳ್ಳುತ್ತಾ ಇರತಕ್ಕ ದೃಶ್ಯವನ್ನು ನೋಡುವುದಕ್ಕೆ ನನಗೇನೇ ಬಹಳ ಭಯಂಕರ ವಾಗುತ್ತದೆ. ಅಲ್ಲಿನ ಜನಗಳು ತಮ್ಮ ಹೊಟ್ಟೆಗೆ ಅನ್ನ ಹೊಂದಿಸಿಕೊಳ್ಳುವುದು ಒಂದು ಕಡೆ, ಅವರು ತಮ್ಮ ದನಗಳಿಗೆ ಹುಲ್ಲನ್ನು ಹೊಂದಿಸಿಕೊಳ್ಳುವುದು ಇನ್ನೊಂದು ಕಡೆ. ಹೀಗಾಗಿ ಅಲ್ಲಿನ ಮಧ್ಯಮ ವರ್ಗದ ಜನಗಳು ತುಂಬಾ ತೊಂದರೆಗೀಡಾಗಿದ್ದಾರೆ. ಅವರು ತಮ್ಮ ದನಗಳಿಗೆ ಹುಲ್ಲನ್ನು ಎಲ್ಲಿಂದ ತರುವುದೆಂಬುದಾಗಿ ದಿಕ್ಕುತೋಚದವರಾಗಿದ್ದಾರೆ. ಸುಮಾರು 100 ಕಂತೆ ಹುಲ್ಲಿಗೆ 125ರಿಂದ 150 ರೂಪಾಯಿಗಳವರೆಗೆ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳಬೇಕಾಗಿದೆ. ಆ ರೀತಿ ಕೊಂಡು ಪ್ರತಿದಿವಸವೂ ಪ್ರತಿಯೊಂದು ದನಕ್ಕೂ ಒಂದು ಕಂತೆ ಹುಲ್ಲು ಹಾಕಿದರೆ ಆಗ ಆ ದನಗಳು ತಮ್ಮ ಜೀವನವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವೆ ವಿನಹ ಮುಂದೆ ಅದು ಉಳುಮೆಗೆ ಲಾಯಕ್ಕಾಗುವುದಿಲ್ಲ. ಅಂತಹ ಕಷ್ಟದಲ್ಲಿ ಅಲ್ಲಿನ ಜನಗಳು ತೊಂದರೆಪಡುತ್ತಿದ್ದಾರೆ. ಆದ್ದರಿಂದ ಕೂಡಲೇ ಸರ್ಕಾರದವರು ಅರಣ್ಯ ಪ್ರದೇಶದಲ್ಲಿ ಇರತಕ್ಕ ಎಲ್ಲಾ ಹುಲ್ಲನ್ನು ಶೇಖರಣೆ ಮಾಡಿ ಲಾರಿಗಳ ಮೂಲಕ ಅಲ್ಲಿಂದ ತಂದು ಈಗಲೇ ಸ್ಟಾಕ್ ಮಾಡದೇ ಇದ್ದರೆ ಹಳ್ಳಿಗಳಲ್ಲಿ ದನಗಳು ಖಂಡಿತವಾಗಿ ಉಳಿಯುವುದಿಲ್ಲ. ಎಂದು ಹಳ್ಳಿಗಳಲ್ಲಿ ದನಗಳು ನಾಶವಾಗುತ್ತವೋ ಅಂದು ವ್ಯವಸಾಯವೇ ನಾಶವಾಗುತ್ತೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮುನ್ನೆಚ್ಚರಿಕೆಯನು ಕೊಡುತ್ತೇನೆ. ಆದ್ದರಿಂದ ಕೊಡಲೇ ಅಲ್ಲಿ ರಿಲೀಫ್ ವರ್ಕ್ಸ್ ಕೊಡುವುದರಿಂದ ಬಡವರಿಗೆ ಒಂದು ರೀತಿಯಲ್ಲಿ ಸಹಾಯವಾಗುತ್ತದೆ. ಶ್ರೀಮಂತರಿಗೆ ವಿಶೇಷವಾಗಿ ದುಡ್ಡು ಇರುವುದರಿಂದ ಅವರು ಹೇಗೋ ಜೀವನವನ್ನು ಸಾಗಿಸುತ್ತಾರೆ. ಕೂಲಿ ಮಾಡುವವನೂ ಸಹ ಹೇಗೋ ತನ್ನ ದಿನಗೂಲಿಯಿಂದ ಹೇಗೋ ಕಡುಬಡತನದಿಂದಾರೂ ಜೀವನವನ್ನು ಸಾಗಿಸಿಕೊಳ್ಳುತ್ತಾನೆ. ಆದರೆ ಮಧ್ಯಮವರ್ಗದವರು ಯಾರು ಇದ್ದಾರೆ ಅವರ ಪರಿಸ್ಥಿತಿಯನ್ನು ಯೋಚನೆ ಮಾಡಿದರೆ ಮುಂದೆ ಅವರ ಜೀವನ ಬಹಳಭಯಂಕರವಾಗಿ ಮರಣವನ್ನು ಅಪ್ಪುವಂತಹ ಪರಿಸ್ಥಿತಿಯನ್ನು ಕಾಣಬಹುದು ಎಂದು ನಾನು ಊಹಿಸುತ್ತೇನೆ. ಇವರು ಕೂಲಿಮಾಡುವುದಕ್ಕೆ ಹೋಗೋಣವೆಂದರೆ ಅವರ ಮರ್ಯಾದೆಗೆ ಭಂಗ ಬರುತ್ತದೆ, ಆಸ್ತಿಯನ್ನು ಮಾರೋಣವೆಂದರೆ ಗೌರವಕ್ಕೆ ಚ್ಯುತಿ ಬಂದೀತೆಂದು ಹೆದರಿಕೊಂಡು ಇರುತ್ತಾರೆ. ಆದ್ದರಿಂದ ಸರ್ಕಾರದವರು ಮಧ್ಯಮವರ್ಗದವರಿಗೆ ಸಾಲದ ರೂಪದಲ್ಲಿ ಹಣ ಸಹಾಯವನ್ನು ಕೂಡಲೆ ಕೊಡಬೇಕು. ಆಗ ಈ ವರ್ಷ ಅವರು ತಮ್ಮ ಜೀವವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಪ್ರತಿ ತಾಲ್ಲೂಕಿನಲ್ಲ ಕೆಲವು ಕಡೆಗಳಲ್ಲಿ ಪಂಪುಸೆಟ್ಟುಗಳನ್ನು ಸರಕಾರದವರು ಒದಗಿಸಿದ್ದಾರೆ. ಇವು ಹಳ್ಳಿಯಲ್ಲಿ ಯಾವರೀತಿಯಲ್ಲಿ ಉಪಯೋಗವಾಗುತ್ತವೆಂಬುದನ್ನು ಸರ್ಕಾರದವರು ವಿಮರ್ಶೆಮಾಡಬೇಕು. ಇದರಲ್ಲಿ ನನಗೆ ತುಂಬಾ ಅನುಮಾನಾಸ್ಪದವಾಗಿದೆ. ಸರಕಾರದವರು ಅವುಗಳನ್ನು ಉಚಿತವಾಗಿ ಬಡ ರೈತರಿಗೆ ಹಂಚುತ್ತಾರೆ. ಅವಕ್ಕೆ ಬೇಕಾದ ಡೀಸಲ್ ಆಯಲ್‌ನ್ನು ಉಚಿತವಾಗಿ ಕೊಡಬೇಕು. ಪಂಪುಸೆಟ್ಟಿನಿಂದ ನೀರು ಹಾಯಿಸುವ ಕಡೆ ಹೋಗಿ ನಾನೇ ವೆರಿಫೈ ಮಾಡಿದೆ. ಒಂದು ಹದ ನೀರು ಹಾಯಿಸಲು 25ರಿಂದ 30 ರೂಪಾಯಿಗಳವರೆಗೆ ಬೇಕಾಗುತ್ತದೆ, ಮೂರು ತಿಂಗಳ ರಾಗಿ ಹಾಕಿದರೆ ಅಂದರೆ 90 ದಿವಸಗಳವರೆಗೆ ಸುಮಾರು 10—11 ಸಾರಿ ನೀರು ಹಾಯಿಸಬೇಕಾಗುತ್ತದೆ. ಅದಕ್ಕೋಸ್ಕರ ಒಂದೊಂದು ಹದ ನೀರು ಹಾಯಿಸಲು ಬಹಳ ಕಡಿಮೆಯೆಂದರೂ 20ರೂಪಾಯಿಗಳವರೆಗೆ ಖರ್ಚಾಗುತ್ತದೆ. ಹೀಗೆ ಬಹಳವಾಗಿ ಹಣ ಅದಕ್ಕೆ ಖರ್ಚಾಗುತ್ತದೆ. ಆದ್ದರಿಂದ ಡೀಸಲ್ ಆಯಲ್‌ನಿಂದ ನಡೆಸತಕ್ಕ ಪಂಪ್ ಸೆಟ್ಟುಗಳಿಂದ-ರೈತರಿಗೆ ಹೆಚ್ಚು ಲಾಭ ಸಿಗುವುದಿಲ್ಲ. ಇಂತಹ ಪಂಪುಸೆಟ್ಟುಗಳನ್ನು ಕೊಟ್ಟರೆ ಹೇಗೆ ನೀರನ್ನು ಎಲ್ಲ ತರುತ್ತಾರೆ ? ನೀರು ಸಿಗದೆ ಇರುವ ಕಡೆಗಳಲ್ಲಿ ಇಂತಹ ಪಂಪುಸೆಟ್ಟುಗಳನ್ನು ಕೊಟ್ಟರೆ ಪ್ರಯೋಜನವಾಗುವುದಾದರೂ ಏನೆಂದು ನಾನು ಪ್ರಶ್ನೆಮಾಡುತ್ತೇನೆ. ಆದ್ದರಿಂದ ಎಲ್ಲ ನೀರು ಸಿಗುತ್ತದೋ ಅಂತಹ ಕಡೆಗಳಲ್ಲಿ ಲಿಫ್ಟ್ ಇರಿಗೇಷನ್ನನ್ನು ಮಾಡಿಸಿ ಅವರಿಗೆ ಖರ್ಚು ಮಾಡಿದಂತಹ ಹಣವನ್ನು ಕಾಂಟ್ರಿಬ್ಯೂಷನ್ ಕಂದಾಯದ ರೂಪದಲ್ಲಿ ಸರ್ಕಾರದವರು ವಸೂಲು ಮಾಡುವಂತೆ ಏರ್ಪಾಡು ಮಾಡಿದರೆ ಬಹಳ ಉಪಕಾರವಾಗುತ್ತದೆ. ಇವರು ಈ ರೀತಿಯಾಗಿ ಸಾಲದ ಹಣವನ್ನು ಕೊಡುವುದರಿಂದ ಅವರಿಗೆ ವಿಶೇಷವಾಗಿ ನಷ್ಟವಾಗುವುದೆಂಬ ಶಂಕೆ ನನಗೆ ಬಂದಿದೆ. ಇನ್ನು ನೀರಾವರಿ ಬಾವಿಗಳಿಗೆ ಸರಕಾರದವರು ಹೇರಳವಾಗಿ ಸಾಲ ಕೊಡುತ್ತಿದ್ದಾರೆ. ಇದರಿಂದ ಎರಡು ತರಹ ತೊಂದರೆಗಳಿವೆ. ಅನುಭವ ಇಲ್ಲದ ರೈತ ಬರೀ ನೀರಿಲ್ಲದ ಜಾಗದಲ್ಲಿ ಬಾವಿ ತೆಗೆಯುತ್ತಾನೆ.

ನೀರು ಸಿಗುವುದಿಲ್ಲ. ದುಡ್ಡು ಖರ್ಚುಮಾಡಿದರೂ ನೀರು ಸಿಗದೆ ರೈತನಾದವನು ತೊಂದರೆಗೀಡಾಗುತ್ತಾನೆ. ಮೋಸಗಾರ ರೈತ ಸರ್ಕಾರದಿಂದ ದುಡ್ಡು ತೆಗೆದು ಬಾವಿ ತೆಗೆಯದೆ ದುಡ್ಡನ್ನು ಅವನು ತನ್ನ ಜೀವನಕ್ಕೂ ಮತ್ತು ಇತರೆ ಕಾರ್ಯಗಳಿಗೆ ಉಪಯೋಗಿಸಿದರೆ ಅಗಲೂ ಒಂದು ರೀತಿಯಲ್ಲಿ ಅವನು ಕಷ್ಟಕ್ಕೆ ಗುರಿಯಾಗುತ್ತಾನೆ. ಆದ್ದರಿಂದ ಸರ್ಕಾರದವರ ನೇರವಾಗಿ ಕಂಟ್ರಾಕ್ಟರುಗಳ ಮೂಲಕ ಬಾವಿ ತೆಗೆಸಿ ಆ ದುಡ್ಡನ್ನು ಸಾಲದ ಮೂಲಕ ವಸೂಲು ಮಾಡಿದರೆ ಜನಗಳಿಗೆ ಹೆಚ್ಚಿನ ಸಹಾಯವಾಗಬಹುದೆಂದು ನಾನು ಅಭಿಪ್ರಾಯಪಡುತ್ತೇನೆ. ಆದರೆ ಅಧ್ಯಕ್ಷರು ಬೆಲ್ ಹೊಡೆದು ನನಗೆ ಹೆಚ್ಚು ಮಾತನಾಡಲಿಕ್ಕೆ ಕಾಲಾವಕಾಶವಿಲ್ಲವೆಂದು ಸೂಚಿಸಿದ್ದರಿಂದ ನನ್ನ ಮಾತನ್ನು ಇಲ್ಲಿಗೇ ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಸಚಿವರು ಈ ಸಭೆಯಮುಂದೆ ಮಂಡಿಸಿರತಕ್ಕ ಆಯವ್ಯಯ ಪಟ್ಟಿ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದು ನಾನು ನಿಂತಿದ್ದೇನೆ. ಈ ಆಯವ್ಯಯ ಪಟ್ಟಿಯಲ್ಲಿ ಈ ದಿವಸ ಮುಂದಿನ ಹಣಕಾಸಿನ ಪರಿಸ್ಥಿತಿಯನ್ನು ವಿಷದವಾಗಿ ಸಭೆಯಮುಂದಿಲ್ಪಟ್ಟಿದೆ. ಅದಕ್ಕಾಗಿ ನಾನು ಮಾನ್ಯ ಹಣಕಾಸಿನ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಆದರೆ ಇದನ್ನು ನಾವು ಓದುವಾಗ ಹಣಕಾಸಿನ ಪರಿಸ್ಥಿತಿ ಎಷ್ಟು ಕೆಟ್ಟಿದೆ ಎನ್ನುವುದು ಭಾಸವಾಗುತ್ತದೆ. ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದ 15, 16, 17ನೇ ಪ್ಯಾರಾಗಳಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ಹೇಳಿದ್ದಾರೆ. ಅಮೇಲೆ 17ನೇ ಪ್ಯಾರಾದಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯು ಸಫಲವಾಗಿದೆ ಎಂದು ಹೇಳಿದ್ದಾರೆ. 250 ಕೋಟಿ ರೂಪಾಯಿಗಳ ಮೂರನೆಯ ಪಂಚವಾರ್ಷಿಕ 'ಯೋಜನೆ ಏನಿದೆ' ಅದಕ್ಕೆ ಬೇಕಾದ 140 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದಲೂ ಮತ್ತು 110 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರದವರೇ ಒದಗಿಸುವ ಒಂದು ವ್ಯವಸ್ಥೆಯನ್ನು ಹಾಕಿಕೊಂಡು ರೆವಿನ್ಯೂ ಕಾಂಟ್ರಿಬ್ಯೂಷನ್‌ನಿಂದ 9.8 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದೆವು, ಆದರೆ ಆ ಹಣ ಬರಲಿಲ್ಲ ಅದರ ಬದಲು 18 ಕೋಟಿ ರೂಪಾಯಿಗಳು ಡಿಫಿಜಿಟ್ ಅಗಿದೆ ಎಂದು ಹೇಳಿದ್ದಾರೆ.

ಸ್ವಾಮಿ, ಸರ್ಕಾರದವರು ನಮಗೆ ಒದಗಿಸಿರತಕ್ಕ ಅಂದಾಜು ಪಟ್ಟಿಯಲ್ಲಿ ಅನೆಕ್ಸ್‌ಜರಿನಲ್ಲಿ ಕೊಟ್ಟಿರುವುದನ್ನು ನೋಡಿದರೆ ಡೈರೆಕ್ಟ್ ಮತ್ತು ಇನ್‌ಡೈರೆಕ್ಟ್ ಟ್ಯಾಕ್ಸ್ ರೆವಿನ್ಯೂ ಕೂಡ ದಿನೇ ದಿನೇ ಏರುತ್ತಿದೆ. 1960-61ನೇ ಸಾಲಿನಲ್ಲಿ ಡೈರೆಕ್ಟ್ ಮತ್ತು ಇನ್‌ಡೈರೆಕ್ಟ್ ಟ್ಯಾಕ್ಸ್ 3352.41 ಲಕ್ಷ ರೂಪಾಯಿಗಳಿತ್ತು. ಅದು 1966-67ನೇ ಸಾಲಿಗೆ 7128.23 ಲಕ್ಷ ರೂಪಾಯಿಗಳಿಗೆ ಏರಿದೆ. ಅದು ಎರಡರಷ್ಟು ದ್ವಿಗುಣವಾಗಿದೆ. ಅದರ ಜೊತೆಗೆ ಟ್ಯಾಕ್ಸ್ ರೆವಿನ್ಯೂ, ನಾನ್ ಟ್ಯಾಕ್ಸ್ ರೆವಿನ್ಯೂ ಕೂಡ ಹೆಚ್ಚಾಗಿದೆ. ಇಂಥಾ ಪರಿಸ್ಥಿತಿ ಇರುವಾಗ 18 ಕೋಟಿ ರೂಪಾಯಿಗಳು ಡಿಫಿಜಿಟ್ ಆಯಿತು ಎಂದು ಹೇಳಿದ್ದಾರೆ. ಇದರ ವಿವರ ಸರಿಯಾಗಿ ಎಕ್ಸ್‌ಪ್ಲನೇಷನ್‌ನಲ್ಲಿ ಇಲ್ಲ. ಇದರಲ್ಲಿ 18 ಕೋಟಿ ರೂಪಾಯಿಗಳ ಖರ್ಚು ಜಾಸ್ತಿ ಆಯಿತು ಎನ್ನುವ ಒಂದು ಅರ್ಥವನ್ನು ಕೊಡಬಹುದೇ ವಿನಾ, ಸರ್ಕಾರದವರು ತಿಳಿಸಿರುವ ಹಾಗೆ ಸುಲಭವಾಗಿ ಇದನ್ನು ಒಪ್ಪಿಕೊಳ್ಳತಕ್ಕದ್ದಲ್ಲ. ಅ ಮೇಲೆ ಮುಂದೆ ಅದೇ ಪ್ಯಾರಾದಲ್ಲಿ ಕೊನೆಯ ಭಾಗದಲ್ಲಿ ಸರ್ಕಾರ ಸಾಲದ ಮರುಪಾವತಿಗೆ ಊಹಿಸಿದ 25 ಕೋಟಿ ರೂಪಾಯಿಗಳ ಹಣವು ಎಲ್ಲಿಗೂ ಸಾಲದೇ ಹೋಯಿತು. ಕೊನೆಗೆ ಅದು 43 ಕೋಟಿ ರೂಪಾಯಿಗಳಿಗೆ ಬಂತು ಎಂದು ಹೇಳಿದ್ದಾರೆ. 52 ಕೋಟಿ ರೂಪಾಯಿಗಳು ಮರುಪಾವತಿಯಾಯಿತು ಎನ್ನುವ ಮಾತು ತಿಳಿವಳಿಕೆಯುಳ್ಳವರನ್ನು ಯೋಚನೆಗೆ ಗುರಿ ಮಾಡತಕ್ಕ ಮಾತಾಗಿದೆ. ಮೊದಲು 25 ಕೋಟಿ ರೂಪಾಯಿಗಳನ್ನು ಯಾವ ರೀತಿ ಅಂದಾಜು ಮಾಡಿದ್ದರು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಅದರ ವೆಚ್ಚ 52 ಕೋಟಿ ರೂಪಾಯಿಗಳಿಗೆ ಯಾವ ರೀತಿ ತಲುಪಿತು ಎನ್ನುವುದು ಹೆಚ್ಚು ವಿಚಾರ ಮಾಡತಕ್ಕ ಮಾತಾಗಿದೆ. ಲೆಕ್ಕಪತ್ರಗಳು ಸರ್ಕಾರದಲ್ಲಿ ಇಲ್ಲ ಎಂದು ಅರ್ಥ ಬರುತ್ತದೆ. ಒಂದು ವೇಳೆ ಆ ಖರ್ಚು ಅಧಿಕವಾಗಿದ್ದ ಪಕ್ಷದಲ್ಲಿ ಕೇಂದ್ರ ಸರ್ಕಾರಕ್ಕೆ ಯಾವ ಯಾವ ವರ್ಷ ಹಣವನ್ನು ಪಾವತಿ ಮಾಡಬೇಕಾಗಿತ್ತೊ ಆ ವರ್ಷ ಹಣವನ್ನು ಪಾವತಿ ಮಾಡಿಲ್ಲ ಎಂದು ಅರ್ಥವಾಗುತ್ತದೆ. ಪಂಚವಾರ್ಷಿಕ ಯೋಜನೆಯ ಮುನ್ಸೂಚನೆಯ ಪ್ರಕಾರ 25 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಅಂದಾಜು ಮಾಡಿದ್ದ ಬಗ್ಗೆ ಆ ಹಣವು ಎಲ್ಲಿಗೂ ಸಾಲದೆ ಅದು 43 ಕೋಟಿ ರೂಪಾಯಿಗಳಿಗೆ ಹೋಯಿತು ಎಂದು ಹೇಳಿದ್ದಾರೆ. ಈ ಮೂರನೇ ಪಂಚವಾರ್ಷಿಕ ಯೋಜನೆಗೆ ನಮ್ಮ ರಾಜ್ಯ ಸರ್ಕಾರದವರು ಒದಗಿಸಬೇಕಾಗಿದ್ದಂತ 110 ಕೋಟಿ ರೂಪಾಯಿಗಳಲ್ಲಿ 27 ಕೋಟಿ ರೂಪಾಯಿಗಳು ಜಾಸ್ತಿ ಖರ್ಚಾಗಿ ಹೋಗಿದೆ. ಮಿಸಲೇನಿಯಸ್ ಕ್ಯಾಪಿಟಲ್ ರೆಸಿಟ್ಸ್‌ನಲ್ಲಿ ಡಿಫಿಜಿಟ್ ಇಲ್ಲ, ಸರ್‌ಪ್ಲಸ್ಸೂ ಇಲ್ಲ ಎಂದು ಅಂದಾಜು ಮಾಡಿ ಕೊನೆಗೆ 45 ಕೋಟಿ ರೂಪಾಯಿಗಳು ಕೊರತೆ ಬಂದಿದೆ ಎಂದು ಹೇಳುತ್ತಾರೆ. ಅಷ್ಟು ಹೆಚ್ಚು ಹಣ ಕೊರತೆ ಬದ್ದಾಗ ಆ ಕೊರತೆಯನ್ನು ಭರ್ತಿಮಾಡಿಕೊಳ್ಳು

(ಶ್ರೀ ಕೆ. ಎಚ್. ರಂಗನಾಥ್)

ವುದಕ್ಕೆ ಕೇಂದ್ರ ಸರ್ಕಾರದಿಂದ 17 ಕೋಟಿ ರೂಪಾಯಿಗಳನ್ನೂ ಸಹಾಯ ರೂಪದಲ್ಲಿ ಪಡೆದು ಕೊಂಡಿದ್ದಾರೆ. ಅಮೇಲೆ ರಿಜರ್ವ್ ಬ್ಯಾಂಕಿನಿಂದ 19.4 ಕೋಟಿ ರೂಪಾಯಿಗಳನ್ನು ಸೆಕ್ಯೂರಿಟಿ ಯಿಂದಲೂ, 19.45 ಕೋಟಿ ರೂಪಾಯಿಗಳನ್ನು ಓವರ್ ಡ್ರಾಫ್ಟಿನಿಂದಲೂ ತಂದಿದ್ದಾರೆ. ಮಿಕ್ಕ ಹಣಕ್ಕೆ ಯಾವ ವ್ಯವಸ್ಥೆ ಮಾಡಿ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಿದ್ದಾರೆ. 250 ಕೋಟಿ ರೂಪಾಯಿಗಳು ಎಲ್ಲಿಂದ ಬಂತು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಸರ್ಕಾರದವರು ಸರಿಯಾದ ಸಮಜಾಯಿಷಿಯನ್ನು ಕೊಡಬೇಕು. ಸರ್ಕಾರದವರು ಹೇಳಿರುವ ರೀತಿಯಲ್ಲಿ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಹೆಚ್ಚು ಕೊರತೆಯಾಗಿದೆ. ಅದರಲ್ಲಿ 20–30 ಕೋಟಿ ರೂಪಾಯಿಗಳ ಕೆಲಸ ಕುಂಠಿತವಾಗಿದೆ. ಈ ಹಣ ಕಾಸಿನ ಪರಿಸ್ಥಿತಿಯ ಬಗ್ಗೆ ಶ್ರೀಮಾನ್ ಸಂತಾನಂ ಅವರೂ ಕೂಡ ಹೇಳಿದರು ಆ ಯೋಜನೆಯು ಸರಿಯಾಗಿ ಕಾರ್ಯಗತ ವಾಗಿದ್ದರೆ ಅದರ ಖರ್ಚು ಇನ್ನೂ ಜಾಸ್ತಿ ಬರುತ್ತಿತ್ತು ಎಂದು. ಪ್ರಾರಂಭದಲ್ಲಿ ಇದು ಎಂತಹ ಪರಿಸ್ಥಿತಿಗೆ ಬಂದಿದೆ ಎಂದು ನೋಡುವುದಾದರೆ ಅಧಿಕಾರಿಗಳು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದು ನಾವು ಹೇಳಬೇಕಾಗಿದೆ. ಅದನ್ನು ನಾವು ಬೇರೆ ವಾಕ್ಯದಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಈ ಆಯವ್ಯಯ ಪಟ್ಟಿ 10 ಕೋಟಿ ರೂಪಾಯಿಗಳ ಕೊರತೆಯಿಂದ ಕೂಡಿದೆಯೇ ವಿನಾ ಮಾನ್ಯ ಸಚಿವರು ಮಂಡಿಸಿರುವ ಹಾಗೆ ಇದು ಉಳಿತಾಯದಿಂದ ಕೂಡಿರುವ ಬಡ್ಜೆಟ್ ಅಲ್ಲ.

ನಾನು ಇನ್ನೊಂದು ವಿಷಯವನ್ನು ಹೇಳುತ್ತೇನೆ. ಆಹಾರದ ಉತ್ಪಾದನೆಯ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇವೊತ್ತಿನ ದಿವಸ ಸರ್ಕಾರದವರು ಸರ್ವೆ ಆಫ್ ಸ್ಮಾಲ್ ಹೋಲ್ಡಿಂಗ್ ಕಲ್ಟಿವೇಷನ್‌ನ್ನು ಮಾಡುವುದು ಸೂಕ್ತ. ಮೈಸೂರು ಸಂಸ್ಥಾನದಲ್ಲಿ ಒಂದು ಎಕರೆಯಿಂದ 10 ಎಕರೆಯವರೆಗೆ ಹಿಡುವಳಿ ಇರತಕ್ಕ ಸ್ಮಾಲ್ ಹೋಲ್ಡಿಂಗ್ಸ್‌ಗಳು ಶೇಕಡ 69 ಇವೆ. ಇಂಥಾ ಪರಿಸ್ಥಿತಿ ಇರುವಾಗ ಸರ್ಕಾರದವರು ರೈತನಿಗೆ ಕೊಡತಕ್ಕ ಹಣ ಸಹಾಯ ಯಾವ ರೂಪದಲ್ಲಿಯೂ ಅವನಿಗೆ ಸಿಕ್ಕುತ್ತಾ ಇಲ್ಲ. ಅದು ಏನಿದ್ದರೂ ದೊಡ್ಡ ದೊಡ್ಡ ರೈತರಿಗೆ ಸಿಕ್ಕುತ್ತಿದೆಯೇ ವಿನಾ ಸಣ್ಣ ಸಣ್ಣ ರೈತರಿಗೆ ಯಾವ ಸಹಾಯವೂ ಆಗಿಲ್ಲ. ಫುಡ್ ಪ್ರೊಡಕ್ಷನ್ ವಿಚಾರ ಮಾಡತಕ್ಕ ಇಲಾಖೆಯವರು ಸರಿಯಾದ ಅಂಕಿ ಅಂಶಗಳನ್ನು ಒದಗಿಸಿಕೊಳ್ಳಬೇಕು. ಯೋಜನೆಯನ್ನು ನಿಗದಿಯಾದ ಕಾಲದಲ್ಲಿ ಮುಗಿಸಬೇಕು. ಇಲ್ಲದಿದ್ದರೆ ಯೋಜನೆಯು ಕಾರ್ಯಗತ ವಾಗುವುದಿಲ್ಲ. ನಾವು ಕಂಡಹಾಗೆ ಇದನ್ನು ಸರ್ಕಾರ ಒಪ್ಪಿಕೊಂಡಿದೆ. ಈ ಯೋಜನೆಯಲ್ಲಿ ನಾವು ಎಷ್ಟು ಆಹಾರವನ್ನು ಉತ್ಪತ್ತಿ ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವೋ ಅಷ್ಟು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆಲ್ಲಾ ನಾನಾ ಕಾರಣ ಗಳಿವೆ. ಆ ಕಾರಣಗಳಲ್ಲಿ ಹೆಚ್ಚಿನ ಕಾರಣವೇನೆಂದರೆ ಆಡಳಿತದಲ್ಲಿ ಅಲಕ್ಷತೆ ಮತ್ತು ಅದಕ್ಷತೆ ಇರುವುದು ಕಾರಣವಾಗಿದೆ. ಇದನ್ನು ಸರ್ಕಾರದವರು ಸರಿ ಮಾಡಬೇಕು. ಅರ್ಥ ಮಂತ್ರಿಗಳು ನಿಗಾ ವಹಿಸಿ ಕೆಲಸ ಮಾಡಬೇಕು. ರಿವೈಜ್ ಎಸ್ಟಿಮೇಟ್ ಮಾಡುವುದು ಏನಿದೆ ಅದರಿಂದ ಹೆಚ್ಚಿನ ತೊಂದರೆಯಾಗುತ್ತದೆ. ಶರಾವತಿಯ ಪವರ್ ಪ್ರಾಜೆಕ್ಟ್ ಏನಿದೆ ಅದರಿಂದ ವಿದ್ಯುಚ್ಛಕ್ತಿಯನ್ನು 1962ನೇ ಇಸವಿಯಲ್ಲಿಯೇ ಒದಗಿಸಬೇಕಾಗಿತ್ತು. 1965ನೇ ಇಸವಿಯ ಹೊತ್ತಿಗೆ ಎರಡು ಯೂನಿಟ್ ವಿದ್ಯುಚ್ಛಕ್ತಿ ಕಮಿಷನ್ ಮಾಡಿದ್ದಾರೆ. 1962ನೇ ಇಸವಿಯಲ್ಲಿಯೇ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದರೆ ಅದರಿಂದ ನಮಗೆ ನಾಲ್ಕು ಕೋಟಿ ರೂಪಾಯಿಗಳ ಜೊತೆಗೆ ಇನ್ನೂ ಹೆಚ್ಚಿನ ಆದಾಯ ಬರುತ್ತಿತ್ತು. ಈಗ ಬರುತ್ತಿರುವ ಆದಾಯದ ಎರಡರಷ್ಟು ಮೂರರಷ್ಟು ಆದಾಯ ಬರುತ್ತಿತ್ತು. ಈ ಎಲ್ಲಾ ವಿಷಯಗಳನ್ನು ವಿಚಾರ ಮಾಡತಕ್ಕ ಸಂದಿಗ್ಧ ಪರಿಸ್ಥಿತಿ ಇದೆ. ಇದರ ಬಗ್ಗೆ ಯೋಚನೆ ಮಾಡಬೇಕು. ನಿಗಾವಹಿಸಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ (ಕಲ್ಗಿ).—ಮಾನ್ಯ ಸಭಾಪತಿಗಳೇ, ಮಾನ್ಯ ಹಣಕಾಸಿನ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ಎರಡು ಮೂರು ವಿಷಯ ಗಳನ್ನು ನಾನು ಹೇಳಬಯಸುತ್ತೇನೆ. ಎರಡು ಪಂಚವಾರ್ಷಿಕ ಯೋಜನೆಗಳು ಮುಗಿದು ಈಗ ಮೂರನೆಯ ಪಂಚವಾರ್ಷಿಕ ಯೋಜನೆಯು ಮುಗಿಯುತ್ತಾ ಬಂದಿದೆ. ಈ ಯೋಜನೆಗಳಲ್ಲಿ ಮೈಸೂರು ರಾಜ್ಯದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಯಾವ ಪ್ರೋತ್ಸಾಹವನ್ನು, ಯಾವ ಪುರಸ್ಕಾರ ವನ್ನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಸಣ್ಣ ಸಣ್ಣ ಕೈಗಾರಿಕೆಗಳು ಬೆಳೆಯಬೇಕಾದರೆ ಸಾಕಷ್ಟು ರಾ ಮೆಟೀರಿಯಲ್ಸ್ ದೊರೆಯುವಂತೆ ಸರ್ಕಾರ

ಪ್ರಯತ್ನ ಮಾಡಬೇಕಾಗಿತ್ತು. ಆ ಪ್ರಯತ್ನ ನಡೆದಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಾಗ ಲಾರದು.

4-00 P.M.

ಹೊಸ ಮೈಸೂರು ಸಂಸ್ಥಾನ ಅಸ್ತಿತ್ವಕ್ಕೆ ಬಂದ ಕಾಲದಲ್ಲಿ ಯಾವ ಪೊಸಿಷನ್ ಇತ್ತೋ ಅದೇ ಪೊಸಿಷನ್ ಈಗಲೂ ಇದೆ. ರಾ ಮೆಟೀರಿಯಲ್ಸ್‌ಗಳು ನಮಗೆ ಸೆಂಟರ್‌ನಿಂದ ಯಾವ ರೀತಿ ಖಾಗಿ ಕೋಟಾ ಬರುತ್ತಿತ್ತೋ ಅದೇ ರೀತಿ ಇದೆ ಮತ್ತು ಅದು ಹೆಚ್ಚಾಗಿಲ್ಲ. 1957ರಲ್ಲಿ ಮೈಸೂರು ರಾಜ್ಯಕ್ಕೆ ಸೆಂಟ್ರಲ್ ಕೋಟಾ ಸುಮಾರು ನಾಲ್ಕು ಪರ್ಸೆಂಟು ಇತ್ತು ಅದೇ ರೀತಿ ಈಗಲೂ ಬರುತ್ತಿದೆ. ಸುಮಾರು ಎಂಟು ವರ್ಷಗಳಾದರೂ ಕೂಡ ಇದರಲ್ಲಿ ರಾಜ್ಯ ಸರಕಾರ ವಾಗಲೀ ಅಥವಾ ಇಲ್ಲಿರುವ ಅಧಿಕಾರಿಗಳಾದರೂ ಆಗಲೀ ಯಾವ ತರಹದ ಬದಲಾವಣೆ ಮಾಡಿಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಮುಂಬಯಿ ಅಥವಾ ಮಹಾರಾಷ್ಟ್ರಕ್ಕೆ ಶೇಕಡಾ 28ರಷ್ಟು ರಾ ಮೆಟೀರಿಯಲ್ಸ್‌ಗಳ ಕೋಟಾ ಕೊಟ್ಟಿದ್ದಾರೆ. ಪಂಜಾಬಿಗೆ ಶೇಕಡಾ 20ರಷ್ಟು ಕೊಟ್ಟಿದ್ದಾರೆ. ಪಶ್ಚಿಮ ಬೆಂಗಾಲ್‌ಗೆ ಶೇಕಡಾ 20ರಷ್ಟು ಕೊಟ್ಟಿದ್ದಾರೆ. ಆದರೆ ಮೈಸೂರಿಗೆ ನೋಡಿದರೆ ಶೇಕಡಾ ನಾಲ್ಕರಷ್ಟು ರಾ ಮೆಟೀರಿಯಲ್ಸ್‌ಗಳ ಕೋಟಾ ಎಂದು ಕೊಟ್ಟಿದ್ದಾರೆ. ಹೀಗೆ ಬಾರಿ ಪ್ರಮಾಣದಲ್ಲಿ ರಾ ಮೆಟೀರಿಯಲ್ಸ್‌ಗಳ ಷಾರ್ಟೇಜು ಇದ್ದರೂ ಅಧಿಕಾರಿಗಳು ಇದನ್ನು ಹೆಚ್ಚು ಮಾಡಲು ಯಾವ ಪ್ರಯತ್ನವನ್ನೂ ಮಾಡದೇ ಇರುವುದು ಜನಕ್ಕೆ ಬಹಳ ತೊಂದರೆ ಯಾಗಿದೆ. ರಾಜ್ಯ ಸರಕಾರ ಈ ದಿಸೆಯಲ್ಲಿ ಪ್ರಯತ್ನ ಮಾಡಿ ಕೇಂದ್ರ ಸರಕಾರದಲ್ಲಿ ಒತ್ತಾಯ ತಂದು ಹೆಚ್ಚು ರಾ ಮೆಟೀರಿಯಲ್ಸ್‌ಗಳ ಕೋಟಾ ಪಡೆಯಲು ಪ್ರಯತ್ನಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನೊಂದು ತೊಂದರೆ ಏನಾಗಿದೆ ಎಂದರೆ ಕೈಗಾರಿಕೆಗಳು ಬೆಳೆಯಬೇಕಾಗಿದ್ದರೆ ಸೇಲ್ಸ್ ಟ್ಯಾಕ್ಸನ್ನು ಹೆಚ್ಚು ಮಾಡಬಾರದು. ಇಲ್ಲಿ ಶೇಕಡಾ ಹತ್ತರಷ್ಟು ಸೇಲ್ಸ್ ಟ್ಯಾಕ್ಸ್ ಕೊಡಬೇಕೆಂದು ಮಾಡಿದ್ದಾರೆ. ಆದರೆ ತರ ನೆರೆ ಪ್ರಾಂತಗಳಲ್ಲಿ ಬಹಳ ಕಡಿಮೆ ಹಾಕಿದ್ದಾರೆ. ಮದರಾಸಿನಲ್ಲಿ ನೋಡಿದರೆ ಅವರು ಶೇಕಡಾ ಒಂದರಷ್ಟು ಮಾತ್ರ ಸೇಲ್ಸ್ ಟ್ಯಾಕ್ಸನ್ನು ಹಾಕುತ್ತಿದ್ದಾರೆ. ಇದರಿಂದ ತಮಗೆ ಬೇಕಾದ ಆನ್‌ಸಿಲಿಯರಿ ಪ್ರಾಜೆಕ್ಟುಗಳನ್ನು ಮಾಡಲು ಅವರಿಗೆ ಅನುಕೂಲಗಳಾಗುತ್ತಿವೆ. ನಮ್ಮ ರಾಜ್ಯದಲ್ಲೂ ಅದೇ ರೀತಿ ಆನ್‌ಸಿಲಿಯರಿ ಪ್ರಾಜೆಕ್ಟುಗಳನ್ನು ಮಾಡಿಕೊಳ್ಳಬೇಕಾದರೆ ಶೇಕಡಾ ಒಂದರಷ್ಟು ಮಾತ್ರ ಸೇಲ್ಸ್ ಟ್ಯಾಕ್ಸನ್ನು ಹಾಕಬೇಕು. ಆ ರೀತಿ ಸರಕಾರ ಇಲ್ಲೂ ಕೂಡ ಅನ್‌ಸಿಲಿ ಯರಿ ಪ್ರಾಜೆಕ್ಟು ಕೆಲಸಗಳನ್ನು ಮಾಡಲು ಅನುಕೂಲವಾಗುವಂತೆ ಶೇಕಡಾ ಒಂದರಷ್ಟು ಮಾತ್ರ ಸೇಲ್ಸ್ ಟ್ಯಾಕ್ಸು ಎಂದು ಹಾಕಬೇಕು ಎಂದು ಇಲ್ಲಿ ಸೂಚಿಸುತ್ತೇನೆ.

ಎರಡನೆಯದು ಸಣ್ಣ ಸಣ್ಣ ಕೈಗಾರಿಕೆಗಳು ಮುನಿಸಿಪಲ್ ಲಿಮಿಟ್‌ನಲ್ಲಿ ಸ್ಥಾಪನೆ ಮಾಡ ಬೇಕಾಗಿದ್ದರೆ ಅವರಿಗೆ ಲೈಸೆನ್ಸ್ ಬೇಕಾಗುತ್ತದೆ. ಕೆಲವು ಕಡೆ ಇಂತಹ ಲೈಸೆನ್ಸ್ ಪಡೆಯಲು ಜನ ಬಹು ತೊಂದರೆಪಡುತ್ತಿದ್ದಾರೆ. ಬಹಳ ಕಷ್ಟಗಳಿಗೆ ಈಡಾಗುತ್ತಿದ್ದಾರೆ. ಇದಕ್ಕಾಗಿ ಸುಮಾರು ಎರಡು ಮೂರು ತಿಂಗಳ ಕಾಲ ಅಲೆಯಬೇಕಾಗುತ್ತದೆ. ಮದರಾಸು ರಾಜ್ಯದಲ್ಲಿ ಒಂದು ಸ್ಟ್ಯಾಟ್ಯುಟರಿ ಕಮಿಟಿ ಎಂದು ಮಾಡಿದ್ದಾರೆ. ಇದಕ್ಕೆ ಅಲ್ಲಿನ ಡಿ. ಸಿ. ಯವರೇ ಚೇರ್ಮನ್ನರಾಗಿದ್ದಾರೆ. ಮತ್ತೆ ಅದರಲ್ಲಿ ಕಾಮರ್ಸ್ ಮತ್ತು ಇಂಡಸ್ಟ್ರೀ ಶಾಖೆಯ ಡೈರೆಕ್ಟರು ಅಥವಾ ಒಬ್ಬರು ಅಸಿಸ್ಟೆಂಟು ಡೈರೆಕ್ಟರು ಒಬ್ಬರು ಇದ್ದಾರೆ ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ತಿಳಿದಿರತಕ್ಕ ಒಬ್ಬರು ಮತ್ತು ಒಬ್ಬರು ನಾನ್ ಅಫಿಷಿಯಲ್ ಮೆಂಬರುಗಳು ಇವರುಗಳಿಂದ ಕೂಡಿದ ಒಂದು ಸ್ಟ್ಯಾಟ್ಯುಟರಿ ಕಮಿಟಿ ಎಂದು ನೇಮಕ ಮಾಡಿ ಅದರ ಮೂಲಕ ಜನಕ್ಕೆ ಲೈಸೆನ್ಸ್‌ನ್ನು ಕೊಡುವ ಪದ್ಧತಿ ಇಟ್ಟಿದ್ದಾರೆ. ಇದರಿಂದ ಸಣ್ಣ ಸಣ್ಣ ಕೈಗಾರಿಕೆಗಳು ಅಲ್ಲಿ ಚೆನ್ನಾಗಿ ಸ್ಥಾಪನೆಯಾಗಲು ಅವಕಾಶವಾಗಿದೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಕೂಡ ಒಂದು ಸ್ಟ್ಯಾಟ್ಯುಟರಿ ಕಮಿಟಿ ಮಾಡಿ ಪ್ರತಿ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆ ಮಾಡುವವರಿಗೆ ಲೈಸೆನ್ಸ್ ಕೊಡುವ ಪದ್ಧತಿ ಜಾರಿಗೆ ತರಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ರಾಜ್ಯದ ವಿಸ್ತರಣಾ ಯೋಜನೆ ಅಥವಾ ಸಿ. ಡಿ. ಬ್ಲಾಕುಗಳ ಪಾಲಿಸಿಯನ್ನು ಈಗ ಬದಲಾವಣೆ ಮಾಡತಕ್ಕ ಸಮಯ ಬಂದಿದೆ ಮತ್ತು ಆ ರೀತಿ ಮಾಡತಕ್ಕದ್ದು ಯೋಗ್ಯವಾಗಿದೆ. ರಾಜ್ಯ ಸರಕಾರದಿಂದ ವಿಸ್ತರಣಾ ಯೋಜನೆಗಳಿಗಾಗಿ ಹಣವನ್ನು ಈಗ ಒದಗಿಸುತ್ತಿದ್ದಾರೆ. ಇದನ್ನು ಸ್ಕೀಮ್ಯಾಟಿಕ್ ಬಜೆಟ್ ರೀತಿಯಲ್ಲಿ ಮಾಡಿ ಇದನ್ನು ತಾಲ್ಲೂಕಾ ಅಭಿವೃದ್ಧಿ ಮಂಡಲಗಳು ಕೆಲಸ ಮಾಡಲು ತೊಂದರೆಯಾಗಿದೆ. ಸ್ಕೀಮ್ಯಾಟಿಕ್ ಬಜೆಟ್‌ನ ಪಾಲಿಸಿಯಿಂದಾಗಿ ರಾಜ್ಯ ಕೊಡುವ ಹಣವನ್ನು ತಾಲ್ಲೂಕಾ ಬೋರ್ಡುಗಳವರು ಡ್ರಾ ಮಾಡಿಕೊಳ್ಳುತ್ತಾ ಇರುವುದರಿಂದ

(ಶ್ರೀ ಎಸ್. ರುದ್ರಪ್ಪ)

ಕೆಲಸಗಳು ಆಗದೆ ಬಡ್ಜೆಟ್ಟಿನಲ್ಲಿನ ಹಣ ಲ್ಯಾಪ್ಸ್ ಆಗುತ್ತಾ ಬರಲು ಅವಕಾಶವಾಗಿದೆ. ಆದುದರಿಂದ ರಾಜ್ಯ ಸರಕಾರದವರು ಇದನ್ನು ಯಾವ ರೀತಿಯಾಗಿ ಬದಲಾವಣೆ ಮಾಡಬಹುದು ಎನ್ನುವುದನ್ನು ವಿಚಾರ ಮಾಡಿ ಪರಿಶೀಲನೆ ಮಾಡಬೇಕೆಂದು ನನ್ನ ಸಲಹೆ.

ತಾಲ್ಲೂಕಾ ಅಭಿವೃದ್ಧಿ ಮಂಡಲಿಗಳು ಬಂದಮೇಲೆ ಕೆಲಸಗಳು ತೃಪ್ತಿಕರವಾಗಿ ನಡೆಯುತ್ತಿವೆ ಮತ್ತು ತಾಲ್ಲೂಕಾ ಬೋರ್ಡುಗಳ ಕೆಲಸಗಳು ಭರದಿಂದ ನಡೆಯುತ್ತಾ ಬಂದಿದೆ. ಆದರೆ ಪಂಚಾಯತಿಗಳಲ್ಲಿ ಅಷ್ಟು ತೃಪ್ತಿಕರವಾಗಿ ಕೆಲಸಗಳು ನಡೆಯುತ್ತಿಲ್ಲ. ಪಂಚಾಯತಿಗಳಿಗೆ ಸಾಕಷ್ಟು ಶಿಬ್ಬಂದಿ ಇಲ್ಲ. ಹಳ್ಳಿಗಳಲ್ಲಿರುವ ಕೆಲವು ಪಂಚಾಯತಿಗಳಲ್ಲಿ ಸೆಕ್ರೆಟರಿಗಳೇ ಇಲ್ಲ. ಕೆಲವು ಕಡೆ ಲೋಕಲ್ ಕ್ಯಾಂಡಿಡೇಟರುಗಳನ್ನು ಪಂಚಾಯತಿ ಸೆಕ್ರೆಟರಿಗಳೆಂದು ನೇಮಕ ಮಾಡಿದ್ದಾರೆ. ಇಂತಹವರುಗಳಿಂದ ಅಗ್ರಿಕಲ್‌ಚರಲ್ ಪ್ರೊಡಕ್ಷನ್ ಕೆಲಸಗಳು ಚೆನ್ನಾಗಿ ನಡೆಯುತ್ತಿಲ್ಲ. ಆದುದರಿಂದ ಈಗಿರುವ ಲೋಕಲ್ ಕ್ಯಾಂಡಿಡೇಟರುಗಳನ್ನೇ ಪರ್ಮನೆಂಟಾಗಿ ಪಂಚಾಯತಿ ಸೆಕ್ರೆಟರಿಗಳಾಗಿ ಇರುವಂತೆ ಮಾಡುವುದರಿಂದ ಮುಂದೆ ಅವರುಗಳು ಅಗ್ರಿಕಲ್ಚರ್ ಪ್ರೊಡಕ್ಷನ್ನು ವಿಚಾರಗಳಲ್ಲಿ ಚೆನ್ನಾಗಿ ಕೆಲಸ ಮಾಡಲು ಅವಕಾಶವಾಗುತ್ತದೆ. ಮತ್ತು ಇಂತಹ ಪಂಚಾಯತಿ ಸೆಕ್ರೆಟರಿಗಳಿಗೆ ಮೂರು ತಿಂಗಳ ಕಾಲ ಗ್ರಾಮ ಸೇವಕರಿಗೆ ತರಬೇತು ಕೊಡುವಂತೆ ಇವರಿಗೂ ಕೊಡಬೇಕು. ಈ ರೀತಿಯಾಗಿ ಪಂಚಾಯತಿ ಸೆಕ್ರೆಟರಿಗಳಿಗೆ ಮೂರು ತಿಂಗಳ ಕಾಲ ತರಬೇತಿ ಕೊಡುವ ವ್ಯವಸ್ಥೆ ಮಾಡಿದರೆ ಇದರಿಂದ ಬಹಳ ಅನುಕೂಲವಾಗುತ್ತದೆ ಮತ್ತು ಕೆಲಸಗಳು ಬಹು ಒಳ್ಳೆಯ ರೀತಿಯಿಂದ ನಡೆಯುತ್ತವೆ. ಈ ಪಂಚಾಯತಿ ಸೆಕ್ರೆಟರಿಗಳಿಗೆ ಮೂರು ವಿಷಯಗಳಲ್ಲಿ ತರಬೇತಿ ಕೊಟ್ಟರೆ ಅವರುಗಳು ತೃಪ್ತಿಯಿಂದ ಕೆಲಸ ಮಾಡಲು ಅನುಕೂಲವಾಗುತ್ತದೆ, ಒಂದು ಪೆಸ್ಟ್ ಕಂಟ್ರೋಲ್ ವಿಷಯದಲ್ಲಿ, ಇನ್ನೊಂದು ಕಂಪೋಸ್ಟು ಮೆನ್ಯೂರು ಪಿಟ್ಟುಗಳ ವಿಚಾರ ಹಾಗೂ ಇನ್ನಿತರ ಅಗ್ರಿಕಲ್ಚರಲ್ ಪೊಡಕ್ಷನ್ನುಗಳ ವಿಚಾರದಲ್ಲಿ ತರಬೇತಿ ಕೊಟ್ಟರೆ ಅಗ್ರಿಕಲ್ಚರಲ್ಲಿ ಪ್ರೊಡಕ್ಷನ್ ಕೆಲಸಗಳು ಇನ್ನೂ ಹೆಚ್ಚು ಬೆಳೆಯಲು ಅನುಕೂಲವಾಗುತ್ತದೆ. ಹಳ್ಳಿಗಳಲ್ಲಿ ಕೂಡ ಜನರಲ್ಲಿ ಒಂದು ರೀತಿಯ ಹೊಸ ಹುರುಪು ಉಂಟಾಗುತ್ತದೆ. ಆದುದರಿಂದ ಗ್ರಾಮಪಂಚಾಯತಿಗಳಲ್ಲಿರುವ ಸೆಕ್ರೆಟರಿಗಳಿಗೆ ಮೂರು ತಿಂಗಳಕಾಲ ಟ್ರೈನಿಂಗ್ ಕೊಡಲಿಕ್ಕೆ ಸರಕಾರದವರು ಅವಕಾಶಮಾಡಿಕೊಡಬೇಕೆಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಮೂರನೆಯದು ನಮ್ಮ ಗುಲ್ಬರ್ಗಾ ಮತ್ತು ರಾಯಚೂರು ಹಾಗೂ ಬೆಂಗಳೂರುಗಳಲ್ಲಿ ಎಕ್ಸೈಜು ಆಕ್ಷನ್ ಎಂದು ಮಾಡುವಾಗ ಡಿಸ್ಟ್ರಿಕ್ಟ್ ಒಂದು ಯೂನಿಟ್ಟಾಗಿ ಎಂದು ತೆಗೆದುಕೊಂಡು ಹರಾಜು ಮಾಡುತ್ತಿದ್ದಾರೆ. ಇದರಿಂದ ರಾಜ್ಯ ಸರಕಾರಕ್ಕೆ ಬರುವ ರೆವಿನ್ಯೂ ಕೂಡ ಕಡಿಮೆಯಾಗುತ್ತಿದೆ. ಹೈದರಾಬಾದು ರಾಜ್ಯದಲ್ಲಿ ನಮ್ಮ ಗುಲ್ಬರ್ಗಾ ಹಾಗೂ ರಾಯಚೂರುಗಳಲ್ಲಿ ಹರಾಜುಗಳು ನಡೆಯುತ್ತಿದ್ದಾಗ ಗ್ರೂಪ್‌ವೆಯಸ್ ಎಂದು ಹರಾಜು ಮಾಡುತ್ತಿದ್ದರು ಅದರಿಂದ ರಾಜ್ಯ ಸರಕಾರಕ್ಕೆ ಹೆಚ್ಚು ರೆವಿನ್ಯೂ ಬರುತ್ತಿತ್ತು. ಈಗ್ಗೆ ಸುಮಾರು ಐದಾರು ವರ್ಷಗಳಿಂದ ಕೆಲವು ವೆಸ್ಟೆಡ್ ಇಂಟರೆಸ್ಟ್ಸಗಳವರ ಒತ್ತಾಯದಿಂದ ನಮ್ಮ ರಾಜ್ಯದಲ್ಲಿ ಎಕ್ಸೈಜು ಹರಾಜನ್ನು ಮಾಡುವಾಗ ಡಿಸ್ಟ್ರಿಕ್ಟನ್ನು ಒಂದು ಯೂನಿಟ್ಟಾಗಿ ಮಾಡುತ್ತಿರುವುದರಿಂದ ನಮ್ಮ ಗುಲ್ಬರ್ಗಾ ಹಾಗೂ ರಾಯಚೂರು ಭಾಗಗಳಿಂದ ಮೊದಲು ಎಷ್ಟು ಹೆಚ್ಚು ಉತ್ಪತ್ತಿ ಬರುತ್ತಿತ್ತೋ ಅದು ಕಡಿಮೆಯಾಗಿ ದೇಶಕ್ಕೆ ಹೆಚ್ಚು ಪ್ರಯೋಜನವಾಗುತ್ತಿಲ್ಲ. ಹಣಕಾಸಿನ ಮಂತ್ರಿಗಳು ಇದರ ಬಗ್ಗೆ ಅಧಿಕಾರಿಗಳನ್ನು ಹತ್ತೋಟಿಗೆ ತೆಗೆದುಕೊಂಡು ಡಿಸ್ಟ್ರಿಕ್ಟು ವೈಸ್ ಎಂದು ಮಾಡುವುದನ್ನು ರದ್ದು ಮಾಡಬೇಕು. ಮತ್ತು ಗ್ರೂಪ್‌ವೆಯಸ್ ಎಂದು ಮಾಡಲು ವಿಚಾರ ಮಾಡಿ ಹೆಚ್ಚು ಹಣ ಬರಲು ಅನುಕೂಲ ಮಾಡಬೇಕು ಮತ್ತು ಇದರಿಂದ ಎಕ್ಸೈಜು ಅರಿಯರ್ಸ್‌ಗಳನ್ನೂ ಚೆನ್ನಾಗಿ ವಸೂಲು ಮಾಡಬೇಕು. ಡಿಸ್ಟ್ರಿಕ್ಟು ಒಂದು ಯೂನಿಟ್ಟು ಎಂದು ಹರಾಜು ಹಾಕುವ ವ್ಯವಸ್ಥೆಯನ್ನು ರದ್ದುಪಡಿಸಬೇಕು ಎಂದು ಇಲ್ಲಿ ಸರಕಾರಕ್ಕೆ ಒಂದು ಸಲಹೆ ಮಾಡುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ವಿ. ಎಸ್. ಪಾಟೀಲ್‌ರವರು ನಮ್ಮ ಹೈದರಾಬಾದು ಕರ್ಣಾಟಕ ವಿಭಾಗದಲ್ಲಿ ಹೆಚ್ಚಾಗಿ ರೋಡುಗಳನ್ನು ಬಿಲ್ಡಿಂಗ್‌ಗಳ ಹಾಗೂ ಸೇತುವೆಗಳ ಕೆಲಸಗಳನ್ನು ಸರಕಾರ ಮಾಡಿದೆ ಎಂದು ಹೇಳಿದರು. ಹೊಸದಾಗಿ ಈ ಸಾರಿ ಸರಕಾರ ಯಾವ ರೋಡುಗಳು ಹಾಗೂ ಸೇತುವೆಗಳ ಕೆಲಸಗಳನ್ನು ಮಾಡುತ್ತಿಲ್ಲ. ಇಲ್ಲಿ ಮಾಡುತ್ತಿರುವ ಕೆಲಸಗಳು ಹೋದ ಸಾರಿಯ ಬಡ್ಜೆಟ್ಟಿನಲ್ಲಿ ಮಾಡಬೇಕೆಂದು ಇದ್ದ ರೋಡುಗಳ ಹಾಗೂ ಪ್ರಾಜೆಕ್ಟುಗಳ ಕೆಲಸಗಳನ್ನು ಮಾತ್ರ ತೆಗೆದುಕೊಂಡು ಮಾಡುತ್ತಿದ್ದಾರೆ. ಈ ವರ್ಷ ಹೊಸದಾಗಿ ಯಾವ ಕೆಲಸಗಳನ್ನು ಮಾಡಿಲ್ಲ. ಆದುದರಿಂದ ಮಾನ್ಯ ಸದಸ್ಯರಾದ ಶ್ರೀ ವಿ. ಎಸ್. ಪಾಟೀಲರ ಆಕ್ಷೇಪಣೆಗಳು ಸರಿಯಾದುದಲ್ಲ ಎಂದು ಇಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಸ್ಟೋನ್ ಕ್ವಾರೀಸ್‌ಗಳಿವೆ, ಎಂದರೆ ಕಲ್ಲು ಖಣಿಗಳು ಇವೆ. ಸುಮಾರು ಇಪ್ಪತ್ತು ವರ್ಷಗಳಿಂದಲೂ ಇಲ್ಲಿನ ಕಲ್ಲು ಖಣಿಗಳನ್ನೂ ಲೀಸು ಮಾಡಿಕೊಂಡು ಅದರ ಮಾಲೀಕರು ಸರಕಾರದಮೇಲೆ ಬಹಳ ಒತ್ತಾಯ ತರುತ್ತಿದ್ದರು. ಐದು ಮೈಲಿ ದೂರದಲ್ಲಿ ರುವ ಕಲ್ಲು ಖಣಿಯನ್ನು ಯಾರಿಗೂ ಕೊಡಬಾರದು ಎಂದು ಅವರ ಮೇಲೆ ಹೆಚ್ಚು ಲೀಜ್ ಮಾಡ ಬಾರದು ಎಂದು ಮಾಡಿದರು. ಇದರಮೇಲೆ ಅವರುಗಳು ಹೈ ಕೋರ್ಟ್‌ಗೂ ಕೂಡ ಬಂದರು. ಆದರೆ ಅವರ ಪರವಾಗಿ ಕೋರ್ಟಿನಲ್ಲೂ ಡಿಸಿಷನ್ ಕೊಡಲಿಲ್ಲ. ರಾಜ್ಯ ಸರಕಾರದವರು ಇವರೊಡನೆ ಒಂದು ಕಾಂಪ್ರೋಮೈಸು ಮಾಡಿಕೊಂಡು ಮೂರು ಮೈಲಿ ಫಾಸಲೆಯಲ್ಲಿ ಕಲ್ಲು ಖಣಿಯನ್ನು ಯಾರಿಗೂ ಲೀಜ್ ಕೊಡಲಿಕ್ಕೆ ಬರುವುದಿಲ್ಲ ಎಂದು ಆಜ್ಞೆ ಮಾಡಿದ್ದಾರೆ. ಈ ರೀತಿ ಮಾಡಲು ಯಾರು ಕಾರಣರು ಎನ್ನುವುದನ್ನು ಸರಕಾರ ಸರಿಯಾಗಿ ಪರಿಶೀಲಿಸಬೇಕು ಮತ್ತು ಇದಕ್ಕೆ ಅವಕಾಶ ಸರಕಾರ ಕೊಡಬಾರದು. ಇದರ ಬಗ್ಗೆ ಸರಿಯಾದ ಒಂದು ಸ್ಟೇಟುಮೆಂಟನ್ನು ಸರಕಾರದವರು ಈ ಸಭೆಯಲ್ಲಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಗುಲ್ಬರ್ಗಾದಲ್ಲಿರತಕ್ಕ ಸಣ್ಣ ಸಣ್ಣ ಮಾಲೀಕರುಗಳಿಗೆ ಕಟ್ಟಡವನ್ನು ಕಟ್ಟಲು ಸರಿಯಾಗಿ ಕಲ್ಲುಗಳು ಸಿಗುತ್ತಿಲ್ಲ. ಈಗಾಗಲೇ ಷಹಾಬಾದು ಕಲ್ಲುಗಳ ಬೆಲೆ ಹೆಚ್ಚಾಗುತ್ತ ಬರುತ್ತಿದೆ. ಇನ್ನೂ ಇದರ ಬೆಲೆಗಳು ಹೆಚ್ಚುವುದಕ್ಕೆ ಸರಕಾರ ಅವಕಾಶ ಕೊಡ ಬಾರದು ಮತ್ತು ಈ ವಿಚಾರದಲ್ಲಿ ಸರಕಾರ ಇನ್ನೂ ಹೆಚ್ಚು ವಿಚಾರ ಮಾಡಿ ಇದರ ಬಗ್ಗೆ ಒಂದು ಸ್ಟೇಟುಮೆಂಟನ್ನು ಕೊಡಬೇಕೆಂದು ರಾಜ್ಯ ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಕೆಂಚಪ್ಪ (ಪಾವಗಡ).—ಮಾನ್ಯ ಅಧ್ಯಕ್ಷರೇ, 1966—67ನೇ ಆಯವ್ಯಯವನ್ನು ನಾನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ಈ ಸಭೆಯಲ್ಲಿ ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಸ್ವಾಮಿ, ನಮ್ಮ ಸರ್ಕಾರದವರು ನಮ್ಮ ರಾಜ್ಯದಲ್ಲಿ ಈ ಮೂರು ವರ್ಷಗಳೊಳಗಾಗಿ ಆಹಾರದ ಸ್ವಯಂಪರಿಪೂರ್ಣತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂದು ಆಗಾಗ್ಗೆ ಹೇಳಿಕೆಗಳನ್ನು ಕೊಡುತ್ತಾ ಇರುವುದನ್ನು ಪತ್ರಿಕೆಗಳಲ್ಲಿ ಓದುತ್ತಾ ಇದ್ದೇವೆ. ಆದರೆ ಆಹಾರದ ಕೊರತೆಯನ್ನು ಹೋಗಲಾಡಿಸಲು ಮುಖ್ಯಸಾಧನೆಗಳಾದ ವ್ಯವಸಾಯ ಮತ್ತು ನೀರಾವರಿಗೆ ಆಗಬೇಕಾಗತಕ್ಕಂಥ ಸೌಲಭ್ಯಗಳನ್ನು ಒದಗಿಸುವ ವಿಷಯದಲ್ಲಿ ನಾವು ಸ್ವಲ್ಪ ಗಮನ ಕೊಟ್ಟು ವೀಕ್ಷಿಸಿದರೆ ರೈತನಿಗೆ ಒದಗ ಬೇಕಾಗಿರತಕ್ಕ ಪ್ರತಿಯೊಂದು ಸೌಲಭ್ಯಗಳೂ ಸಕಾಲಕ್ಕೆ ಒದಗುತ್ತಾ ಇಲ್ಲ. ಉದಾಹರಣೆಗೆ ಹೇಳುವುದಾದರೆ ರೈತನಿಗೆ ವ್ಯವಸಾಯದ ಪ್ರಾರಂಭದಲ್ಲೇ ಸುಧಾರಿತ ವ್ಯವಸಾಯೋಪಕರಣಗಳು ಬೇಕು. ಅದು ಅವನಿಗೆ ಸಕಾಲಕ್ಕೆ ಒದಗುತ್ತಾ ಇಲ್ಲ. ಮತ್ತು ಬಿತ್ತನೆ ಬೀಜಗಳು ಒದಗುತ್ತಾ ಇಲ್ಲ. ಹಿಂದೆ ಬಿತ್ತನೆ ಬೀಜಕ್ಕೆ ನಮ್ಮ ರೈತರು ಬಹಳ ಪಾವಿತ್ರತೆಯನ್ನು ಕೊಡುತ್ತಾ ಇದ್ದರು ಈಗ ಬೆಲೆ ಹೆಚ್ಚಾಗಿರುವುದರಿಂದ ಪ್ರತಿಯೊಬ್ಬನೂ ಬೀಜಕೂ ಕೂಡ ಕಾಳು ಇಲ್ಲದಂತೆ ತಮ್ಮಲ್ಲಿರತಕ್ಕ ಬೀಜಗಳನ್ನೆಲ್ಲಾ ಮಾರಿಕೊಂಡು ಬಿತ್ತನೆ ಕಾಲದಲ್ಲಿ ಸಾಲಸೋಲಗಳಿಗಾಗಿ ಪರದಾಡುತ್ತಾ ಇರುವು ದನ್ನು ಹಳ್ಳಿಗಾಡಿದಲ್ಲ ನಾವು ನೋಡುತ್ತಾ ಇದ್ದೇವೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರದಲ್ಲೂ ಕೂಡ ಸೀಡ್‌ಫಾರಂ ಕೇಂದ್ರಗಳನ್ನು ಸರ್ಕಾರದವರು ತೆರೆದು ಬೀಜದ ಕೊರತೆಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಕೂಡ ಒಂದು ಸಾಯಿಲ್ ಕನ್‌ಸರ್ವೇಷನ್ ಕೇಂದ್ರ ಹಾಗೂ ವ್ಯವಸಾಯದ ಶಿಕ್ಷಣ ಶಾಲೆಯನ್ನು ಪ್ರಾರಂಭಿಸಿ ರೈತರ ಮಕ್ಕಳು ವ್ಯವಸಾಯದಲ್ಲಿ ಒಳ್ಳೆಯ ಪರಿಪೂರ್ಣತೆಯಿಂದ ಕೂಡಿದ ವಿದ್ಯೆಯನ್ನು ಕಲಿಯುವುದಕ್ಕೆ ಅನುಕೂಲ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿ ದರೆ ಅಂತಹ ವಿದ್ಯೆಯನ್ನು ಗಳಿಸಿದ ರೈತರು ಹಳ್ಳಿಗಾಡಿನಲ್ಲಿ ನೆಲೆಸಿ ಶಾಸ್ತ್ರೀಯವಾಗಿ ವ್ಯವಸಾಯ ವನ್ನು ಮಾಡಿದ ಪಕ್ಷದಲ್ಲಿ ಈ ಆಹಾರದ ಕೊರತೆಯನ್ನು ಹೋಗಲಾಡಿಸುವುದಕ್ಕೆ ಸ್ವಲ್ಪವಾದರೂ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ. ಬೆಳೆ ಅಥವ ಫಸಲು ಕಟಾವು ಆಗುವುದಕ್ಕೆ ಒಂದು ತಿಂಗಳು ಅಥವಾ ಎರಡು ತಿಂಗಳು ಒಳಗಾಗಿ ಅನೇಕ ಕೆರೆಗಳಲ್ಲಿ ನೀರು ಪೂರೈಸಿ ಹೋಗು ತ್ತದೆ. ಎಂದರೆ ಅದರ ಅಚ್ಚುಕಟ್ಟಿನಲ್ಲಿರತಕ್ಕ ಬೆಳೆಗೆ ನೀರು ಸಾಕಾಗುವುದಿಲ್ಲ. ಅಂತಹ ಕೆರೆಗಳಲ್ಲಿ ಪ್ರತಿ ಮೂರು ವರ್ಷಕ್ಕೆ ಒಂದು ಸಾರಿ ಹೂಳು ತೆಗೆಸಿ ಹಾಕುವುದಕ್ಕೆ ಪ್ರಾರಂಭ ಮಾಡಬೇಕು ಮತ್ತು ಬಾವಿಗಳನ್ನು ಆಳಪಡಿಸುವುದಕ್ಕೆ ಸರ್ಕಾರದವರು ಸಕಾಲದಲ್ಲಿ ರೈತರಿಗೆ ಹಣವನ್ನು ಒದಗಿಸಬೇಕು. ಹಾಗೆ ಮಾಡಿದರೆ ರೈತರು ಮುಂಜಾಗರೂಕತೆಯಿಂದ ಕೆಲಸ ಮಾಡಿ ಆಹಾರದ ವಿಷಯದಲ್ಲಿ ಶ್ರಮ ವಹಿಸಿ ದುಡಿಯುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅದು ಬಿಟ್ಟು ಕೇವಲ ಮಾರ್ಚಿ ತಿಂಗಳ ಪ್ರಾರಂಭದಲ್ಲಿ ಹಣವನ್ನು ಒದಗಿಸಿ ಆ ತಿಂಗಳೊಳಗಾಗಿ ಆ ದುಡ್ಡನ್ನು ಖರ್ಚು ಮಾಡ ಬೇಕೆಂದು ಅಧಿಕಾರಿಗಳಿಗೆ ಆದೇಶ ಕೊಟ್ಟರೆ ಅದನ್ನು ರೈತರು ಎಷ್ಟರಮಟ್ಟಿಗೆ ಉಪಯೋಗಿಸಿ ಕೊಂಡು ಅವರ ವ್ಯವಸಾಯದ ಸೌಲಭ್ಯಗಳನ್ನು ಪೂರೈಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂಬು ದನ್ನು ತಾವು ಗಮನಿಸಬೇಕಾಗುತ್ತದೆ. ಒಂದು ಬಾವಿಯನ್ನು ಒಂದು ತಿಂಗಳಿನಲ್ಲಿ ಪೂರೈಸಬೇಕು ಎಂದು ನಿರೀಕ್ಷೆ ಮಾಡಿದರೆ ಹಾಗೆ ನಿರೀಕ್ಷಿಸಿದ ಕಾಮಗಾರಿ ಆರು ತಿಂಗಳಾದರೂ ಆಗಬಹುದು.

(ಶ್ರೀ ಆರ್. ಕೆಂಚಪ್ಪ)

ಆದ್ದರಿಂದ ಸರ್ಕಾರದವರು ಸಕಾಲದಲ್ಲಿ ಬಾವಿಗಳಿಗೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದೆಂದು ನನ್ನ ಸಲಹೆ. ಅನೇಕ ಜನ ಬಡ ರೈತರು ಐ. ಪಿ ಸೆಟ್ಸ್‌ಗೆ ದರಖಾಸ್ತು ಕೊಟ್ಟಿರುತ್ತಾರೆ. ನನ್ನ ಕ್ಷೇತ್ರದಲ್ಲಿ ಆ ರೀತಿ ದರಖಾಸ್ತು ಕೊಟ್ಟು 2-3 ವರ್ಷಗಳಾಗಿದ್ದರೂ ಕೂಡ ಇಲ್ಲಿಯವರೆಗೂ ಐ. ಪಿ. ಸೆಟ್ಸನ್ನು ಕೊಡದೆ ಅವರಿಗೆ ವ್ಯವಸಾಯ ಮಾಡಲು ಕೈಕಟ್ಟಿದಂತಾಗಿದೆ. ಅನೇಕರಿಗೆ ಒಂದೆರಡು ಕಂಬಗಳನ್ನು ಹಾಕಿಸಿಕೊಂಡು ವಿದ್ಯುಚ್ಛಕ್ತಿ ಒದಗಿಸಿಕೊಳ್ಳುವ ಸಾಧ್ಯತೆಗಳಿದ್ದರೂ ಕಾಲವಾಗಿ ಐ. ಪಿ. ಸೆಟ್ಸ್ ಒದಗಿಸಿಲ್ಲ. ಆದ್ದರಿಂದ ಪಂಪ್‌ಸೆಟ್‌ಗಳ ವಿಲೇವಾರಿಯಲ್ಲಿ ಸೂಕ್ತ ಗಮನ ಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ಸ್ವಾಮಿ ನಮ್ಮ ಜಿಲ್ಲೆಯಲ್ಲಿ ನಮ್ಮ ಕ್ಷೇತ್ರ ಆಂಧ್ರಪ್ರದೇಶದ ರಾಯಲ್‌ಸೀಮೆಯಿಂದ ಸುತ್ತುವರಿಯಲ್ಪಟ್ಟ ಪ್ರದೇಶವಾಗಿದೆ. ಆಂಧ್ರದಲ್ಲಿ ರಾಯಲ್‌ಸೀಮೆ ಎಂದರೆ ವಿಶೇಷ ಕ್ಷಾಮ ಪ್ರದೇಶ ಎಂದು ಸರ್ಕಾರದ ಒಂದು ರೆಕಾರ್ಡ್ ಇದೆ. ಆದ್ದರಿಂದ ಅಂತಹ ಪ್ರದೇಶಕ್ಕೆ ಸೇರಿದ ನಮ್ಮ ತಾಲ್ಲೂಕು ವಿಶೇಷ ಕ್ಷಾಮಕ್ಕೆ ಈಡಾಗಿರತಕ್ಕ ಪ್ರದೇಶ. ಅಲ್ಲಿ ಬಾವಿಗಳಿಗೆ ಬಹಳ ಪ್ರಾಮುಖ್ಯತೆ ಇದೆ. ನಾವು ಮಳೆಯನ್ನು ನೆಚ್ಚಿಕೊಂಡು ನೀರಾವರಿ ವ್ಯವಸಾಯ ಮಾಡತಕ್ಕ ಜನರಲ್ಲ. ಅರ್ಧ ಭಾಗ ನೀರಾವರಿ ವ್ಯವಸಾಯ ಬಾವಿಗಳ ಆಶ್ರಯದಿಂದಲೇ ಅವಲಂಬಿಸಿರುತ್ತೇವೆ. ಅಂತಹ ಪ್ರದೇಶಕ್ಕೆ ಹಣವನ್ನು ಒದಗಿಸುವಾಗ ಹಣದ ಮಿತಿಯನ್ನು ಹಾಕಬಾರದು. ಹೆಚ್ಚು ಹಣವನ್ನು ಒದಗಿಸಬೇಕೆಂದು ನನ್ನ ಮನವಿ. ಆಂಧ್ರದ ಧರ್ಮವರಂ ತಾಲ್ಲೂಕಿನಲ್ಲಿ ಪೇರೂರು ಪ್ರಾಜೆಕ್ಟನ್ನು ಕಟ್ಟಿದ್ದರಿಂದ ನಮ್ಮ ತಾಲ್ಲೂಕಿನಲ್ಲಿ 300 ಎಕರೆಗೆ ಮೇಲ್ಪಟ್ಟು ಜಮೀನು ಸಬ್‌ಮರ್ಜ್ ಆಗಿದೆ 7—8 ವರ್ಷ ಆಗಿದ್ದರೂ ಕೂಡ ಇವತ್ತಿನವರೆಗೂ ಆ ಜನರಿಗೆ ಕಾಂಪನ್‌ಸೇಷನ್ ಕೊಟ್ಟಿಲ್ಲ. ಮತ್ತು ಅವರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಲ್ಲ. ನಮ್ಮ ತಾಲ್ಲೂಕಿನಲ್ಲಿ ವಡ್ಡರೇವು ಎಂಬ ಹಳ್ಳಿಯಿದೆ. ಮಳೆಗಾಲದಲ್ಲಿ ಅಲ್ಲಿ ಅದರ ಸುತ್ತ ನೀರು ಆವರಿಸಿಕೊಂಡಿರುತ್ತದೆ ಅಲ್ಲಿಗೆ ಯಾರೇ ಆಗಲಿ ಹೋಗುವುದೇ ಕಷ್ಟ. ಅಂತಹ ಕಡೆ ಲಿಫ್ಟ್ ಇರಿಗೇಷನ್ ಸ್ಕೀಂ ತಯಾರುಮಾಡಿ, ಕಾಮಗಾರಿಗಳನ್ನು ಮಾಡುವುದು ಸೂಕ್ತ ಎಂದು ನನ್ನ ಮನವಿ. ಮತ್ತು ಪೆನ್ನಾರ್ ನದಿಗೆ ನಾಗಲಮಡಿಕೆ ಹತ್ತಿರ ಒಂದು ಅಣೆ ಕಟ್ಟಬೇಕೆಂದು ಒಂದು ಸ್ಕೀಂ ಇತ್ತು. ಇದು ಯಾವ ಹಂತದಲ್ಲಿದೆ ಎನ್ನುವುದೂ ತಿಳಿಯದು. ಅದನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಆ ಅಣೆಯನ್ನು ನಿರ್ಮಾಣ ಮಾಡಿದರೆ 4000 ಎಕರೆಗೆ ಮೇಲ್ಪಟ್ಟು ಹೊಸ ಅಚ್ಚುಕಟ್ಟು ಪ್ರದೇಶ ಬರುತ್ತದೆ. ನಮ್ಮ ತಾಲ್ಲೂಕಿನಲ್ಲಿ ಶೇಕಡ 8ರಷ್ಟು ನೀರಾವರಿ ಜಮೀನಿರುತ್ತೆ. ಆದುದರಿಂದ ಅದನ್ನು ಕಟ್ಟಿದ್ದೇ ಆದರೆ ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಆದರಿಂದ ಆದಷ್ಟು ಜಾಗ್ರತೆ ಆ ಅಣೆಯನ್ನು ನಿರ್ಮಾಣ ಮಾಡಬೇಕೆಂದು ನನ್ನ ಮನವಿ.

ಆಸ್ಪತ್ರೆಗಳ ವಿಷಯದಲ್ಲಿ ಒಂದು ಮಾತು ಹೇಳಬಯಸುತ್ತೇನೆ. ನಮ್ಮ ತಾಲ್ಲೂಕಿನ ಕೋಟೆಗುಡ್ಡ ಎಂಬ ಹಳ್ಳಿಯಲ್ಲಿ ಒಂದು ಪ್ರೈಮರಿ ಹೆಲ್ತ್ ಯೂನಿಟ್ ಇದೆ. ಅದನ್ನು ಕೊಟ್ಟು 5—6 ವರ್ಷ ಆಯಿತು. ಇಲ್ಲಿಯವರೆಗೂ ಅದಕ್ಕೆ ಕೊಡಬೇಕಾದರೆ ಫರ್ನೀಚರ್ ಕೊಟ್ಟಿಲ್ಲ ಮತ್ತು ಸರ್ಜಿಕಲ್ ಇನ್‌ಸ್ಟ್ರುಮೆಂಟ್ಸ್ ಕೊಟ್ಟಿಲ್ಲ. Unicef Aid ಕೊಟ್ಟಿಲ್ಲ, ಮತ್ತು ಜೀಪ್ ಸಹ ಕೊಟ್ಟಿಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ಅಲ್ಲಿಗೆ ಬರತಕ್ಕ ಡಾಕ್ಟರು ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಾ ಇದ್ದಾರೆ ಎಂದು ಕೇಳುತ್ತಾ ಇದ್ದೇವೆ. ಇಂತಹ ವಿಷಯಗಳಲ್ಲಿ ಸರ್ಕಾರದವರು ಆದಷ್ಟು ಜಾಗ್ರತೆ ಗಮನ ಕೊಟ್ಟು ಆ ಹೆಲ್ತ್ ಯೂನಿಟ್‌ಗೆ ಒದಗಿಸಬೇಕಾದ ಸೌಲಭ್ಯವನ್ನು ಕೂಡಲೆ ಒದಗಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸಭಾಧ್ಯಕ್ಷರೇ, ನಮ್ಮ ಮುಂದಿರುವ ಆಯವ್ಯಯ ಪಟ್ಟಿಯನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈ ಆಯವ್ಯಯ ಪಟ್ಟಿಯನ್ನು ನೋಡಿದರೆ ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು ಎಂಬ ಗಾದೆ ಜ್ಞಾಪಕಕ್ಕೆ ಬರುತ್ತದೆ. ಯಾವ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ಒದಗಿಸಬೇಕು, ಯಾವುದು ಅನಿವಾರ್ಯವಾಗಿ ಆಗಬೇಕಾದ ಕೆಲಸ ಎಂಬುದನ್ನು ಸರಿಯಾಗಿ ವಿಚಾರಮಾಡದೆ ಹಣವನ್ನು ತಮಗೆ ತೋರಿದಂತೆ ಒದಗಿಸಿದ್ದಾರೆ. ಈ ದಿನ ಅರ್ಧ ದೇಶದಲ್ಲಿ ಬರಗಾಲ ಪರಿಸ್ಥಿತಿ ಇದೆ ಎಂಬುದನ್ನು ಸರಕಾರವೇ ಒಪ್ಪಿದೆ. ನಮ್ಮಲ್ಲಿ ಉದ್ಯೋಗ ಮತ್ತು ಆಹಾರದ ಪ್ರಶ್ನೆ ದೊಡ್ಡ ಪೆಡಂಭೂತವಾಗಿದೆ, ಈಗ ಸರಕಾರ ಕೊಡುವ ಆಹಾರ ಒಬ್ಬ ಮನುಷ್ಯನಿಗೆ ಒಂದು ವಾರಕ್ಕೆ ಒಂದು ಕೆ. ಜಿ ಕೂಡ ಇಲ್ಲ, ಬೆಂಗಳೂರು ಮತ್ತು ಹೊಡ್ಡ ದೊಡ್ಡ ಕೈಗಾರಿಕಾ ಪಟ್ಟಣಗಳಲ್ಲಿ ಸ್ವಲ್ಪ ಹೆಚ್ಚು ಆಹಾರ ಎಂದರೆ 5-6 ಕೆ.ಜಿ. ಕೊಡುತ್ತಿದ್ದಾರೆ. ಆದರೆ ಹೆಚ್ಚು ಕಾರ್ಮಿಕರಿರುವ ಕಡೆಗಳಿಗೆ ಭಯದಿಂದ ಹೆಚ್ಚು ಕೊಡುತ್ತಿರುವರೇ

ಹೊರತು ಉಳಿದ ಕಡೆಗಳಿಗೆ ಕೊಡುತ್ತಿಲ್ಲ. ಕೋಲಾರದಲ್ಲಿ ಬೀಡಿ ಕಾರ್ಖಾನೆಯಿದ್ದು ಸುಮಾರು ಐದು ಸಾವಿರ ಜನ ಕಾರ್ಮಿಕರಿದ್ದರೂ ಕೂಡ ವಾರಕ್ಕೆ ಒಂದು ಕೆ. ಜಿ. ಕೂಡ ಒಬ್ಬನಿಗೆ ಅಲ್ಲಿ ಕೊಡುತ್ತಿಲ್ಲ. ಕ್ಷಾಮ ಪರಿಹಾರಕ್ಕೆ ಕೇವಲ 44 ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ಸಣ್ಣ ನೀರಾವರಿ ಯೋಜನೆಗಳಿಗೆ ಕೊಟ್ಟಿರುವ ಹಣವನ್ನು ಇದಕ್ಕೆ ಖರ್ಚು ಮಾಡಬಹುದೆಂದು ಹಣಕಾಸಿನ ಸಚಿವರು ಹೇಳಬಹುದು. ಆದರೆ ಅದಕ್ಕೆ ಒದಗಿಸಿರುವ ಹಣ ಕೂಡ ಹೆಚ್ಚಿಲ್ಲ. ನಮ್ಮ ಜಿಲ್ಲೆಯಲ್ಲಿ ಇಂದು ಎಲ್ಲಾ ತಾಲ್ಲೂಕುಗಳಲ್ಲೂ ಕುಡಿಯುವ ನೀರಿಗೆ ತೊಂದರೆಯಿದೆ. ಕೆಲವು ಪ್ರದೇಶ ಬಿಟ್ಟರೆ ಇಡೀ ಜಿಲ್ಲೆಯಲ್ಲಿ ವ್ಯವಸಾಯದ ಕೂಲಿ ಮಾಡುವವರಿಗೆ ಕೂಲಿ ಸಿಗದೆ ಅವರು ಊರು ಬಿಟ್ಟು ಬೇರೆ ಕಡೆಗೆ ವಲಸೆಹೋಗುತ್ತಿದ್ದಾರೆ. ಇಂಥ ಪರಿಸ್ಥಿತಿ ಇದೆ. ಹಣಕಾಸಿನ ಸಚಿವರು ಮತ್ತು ಪಿ. ಡಬ್ಲ್ಯು. ಡಿ. ಸಚಿವರು ನಮ್ಮ ಕಡೆ ಪ್ರವಾಸ ಬರಲು ಎರಡು ಸಲ ಪ್ರೋಗ್ರಾಂ ಹಾಕಿದ್ದರು, ಆದರೆ ಬರಲಿಲ್ಲ. ಏಕೆ ಇಷ್ಟು ಉದಾಸೀನದಿಂದ ಈ ಜಿಲ್ಲೆ ಬಗ್ಗೆ ಅವರು ವರ್ತಿಸುತ್ತಿದ್ದಾರೋ ನನಗಂತೂ ಗೊತ್ತಾಗುವುದಿಲ್ಲ. ನಮ್ಮ ಜಿಲ್ಲೆಯವರೇ ಇಬ್ಬರು ಮಂತ್ರಿಗಳಿದ್ದಾರೆ, ಒಬ್ಬರು ರೆವೆನ್ಯೂ ಮಂತ್ರಿಗಳು, ಅವರನ್ನು ನೋಡುವುದೇ ಕಷ್ಟ, ಆಫೀಸಿನಲ್ಲಾಗಲಿ ಮನೆಯಲ್ಲಾಗಲಿ ಸಿಕ್ಕುವುದೇ ಕಷ್ಟ. ಇನ್ನೊಬ್ಬರು ಹೊರ ದೇಶಕ್ಕೆ ಹೋಗಿದ್ದಾರೆ. ಈಗಲಾದರೂ ಹಣಕಾಸು ಮತ್ತು ಲೋಕೋಪಯೋಗಿ ಇಲಾಖೆ ಸಚಿವರು ನಮ್ಮ ಜಿಲ್ಲೆಗೆ ಬಂದು ಅಲ್ಲಿನ ಪರಿಸ್ಥಿತಿ ನೋಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಆಹಾರ ಮತ್ತು ಉದ್ಯೋಗ ಜನರಿಗೆ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಈ ದಿವಸ ಹಣಕಾಸಿನ ಪರಿಸ್ಥಿತಿಯ ತೀವ್ರತೆಗೆ ಮುಖ್ಯ ಕಾರಣ ಕೋಟ್ಯಾಂತರ ರೂಪಾಯಿಗಳ ಹಣ ಕೈಗಾರಿಕೆಗಳಿಗೆ ಹಾಕಿದ್ದರೂ ಅದರಿಂದ ಹೆಚ್ಚು ಲಾಭ ದೊರೆಯದಿರುವುದು. ರಾಷ್ಟ್ರೀಕರಣ ನೀತಿಯನ್ನು ಈ ದಿವಸ ಬಹು ಜನರು ಒಪ್ಪಿದರೂ ನಿಜವಾಗಿಯೂ ಅವನ್ನು ಯಶಸ್ವಿಯಾಗಿ ಮಾಡಬೇಕೆಂಬ ಆಸಕ್ತಿ ಸರಕಾರಕ್ಕಿರುವಂತೆ ಕಾಣುವುದಿಲ್ಲ. ಸಣ್ಣ ಸಣ್ಣ ಉದ್ಯಮಗಳಲ್ಲಿ ಹೆಚ್ಚು ಲಾಭ ಬರುತ್ತಿದ್ದರೂ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಅಥವಾ ಬೇರೆ ದೊಡ್ಡ ಉದ್ಯಮಗಳಲ್ಲಿ ಗಣನೀಯವಾದ ಲಾಭ ಬರುತ್ತಿಲ್ಲ. ಆದ್ದರಿಂದ ರಾಷ್ಟ್ರೀಕರಣದ ಉದ್ದೇಶವನ್ನು ಕಡೆಗಾಣಿಸಿದಂತೆ ತೋರುತ್ತದೆ. ಜನರಲ್ಲಿ ಪ್ರೀತಿ ನಂಬಿಕೆ ಕಳೆದುಕೊಂಡು ಸಮಾಜವಾದಕ್ಕೆ ಕೊಡಲಿ ಪೆಟ್ಟು ಹಾಕುತ್ತಿದ್ದಾರೆ. ರಾಷ್ಟ್ರೀಕರಣ ಮಾಡುವಾಗ ಈಗ ಮಾಡಿರುವ ಕಡೆ ಅದರಿಂದ ಜನರಿಗೆ ಹೆಚ್ಚು ಸಹಾಯವಾಗಿಲ್ಲ ಎಂಬುದನ್ನು ನೋಡಿ ಕೆಲಸಮಾಡಬೇಕು. ಕೈಗಾರಿಕೆಗಳಲ್ಲಿ ಹೆಚ್ಚು ಬಂಡವಾಳ ಹಾಕಿದ್ದರೂ ಅವು ನಷ್ಟದಲ್ಲಿ ಕೆಲಸಮಾಡುತ್ತಿವೆ. ಆದುದರಿಂದ ಅತ್ಯಲ್ಪ ಲಾಭ ಸಂಪಾದನೆ ಮಾಡುತ್ತಿರುವುದಕ್ಕೆ ಕಾರಣವನ್ನು ಕಂಡುಹಿಡಿಯಲು ಅದಕ್ಕಾಗಿ ಒಂದು ಈ ಸಭೆಯ ಸದಸ್ಯರಿಂದ ಕೂಡಿದ ಸಮಿತಿಯನ್ನು ರಚಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಭೂಕಂದಾಯದ ಬಗ್ಗೆ ಹಿಂದೆ ಸರ್ವೆಸೆಟ್ಲ್‌ಮೆಂಟ್ ರಿವಿಷನ್ ವಿಚಾರ ಈ ಸಭೆಯ ಮುಂದೆ ಕಂದಾಯ ಹೆಚ್ಚಿಸಬಾರದೆಂದು ಬಹಳ ಒತ್ತಾಯಮಾಡಿದಾಗ, 5-10 ಎಕರೆಗಳಿರುವ ಸಣ್ಣ ಹಿಡುವಳಿದಾರರಿಗೆ ವಿನಾಯಿತಿ ಕೊಡಬೇಕೆಂದು ಪ್ರಾರ್ಥನೆಮಾಡಿದಾಗ ಮುಖ್ಯ ಮಂತ್ರಿಗಳು ಮನುಷ್ಯನ ಆದಾಯವನ್ನು ಗಣನೆಗೆ ತೆಗೆದುಕೊಳ್ಳದೆ ಬಡವರಿಗೆ ಮತ್ತು ಬಲ್ಲಿದವರಿಗೆ ಒಂದೇ ರೀತಿಯ ತೆರಿಗೆ ಹಾಕುವುದು ಸರಿಯಲ್ಲ, ವಿಚಾರಮಾಡುತ್ತೇವೆ ಎಂದು ಹೇಳಿದರು. ಮೊನ್ನೆ ಕೂಡ ಸರ್‌ಛಾರ್ಜ್ ಹಾಕುವಾಗ 5-10 ಎಕರೆ ಇರುವವರು ಮತ್ತು ವರ್ಷಕ್ಕೆ 500-600 ರೂಪಾಯಿಗಳ ಆದಾಯ ಇರುವವರನ್ನು ಕೂಡ ಬಿಡದೆ ಎಲ್ಲರಿಗೂ ಒಂದೇ ಸಮನಾಗಿ ತೆರಿಗೆ ವಿಧಿಸಲಾಗಿದೆ ಎಂದು ಹೇಳಿದಾಗ ಮಾನ್ಯ ಹಣಕಾಸಿನ ಸಚಿವರು ಭರವಸೆ ಕೊಟ್ಟಿರುವಂತೆ ಪರಿಶೀಲಿಸಿ ಭೂಕಂದಾಯ ರದ್ದು ಮಾಡಿ ಬೇರೆ ರೀತಿಯ ಒಂದು ತೆರಿಗೆಯನ್ನು ವಿಧಿಸುವುದಕ್ಕೆ ಪ್ರಯತ್ನಮಾಡಬೇಕು. ಇದನ್ನು ಮರೆಯದೆ ಅವರು ಹೇಳಿರುವಹಾಗೆ ಕಾರ್ಯಗತಮಾಡಬೇಕು.

ಮೂರೂವರೆ ಕೋಟಿ ರೂಪಾಯಿಗಳನ್ನು ಹರಿಜನರು ಮತ್ತು ಗಿರಿಜನರ ಮನೆಗಳನ್ನು ಕಟ್ಟುವುದಕ್ಕೆ ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್ನಿನಿಂದ ಪಡೆದಿರುವುದು ಸಂತೋಷವಾದ ವಿಷಯ. ಅದನ್ನು ಸೊಸೈಟಿ ಮೂಲಕ ಹಂಚಲು ಯೋಚನೆ ಮಾಡಿರಬೇಕು. ಆದರೆ ಸೊಸೈಟಿ ವಿಷಯದಲ್ಲಿ ಅನುಮಾನವಿದೆ. ಅದರಿಂದ ನ್ಯಾಯ ದೊರೆಯುವುದಿಲ್ಲ ಎಂಬ ಸಂದೇಹವಿದೆ. ಆದುದರಿಂದ ಹಣ ಕೊಡಲು ಹೌಸಿಂಗ್ ಬೋರ್ಡು ಮೂಲಕ ಅಥವ ಬೇರೆ ಯಾವುದಾದರೂ ಏರ್ಪಾಡುಮಾಡಬೇಕು. ಸರಕಾರದವರೇ ಮನೆ ಕಟ್ಟಿಸಿಕೊಡಬೇಕು. ಸೊಸೈಟಿಯ ಮೂಲಕ ಕೊಟ್ಟರೆ ಹಣ ದುರ್ವಿನಿಯೋಗವಾಗಿ ಹರಿಜನರಿಗೆ ಸಹಾಯವಾಗುವುದಿಲ್ಲ. ಆದುದರಿಂದ ಮನೆಗಳನ್ನು ಸರಕಾರವೇ ಕಟ್ಟಿಸಿಕೊಡಬೇಕೆಂದು ಒತ್ತಾಯಮಾಡುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಈ ಆಯವ್ಯಯ ಪಟ್ಟಿ ಹೇಗಿದೆಯೆಂದರೆ "the bridge is in danger, go slowly" ಎಂದು ಬೋರ್ಡು ಹಾಕಿರುವಂತಿದೆ, ಬಹಳ ನಿರಾಶಾದಾಯಕವಾಗಿದೆ. ಆಹಾರದ ಹಂಚಿಕೆ, ತುರ್ತು ಪರಿಸ್ಥಿತಿ, ತೆರಿಗೆ ಮುಂತಾದುವುಗಳ ವಿಷಯದಲ್ಲಿ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರುತ್ತೇನೆ. ಯಾರು ನ್ಯಾಯವಾಗಿ ಮಾತನಾಡುತ್ತಾರೋ ಅವರನ್ನು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಅನುಸರಿಸಿ ಜೈಲಿಗೆ ಕಳಿಸಿ ಚುನಾವಣೆಯಲ್ಲಿ ತಾವು ಗೆಲ್ಲಬೇಕೆಂದು ಮಾಡುತ್ತಿರುವ ಕೆಲಸ ದೇಶದ್ರೋಹದ ಕೆಲಸವಾಗಿದೆ. ಇದರಿಂದ ಜನರು ದಂಗೆ ಏಳಬಹುದು. ಈಗ ದೂರ ಪ್ರಾಂತಗಳಲ್ಲಿ ನೋಡುತ್ತಿದ್ದೀರಿ, ಇದರಿಂದೇನು ಪರಿಣಾಮವಾಗುತ್ತಿದೆ ಎಂಬುದು ತಮಗೆ ಗೊತ್ತಿದೆ, ಇದೊಂದು ರೀತಿಯ ಅಂಟು ಜಾಡ್ಯ. ನಾಳೆಯ ದಿವಸ ಚುನಾವಣೆಗೆ ತೊಂದರೆಯಾಗಬಹುದೆಂದು ಜನರನ್ನು ಬಂಧನದಲ್ಲಿಡುತ್ತಿರುವುದು ಸರಿಯಲ್ಲ. ಶಿವಮೊಗ್ಗದಲ್ಲಿ 19 ಲಾರಿ ಅಕ್ಕಿಯನ್ನು ಕದ್ದು ಮಾರಿದವರನ್ನು ಬಿಟ್ಟು ತಪ್ಪಿತಸ್ತರಲ್ಲದವರನ್ನು ಜೈಲಿಗೆ ಹಾಕಿರುವುದಕ್ಕೆ ಕಾರಣವೇನು?

4-30 P.M.

ನಿಜವಾಗಿಯೂ ಸರಕಾರದವರು ಇದರ ಬಗ್ಗೆ ಮನಸ್ಸಿನ ಮೇಲೆ ಪರಿಣಾಮ ಮಾಡಿಕೊಂಡು ವಿಚಾರಣೆ ಮಾಡಬೇಕು ಎಂದು ನಮ್ರತೆಯಿಂದ ಹೇಳುತ್ತೇನೆ. ಅನೇಕ ಕೆಲಸ ಕಾರ್ಯಗಳಿಗೆ ಒದಗಿಸಿರ ತಕ್ಕ ಹಣ ಜನರ ಕಣ್ಣಿಗೆ ಮಣ್ಣೆರಚುವ ರೀತಿಯಲ್ಲಿ ಖರ್ಚು ಮಾಡಲಾಗುತ್ತಿವೆ. ಅಪ್ಪರ್ ಕೃಷ್ಣಾ ಯೋಜನೆಯ ಸ್ಥಳವನ್ನು ಆಲಮಟ್ಟಿಯಿಂದ ನಾರಾಯಣಪುರ, ನಾರಾಯಣಪುರದಿಂದ ಇನ್ನೊಂದು ಕಡೆಗೆ ಹೀಗೆ ಯೋಜನೆ ಬದಲಾವಣೆ ಮಾಡಲಾಗುತ್ತಿದೆ. ಒಂದು ಕಡೆ ಯೋಜನೆ ಮಾಡಲ್ಪಡುವುದು ಎಂದು ಹೇಳಿದ ಕೂಡಲೆ ಅಲ್ಲಿ ನಾಲ್ಕೈದು ಮನೆಗಳನ್ನು ಕಟ್ಟುವುದು ರಸ್ತೆ ಮಾಡುವುದು ಎಗ್ಸಿಕ್ಯೂಟಿವ್ ಎಂಜಿನಿಯರ ಸಲುವಾಗಿ ಮನೆ ಕಟ್ಟುವುದಕ್ಕೆ ದುಡ್ಡು ಕೊಡುವುದು ಹೀಗೆ ಹಣ ಖರ್ಚು ಮಾಡಲಾಗುವುದು. ಆದರೆ ದೇಶದ ಅಭಿವೃದ್ಧಿ ಯೋಜನೆಗಳನ್ನು ಈ ರೀತಿ ಪ್ರಾರಂಭ ಮಾಡಿ ಹಣ ಪೋಲಾಗುತ್ತಿದೆ. ಆದುದರಿಂದ ಮೊದಲು ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭ ಮಾಡಿ ಅನಂತರ ಅಧಿಕಾರಿಗಳ ನೇಮಕ ಮಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಯಾಕೆಂದರೆ, ಅಧಿಕಾರಿಗಳಿಗೆ ಸಂಬಳ ಮಾತ್ರ ಕೊಡುತ್ತಿದ್ದೀರಿ. ಯೋಜನೆಯ ದೃಷ್ಟಿಯಿಂದ ಯಾವ ಪ್ರಗತಿ ಸಾಧನೆ ಮಾಡುತ್ತಾ ಇಲ್ಲ. ಪ್ರಾರಂಭದಲ್ಲಿ ನಾಲ್ಕೈದು ಯೋಜನೆಗಳನ್ನು ಮಾತ್ರ ತೆಗೆದುಕೊಂಡು ಅವುಗಳನ್ನು ಕಾರ್ಯಗತ ಮಾಡಿ ದೇಶದ ಹಿತಕ್ಕೋಸ್ಕರ ಹೆಚ್ಚು ಆಹಾರ ಉತ್ಪತ್ತಿ ಮಾಡಿ ನಿಜವಾದ ಪ್ರಗತಿ ಸಾಧನೆ ಮಾಡಬೇಕೆಂದು ಸರಕಾರಕ್ಕೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಶಾಸನ ಸಭೆ ಕರೆಯುವುದು ಮತ್ತು ಸದಸ್ಯರ ಅಭಿಪ್ರಾಯ ತೆಗೆದುಕೊಳ್ಳುವುದು ಇದರ ಉದ್ದೇಶ. ಏನೆಂದರೆ, ಶಾಸನ ಸಭಾ ಸದಸ್ಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಸರಕಾರ ಕಾರ್ಯಗತ ಮಾಡಿಕೊಳ್ಳತಕ್ಕಂಥ ಕೆಲಸ ಕಾರ್ಯಗಳ ಲೋಪದೋಷಗಳನ್ನು ತಮ್ಮ ಗಮನಕ್ಕೆ ಸದಸ್ಯರ ಭಾಷಣದ ಮೂಲಕ ತಂದು ಅದನ್ನು ತಿದ್ದುವುದಕ್ಕೆ ಸರಕಾರ ಪ್ರಯತ್ನ ಮಾಡಬೇಕು ಎಂಬ ಉದ್ದೇಶ ಇದೆ. ಆದರೆ ತಮ್ಮ ಗಮನಕ್ಕೆ ನಾಲ್ಕಾರು ಸಾರಿ ಹತ್ತಾರು ಸಾರಿ ತಂದಿದ್ದರೂ ಕೂಡ ಹಾಗೂ ಮಂತ್ರಿಗಳು ಸಂಚಾರ ಮಾಡಿ ಅದನ್ನು ಪರಿಶೀಲನೆ ಮಾಡಿದ್ದರೂ ಕೂಡ ಅಂಥ ಕೆಲಸಕಾರ್ಯಗಳು ಕಾರ್ಯಗತವಾಗದೇ ಇರುವುದು ನೋಡಿದರೆ ದೇಶದಲ್ಲಿ ಸರಕಾರ ಇದೆಯೋ ಇಲ್ಲವೇ ಎಂದು ಅನ್ನಿಸುತ್ತದೆ. ಇನ್ನು ಶೀಘ್ರವಾಗಿ ಎಂಟು ಹತ್ತು ತಿಂಗಳುಗಳಲ್ಲಿ ಬರಲಿರುವ ಮಹಾ ಚುನಾವಣೆಯಲ್ಲಿ ಜನತೆ ಇದನ್ನು ಸಾವಧಾನವಾಗಿ ನಿರ್ಣಯ ಮಾಡುತ್ತಾರೆ ಎಂಬುದನ್ನು ಸಭೆಯ ಮುಖಂಡರು ತಿಳಿದುಕೊಳ್ಳಬೇಕೆಂದು ಅವರನ್ನು ಪ್ರಾರ್ಥಿಸುತ್ತೇನೆ. ವಿರೋಧ ಪಕ್ಷದವರು ರಚನಾತ್ಮಕ ಸಲಹೆ ಕೊಡುವುದಿಲ್ಲ ಎಂದು ನೀವು ಪದೇ ಪದೇ ಹೇಳುತ್ತೀರಿ. ಆದರೆ ನಾವು ಕೊಡತಕ್ಕ ರಚನಾತ್ಮಕ ಸಲಹೆಗಳನ್ನು ಎಷ್ಟು ಕಾರ್ಯಗತ ಮಾಡಿದ್ದೀರಿ? ನಿಮಗೆ ನಿಜವಾಗಿ ರಚನಾತ್ಮಕ ಸಲಹೆ ಬೇಕಾದರೆ ಜನಾಭಿಪ್ರಾಯ ಕೇಳಿ. ನಿಜವಾದ ಜನಾಭಿಪ್ರಾಯ ಕೇಳುವುದಾದರೆ ನೂರಕ್ಕೆ 10 ಪರ್ಸೆಂಟ್ ಸದಸ್ಯರು ಕೈ ಮೇಲೆ ಎತ್ತುತ್ತಾರೆ. ನಿಮ್ಮ ಅಧಿಕಾರ ಪಕ್ಷದ ಸದಸ್ಯರೂ ಕೂಡ ಹೊರಗಡೆ ಅಭಿಪ್ರಾಯ ವ್ಯಕ್ತ ಮಾಡುವಾಗ್ಗೆ ನ್ಯಾಷನಲ್ ಎಕ್ಸ್‌ಟೆನ್‌ಷನ್ ಸ್ಕೀಂ ಬೇಡ ಎಂದು ಹೇಳುತ್ತಾರೆ. ನನ್ನ ಅಭಿಪ್ರಾಯದಲ್ಲಿ ಕೂಡ ಈ ಸ್ಕೀಂ ಬೇಡ ಎಂದು ಇದೆ. ಇದರ ಬಗ್ಗೆ ನಾನು ಒಂದು ರಚನಾತ್ಮಕ ಸೂಕ್ತ ಸಲಹೆ ಮಾಡುತ್ತೇನೆ. ತಾಲ್ಲೂಕಿನಲ್ಲಿಯ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಸಂಬಂಧಪಟ್ಟ ಅಗ್ರಿಕಲ್ಚರಲ್ ಆಫೀಸರ್ ಮತ್ತು ತಹಶೀಲದಾರರಿಗೆ ವಹಿಸಿ ಬಿಟ್ಟುಕೊಡಬೇಕು. ಈ ರೀತಿ ಮಾಡುವುದು ಸರಕಾರದ ಖರ್ಚು ಕಡಮೆಯಾಗುತ್ತದೆ. ಇದಲ್ಲದೆ ಪಾನ ನಿರೋಧ ನಿರ್ವಿವಾದವಾಗಿ ರದ್ದು ಮಾಡುವುದು ಒಳ್ಳೆಯದು. ಇಷ್ಟೇ ಅಲ್ಲದೆ ಸರಕಾರದ ಅನೇಕ ಇಲಾಖೆಗಳಿವೆ. ಅಲ್ಲಿ ಅನೇಕ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಅಲ್ಲಿ ಇರತಕ್ಕ ಅಧಿಕಾರಿಗೆ ಏನು ಕೆಲಸ ಮಾಡಬೇಕು ಎಂಬುದು ಅವನಿಗೇ ಗೊತ್ತಿಲ್ಲ. ಅನೇಕ ಆಫೀಸರುಗಳನ್ನು

ಅಲ್ಲಿ ಹಾಕಿ ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದೀರಿ. ಬರೀ ಎಷ್ಟಾಬ್ಲಿಷ್‌ಮೆಂಟಿಗೆ ಅವರ ಸಂಬಳಕ್ಕೆ ಹಣ ಖರ್ಚಾಗುತ್ತಿದೆ. ನಿಜವಾಗಿಯೂ ಸಾಮಾನ್ಯ ಜನತೆಯ ಅಭಿವೃದ್ಧಿಗಾಗಿ ಹಣ ಖರ್ಚು ಮಾಡುತ್ತಾ ಇಲ್ಲ. ಆದುದರಿಂದ ಅಂಥ ಕಾರ್ಯ ಮಾಡುವುದನ್ನು ರದ್ದು ಮಾಡಬೇಕು ಎಂದು ನಾನು ಹೇಳುತ್ತೇನೆ.

ಈಗ ಸಭೆಯಲ್ಲಿ ಅರಣ್ಯ ಇಲಾಖೆಯ ಮಂತ್ರಿಗಳು ಇದ್ದಾರೆ. ಅವರ ಮುಂದೆ ಅರಣ್ಯ ಇಲಾಖೆಯ ಬಗ್ಗೆ ಮಾತನಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಬೇಕಾದಷ್ಟು ಸ್ಕೀಂ ಮಾಡಿಕೊಂಡಿದ್ದೀರಿ. ಆದರೆ ಅರಣ್ಯದಲ್ಲಿಯ ಮರಗಳನ್ನು ಕಡಿದು ತೆಗೆದುಕೊಂಡು ಹೋಗಿ ಅರಣ್ಯ ಸಂಪತ್ತನ್ನು ಹಾಳು ಮಾಡುತ್ತಿದ್ದಾರೆ. ಒಂದು ವೇಳೆ ಅಂಥವರನ್ನು ಹಿಡಿದು ಕೇಸು ಹಾಕಿದರೆ ಅದನ್ನು ಕಾಂಪೌಂಡ್ ಮಾಡಿ 500 ರೂಪಾಯಿ ತೆಗೆದುಕೊಂಡು ಬಿಟ್ಟು ಬಿಡುತ್ತೀರಿ. ಒಂದು ಸಲ ಅಂಥ ಕೇಸು ಕಾಂಪೌಂಡ್ ಮಾಡಿದ ಮೇಲೆ ಪುನಃ ಮರ ಕಡಿದು ಸಿಕ್ಕಿಕೊಂಡಾಗ ಮತ್ತೆ ಕೇಸು ಕಾಂಪೌಂಡ್ ಮಾಡುವುದು, ಇದರ ಅರ್ಥ ಏನು ? ಇದನ್ನು ದಯವಿಟ್ಟು ಪರಿಶೀಲಿಸಿ ಸರಕಾರಕ್ಕೆ ಬರತಕ್ಕಂಥ ಹಣ ಸರಿಯಾಗಿ ವಸೂಲ್ಮಾಡಿ ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಹೇಳುತ್ತೇನೆ. ಕೇಸು ಹಾಕುವಾಗ್ಗೆ ಸರಿಯಾಗಿ ಆಲೋಚನೆ ಮಾಡಿ ಲೀಗಲ್ ಅಡ್ವೈಜ್ ತೆಗೆದುಕೊಂಡು ಕೇಸು ಹಾಕಬೇಕು. ಬರೀ ನೆಪಕ್ಕೆ ಇಂಥ ಕೇಸು ಹಾಕಿ ಹಾಕಿದರೆ ಅನುಕೂಲವಾಗುವುದಿಲ್ಲ,

ಈಗ ತುರ್ತಾದ ಪರಿಸ್ಥಿತಿ ಇರುವುದರಿಂದ ಹಣಕಾಸಿನ ಸಚಿವರು, ಪಿ. ಡಬ್ಲ್ಯೂ. ಡಿ. ಮಿನಿಷ್ಟರು ಲಾ ಮಿನಿಷ್ಟರು ಅವರು ದೇಶದಲ್ಲಿ ಸಂಚಾರ ಮಾಡಿ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕು. ಕಾನೂನನ್ನು ಸಡಿಲು ಮಾಡಿ ತಕ್ಷಣ ಪಂಪ್‌ಸೆಟ್ಟು ಸಿಕ್ಕುವ ವ್ಯವಸ್ಥೆ ಮಾಡಿ ಇರಿಗೇಷನ್ ಸ್ಕೀಂಗೆ ಲೋನ್ ಸ್ಯಾಂಕ್ಷನ್ ಮಾಡಬೇಕು. ಮಂಗಳೂರು ಜಿಲ್ಲೆಯ ಉಡುಪಿಯಿಂದ ನನಗೆ ಒಬ್ಬರಿಂದ ಕಾಗದ ಬಂದಿದೆ. ಈ ಕಾಗದವನ್ನು ತಮಗೆ ಕಳಿಸಿಕೊಡುತ್ತೇನೆ. ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ವ್ಯವಸ್ಥೆ ಮಾಡುತ್ತೀರಿ ಎಂದು ನಾನು ಭರವಸೆ ಇಟ್ಟುಕೊಂಡಿದ್ದೇನೆ. ಈಗ ಮಾತನಾಡಲು ಹೆಚ್ಚಿಗೆ ಕಾಲಾವಕಾಶವಿಲ್ಲ. ಎಲ್ಲ ಬಡ್ಜೆಟ್ ಡಿಬೇಟಿನಲ್ಲಿ ನನಗೆ ಮಾತನಾಡಲು ಮೊದಲು ಅವಕಾಶ ಕೊಡಲಾಗುತ್ತಿತ್ತು. ಈ ಸಲ ನನಗೆ ಕೊನೆಗೆ ಮಾತನಾಡುವ ಅವಕಾಶ ದೊರೆತಿದೆ. ಈಗ ಅಧ್ಯಕ್ಷರು ಬೆಲ್ ಹೊಡೆದು ಮಾತು ನಿಲ್ಲಿಸುವುದಕ್ಕೆ ಮುಂಚೆ ಭಾಷಣ ಮುಗಿಸಿ ಕುಳಿತುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಕೊನೆಯದಾಗಿ ಒಂದೇ ಒಂದು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ. This is not at all a Government. This is only a private limited Company with unlimited profit for their own Concerns just like our old East India Company.

[MR. DEPUTY SPEAKER in the Chair].

SRI RAMAKRISHNA HEGDE (Minister for Finance).—Mr. Speaker Sir, may I at the outset express my sincere thanks to all those Hon'ble Members who participated in the budget discussion during the last 3 days. I am particularly greatful to those members who complimented me for the budget. As I expected, there have been both bouquets as well as brickbats. There are compliments as well as criticisms. I should also thank those Hon'ble members who criticised my budget speech. It is heartening to note that during the budget discussion this year the level of discussion was a little higher if I may say so. Many Hon'ble members made studied speeches and made very good points in the course of their speeches.

I am particularly thankful to these Members.

Sir, may I before proceeding to deal with the various points of the Hon. Members, assure the House that if at all, there had been any deterioration in the State finances, it has been arrested and I would like

(SRI RAMAKRISHNA HEGDE)

to assure the House also that I am not here to preside over the liquidation of the State finances. I will do my best to see that the finances of the State are not only improved but take a definite turn for the better.

As I have indicated in my speech, we have passed through perhaps the worst phase in the financial difficulties. From the next year, our assources is bound to improve and if we are careful and vigilant sufficiently in regard to expenditure, I am sure and confident that the year following next year, that is, 1967-68, will mark a new phase in the State finances.

Sir, I would like to say a few words regarding certain apprehensions that were expressed by certain Members regarding the finances. Actually, I have made the position absolutely clear in my Budget Speech. I do not believe in concealing any matter, in camaflouging any important matter, particularly in regard to finances, from this august body. After all, this is the body which safeguards the interests of the State and, therefore, I am too anxious to take into confidence the Hon. Members in regard to the state of affairs of the State finances. Therefore, in my Budget Speech, I attempted to give a true and real picture of the state of finances in our State. Many Members appreciated it and some others read altogether different meaning into it. I am sorry for it. If I am frank, then also a fault is found. If I am not frank, naturally fault is found in me. Anyway, I would like, in a few words, to allay the fears of the Hon. Members regarding the sh-called point of bankruptcy of the State finances,

Let us examine for a moment what is the overall position of the State finances. The overall position in regard to assets and liabilities is like this :

		Rs.
The total outstanding liability to the Central Government in the form of complete loans that is payable by the State Government is approximately :	...	276 crores.
Including the Ways and Means advances by the Reserve Bank.		
As against this, the total outstanding amount advanced by the State Government to various bodies is :	...	121 crores.
Arrears including land revenue arrears amount to approximately :	...	18 crores.
Altogether the amount is :	...	139 crores.
Apart from this, the total assets of the State Government in the form of various projects and capital expenditure, amounts to approximately again :	...	519 crores.

I would like to ask the Hon. Members, what do these figures indicate ? Do they indicate any sign of bankruptcy or do they indicate the

soundness of the State finances? It is true that for the last few years, our finances have been deteriorating, and this was due to mainly three factors: Firstly, the unexpected expenditure that the State Government had to incur during the Third Five-Year Plan period in regard to increase in the emoluments of the Government employees, which accounts for nearly Rs. 30 crores; Secondly very heavy non-Plan expenditure that the State Government has been incurring for the last several years; and thirdly, the amount that the State Government had to pay to the Central Government by way of loan instalments, over and above what was originally anticipated. About this, there has been lot of criticism. Originally, when the Third Five-Year Plan was being formu'ated, that was some time in the month of October 1961, the liability of the State Government towards loan repayment over five years of the Third Plan, was roughly estimated at Rs. 25 crores. This rough estimate was based on the total loan instalments paid to the Central Government during the Second Five-Year Plan period: it was 12-13 crores; because the II Five-Year Plan size was Rs. 125 crores and the Third Plan size was exactly double that of the Second Five-Year Plan, that is, Rs. 250 crores, it was presumed that the loan repayment liability also will be roughly twice of what was fixed during the Second Plan. This calculation proved wrong. It is not as if either the State Government or the Central Government committed any mistake. This was found in the very first annual Plan discussion and immediately this was corrected; and of course, at that time also, the figure was fixed at a lower rate, that was about Rs. 42 crores. Ultimately, it come to Rs. 52 crores.

Therefore there has not been any over-payment to the Central Government nor there has been any mistake on the part of anybody. Sir, in regard to non-plan expenditure, I would like to say a few words. In our State, unfortunately, it has been the practice or, may I say, legacy to spend a lot of money on non-plan schemes. It may not be out of place if I for the information of the Hon'ble Members quote here certain figures regarding non-plan expenditure incurred by the Mysore Government as compared with the non-plan expenditure incurred by our neighbouring State Governments. Sir, in Mysore the non-plan expenditure as against plan expenditure, I am giving figures only in respect of two years, *i. e.*, 1964-65 and 1965-66 Budget estimates: the non-plan expenditure was Rs. 61.79 crores as against plan expenditure of Rs. 15·05 crores in 1964-65; in 1965-66 budget estimates, non-plan expenditure was 66·42 crores as against plan expenditure of Rs. 21·10 crores. Now, let the Hon'ble Members see and compare them with the figures of other States: Maharashtra non-plan expenditure was Rs. 62·58 crores as against Rs. 45·56 crores plan expenditure rand Rs. 63·85 crores as against Rs. 55·13 crores plan expenditure for these two corresponding years; Madras, Rs. 45·70 crores as against Rs. 27·35 crores and Rs. 51·97 crores as against Rs. 31·46 crores; Gujarath, Rs. 29·58 crores as against Rs. 21·97 crores, and Rs. 36·58 crores as against Rs. 29·45 crores. Sir, this has been is my humble opinion a very bad practice. We have been spending on non-plan schemes money absolutely out of

(SRI RAMAKRISHNA HEGDE)

proportion. I have decided and I have actually taken certain measures that during the current year itself it will be my determined effort as also in the next year to see that non-plan expenditure is cut down to a minimum so that we can spend a little more money on plan expenditure and our plan side also can be bigger. Before I conclude on this point, I would like to say one more word about the so called indebtedness of the State Government.

Sri C. J. MUCKANNAPPA (Sira).—What is the percentange of cut in the non-plan expenditure ?

Sri RAMAKRISHNA HEGDE.—May I request Hon'ble Members kindly not to interrupt me during the speech. I will conclude as early as possible. If there are any questions I will be only glad to reply. Sir, in regard to loan position many members expressed their concern about the increasing burden of loan on the State Government and this loan pertains to Central Government. Sir, the latest position so far as we are concerned is Rs. 268 crores. That is the total debt position. Sir, I would like to inform the Members that the loan position during 1966 budget estimates in Maharashtra was Rs. 502·64 crores; Madras Rs. 403·07 crores ; Andhra Rs. 338 crores.

Sri S. SIVAPPA (Shravanabalagola).—What is the probable assets in those States ?

Sri RAMAKRISHNA HEGDE.—I have mentioned a little earlier about our assets also. I am soory I do not have the figures of their assets here. I can get the figures from the State Government and supply to the Hon'ble Members. But the assets are not important in this context in this sense that we are now discussing about the loans that the various State Governments have taken from the Central Government. My endeavour is to point out that as compared to our neighbouring States, our loan burden is not as heavy as the loan burden of the neighbouring States.

Then I would like to go to the points raised by certain Members regarding the award of Finance Commission. Sir, I, in my speech, explained the salient features of the award of the Finance Commission and I have also said that we should be grateful to the Finance Commission that they have given us a very fair deal. Sir, criticisms were made that the State Government did not present its case properly and effectively. Sir, I would like to very categorically refute this allegation. Sir, if the Hon'ble Members care to study the awards of the Finance Commission relating to various States, they will be convinced that Mysore has received a very fair deal this time and if they also care to study the Memorandum submitted by the Mysore State Government to the Finance Commission, I am sure they will also be convinced that the State Government has done its best to present a very convincing case to the Finance Commission and the result has been as I said very good. Sir, it was pointed out by Sri Gowda and Sri Suryanarayana Rao that if

the Panchyathiraj Bill had been passed in the Legislature, the Finance Commission would have included that commitment also in the award and that is correct.

5-00 P.M.

But unfortunately, the Bill at that time was not passed into an Act and it still remains a Bill. Therefore, so long as it remains a Bill, the State Government has no additional commitment. Sir I have on a previous occasion stated here that the Finance Commission has made recommendation and it has been mentioned in the President's order also, that when and if the Panchayet Raj Bill is passed. the commitment on th part of the State Government will have to be calculated while deciding the annual grants by the Central Government. That assurance is still there. And therefore, we need not worry about this omission on the part of the Finance Commission.

Sir, another point that was raised by Sri Suryanarayana Rao and also by Sri G. V. Gowda was the last increment that we gave in regard to the D.A. and compensatory allowances last years, was not included in the recommendations of the Finance Commission. Again, yesterday I tried to intervene and tell the Hon'ble Members that this is not a fact. Sir, it is true that the Finance Commission did not specifically include this. But in their letter, they have mentioned this commitment and the President's order takes into consideration the additional commitment on the part of the State Government to the extent of 2 crores. On account of this latest Government order giving increments in the D.A. I would like to draw their attention to the recommendation of the Finance Commission. According to the recommendation, the grant-in-aid should be 18 crores. But as I have mentioned in my Budget speech, it is 20 crores. So, this additional two crores is in respect of the additional commitment on the part of the State Government on account of D.A.

Sri G. V. GOWDA (Palya).—Our commitment is 14.76 crores. The entire commitment has not been taken into consideration.

Sri RAMAKRISHNA HEGDE.—Sir, it is not necessary and it does not happen always that whatever we represent is accepted *in toto* by the Finance Commission, but substantially they have accepted.

Sir, before I conclude on this point, I would like to quote a few sentences from the Finance Commission Report itself. That is in regard to the repayment of the loan and the conditions governing the loan services. It may take two or three minutes and I hope the Hon'ble Members will bear with me. The Chairman of the Finance Commission the Hon'ble Sri Rajamannar in a separate note appended to the Report has said as follows: And he has raised very fundamental points about the grants from the Central Government and I hope the Central Government sooner or later and better sooner, realises the importance of these

(SRI RAMAKRISHNA HEGDE)

suggestions and takes a definite decision and a final decision on this matter. He says:

"5. Article 275 provides for money grants by the Centre which are not referable to any particular taxes or duties, but which are directed to be made over to such states as Parliament may determine to be in need of assistance. *Ex facie,* there is nothing in this article which confines its opration to filling up of any gap. Actually this article has been construed as a residuary provision for grants to help the revenue gap of a particular State to be covered if the amounts payable to such States in accordance with the scheme of distribution of taxes and duties were not adequate.

'On a plain reading of the relevant articles of the Constitution, dealing with the distribution of revenues, and the functions of the Finance Commission, without being influenced by the events which have happened and the circumstances which have prevailed subsequent to the Constitution, two things appear to me to be clear, namely (i) The assignment of certain taxes and duties in their entirety, and the obligatory and permissive division regarding other taxes and duties, were intended to augment the resources of the States. The amounts allotted to each State in accordance with this scheme of devolution would form part of the revenues of that State. They would be included in the Consolidated Fund of the State along with its ordinary revenues, *i.e.* revenues to which it would be entitled as a matter of right. (ii) nowhere in these articles is there an express or implied indication that the total revenues of a State should be utilised only for revenue expenditure. Indeed it may be said that the more or less arbitrary division of expenditure into capital and revenue does not find a place as such in the Constitution though the Constitution draws a distinction between grants of capital and recurring sums and also between grants and loans. There is no indication either that the function of the Finance Commission is to be confined to the revenue part of the budgetary needs of the State. Article 275 which occurs in the same section relating to distribution of revenue between the union and the States, speaks of States which may be determined to be in need of assistance. It does not say assistance for filling up the revenue gap. On the other hand the 2 provisos to the clause (i) of article 275 expressly refer to capital and recurring sums to be paid as grant-in-aid of the revenues of a State. The first privoso unequivocally includes the cost of schemes of development as may be undertaken by the State. It is abundantly clear to my mind that the reference in the main part of clause (i) of

> article 275 to grants-in-aid of the revenues of States, is not confined to revenue expenditure only."
>
> (*P. 87-88—Extract from Report of Finance Commission*)

